ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 6 ಸೋಮವಾರ 2025

ಸಂಪುಟ: 45 | ಸಂಚಿಕೆ: 260 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಮೆಂಟ್ ಕಾಂಕ್ರಿಟ್ ಬ್ಯಾರಿಕೇಡ್‌ಗೆ ಸಿಲುಕಿ ಒದ್ದಾಡಿದ ಒಂಟಿಸಲಗ: ಜೆಸಿಬಿ ಬಳಸಿ ರಕ್ಷಣೆ

▶ ನಾಗರಹೊಳೆ ಕಾಡಂಚಿನ ಹೊಸಕೆರೆ ಬಳಿ ನಡೆದ ಘಟನೆ ▶ ರೇಡಿಯೋ ಕಾಲರ್ ಐಡಿಯುಳ್ಳ ಒಂಟಿಸಲಗ

ಮೈಸೂರು, ಜ.5(ಎಂಟಿವೈ)– ಕಾಡಂಚಿನ ಗ್ರಾಮಗಳ ಹೊಲ–ಗದ್ದೆಗಳಲ್ಲಿ ರೈತರು ಬೆಳೆದ ಫಸಲನ್ನು ತಿಂದು ಕಾಡಿಗೆ ಹೋಗುವಾಗ ಸಿಮೆಂಟ್ ಬ್ಯಾರಿಕೇಡ್‌ಗೆ ಸಿಲುಕಿ ಪರದಾಡುತ್ತಿದ್ದ ಒಂಟಿಸಲಗವೊಂದನ್ನು ಅರಣ್ಯ ಇಲಾಖೆಯ ತಂಡ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿರುವ ಘಟನೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಕಾಡಂಚಿನ ಗ್ರಾಮ ಹೊಸಕೆರೆ ಬಳಿ ನಡೆದಿದೆ.

ನಾಗರಹೊಳೆ ಅಭಯಾರಣ್ಯದ ವೀರನಹೊಸಳ್ಳಿ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಿಗೆ ಬಂದು ಹೋಗುವ ಪರಿಪಾಠ ಹೊಂದಿರುವ 40–45 ವರ್ಷದ ಒಂಟಿಸಲಗ ಎಂದಿನಂತೆ ಕಳೆದ ರಾತ್ರಿ ಕಾಡಿನಿಂದ ಹುಣಸೂರು ತಾಲೂಕಿನ ಮುದುಗನೂರು, ಹೊಸಕೆರೆ ಹಾಗೂ ಇನ್ನಿತರ ಗ್ರಾಮಗಳ ರೈತರಿಗೆ ಸೇರಿದ ಜಮೀನಿನಲ್ಲಿ ಫಸಲು ತಿಂದು ಕಾಡಿಗೆ ವಾಪಸ್ಸಾಗುವಾಗ ಹೊಸಕೆರೆ ಸಮೀಪ ಸಿಮೆಂಟ್ ಬ್ಯಾರಿಕೇಡ್‌ನ ಎರಡು ಪಿಲ್ಲರ್ ನಡುವೆ ಸಿಲುಕಿ ನರಳಾಡಿದೆ. ಇಂದು ಬೆಳಗ್ಗೆ ಹೊಸಕೆರೆ ಗ್ರಾಮಸ್ಥರು ಬ್ಯಾರಿಕೇಡ್‌ನ ಪಿಲ್ಲರ್ ನಡುವೆ ಸಿಲುಕಿ ಒದ್ದಾಡುತ್ತಿದ್ದ ಆನೆ ಕಂಡು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ನಾಗರಹೊಳೆಯ ವೀರನಹೊಸಳ್ಳಿ ಸಿಬ್ಬಂದಿಗಳು ತೆರಳಿ ಪಿಲ್ಲರ್‌ನಿಂದ ಬಿಡಿಸಲು ಪ್ರಯತ್ನಿಸಿದರು. ಆದರೆ, ಆನೆಯ ಹೊಟ್ಟೆ ಭಾಗ ಪಿಲ್ಲರ್‌ಗೆ ಸಿಲುಕಿದ್ದರಿಂದ ಆನೆ ಹಿಂದೆ ಅಥವಾ ಮುಂದೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅರ್ಧ ಗಂಟೆ ಪ್ರಯತ್ನಿಸಿದರೂ ಆನೆ ರಕ್ಷಣೆ ಸಾಧ್ಯವಾಗಲಿಲ್ಲ. ವಿಷಯ ತಿಳಿದು ನಾಗರಹೊಳೆಯ ಪಶುವೈದ್ಯ ಡಾ.ರಮೇಶ್ ಹಾಗೂ ವೀರನಹೊಸಳ್ಳಿ ಆರ್‌ಎಫ್‌ಓ ಅಭಿಷೇಕ್ ಮತ್ತಿತರರು ಸ್ಥಳಕ್ಕೆ ಬಂದು ಆನೆ ರಕ್ಷಣೆಗೆ ಪ್ರಯತ್ನಿಸಿದರು. ಆದರೆ, ಅದು ಸಾಧ್ಯವಾಗಲಿಲ್ಲ. ಸ್ಥಳೀಯರು ಆನೆಗೆ ಅರವಳಿಕೆ ಮದ್ದು ನೀಡಿ, ಬೆಲ್ಟ್‌ನಿಂದ ಮೇಲೆತ್ತುವಂತೆ ಸಲಹೆ ನೀಡಿದರು.

ಆದರೆ, ಪಿಲ್ಲರ್ ನಡುವೆ ಸಿಲುಕಿದ್ದ ಆನೆಗೆ ಅರವಳಿಕೆ ಮದ್ದು ನೀಡಿದರೆ, ಗಾಬರಿಯಿಂದ ಆನೆಗೆ ತೊಂದರೆಯಾಗುವ ಸಾಧ್ಯತೆ ಅರಿತ ಪಶುವೈದ್ಯ ಡಾ.ರಮೇಶ್, ಪಿಲ್ಲರ್ ಮುರಿದು ಆನೆಯನ್ನು ಹೊರಗೆ ತೆಗೆಯಲು ನಿರ್ಧರಿಸಿದರು. ಆದರೆ, ಸ್ಥಳೀಯರು ಬ್ಯಾರಿಕೇಡ್‌ನ ಪಿಲ್ಲರ್ ಮುರಿಯಲು ವಿರೋಧ ವ್ಯಕ್ತಪಡಿಸಿದರು. ಆದರೆ, ಆನೆಯ ಜೀವಕ್ಕೆ ಹಾನಿಯಾಗುವ ಸಾಧ್ಯತೆ ಇರುವುದರಿಂದ ಅನಿವಾರ್ಯವಾಗಿ ಪಿಲ್ಲರ್ ಮುರಿಯುವ ಅಥವಾ ಸಡಿಲಗೊಳಿಸುವ ಅನಿವಾರ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಬಳಿಕ ಜೆಸಿಬಿಯಲ್ಲಿ ಬ್ಯಾರಿಕೇಡ್‌ನ ■ 5ನೇ ಪುಟಕ್ಕೆ



ನಾಗರಹೊಳೆ ಅಭಯಾರಣ್ಯದ ಕಾಡಂಚಿನ ಗ್ರಾಮ ಹೊಸಕೆರೆ ಸಮೀಪ ಬ್ಯಾರಿಕೇಡ್‌ನ ಸಿಮೆಂಟ್ ಪಿಲ್ಲರ್‌ಗೆ ಸಿಲುಕಿದ್ದ ಕಾಡಾನೆ.

ಎರಡು ವರ್ಷದ ಹಿಂದೆಯೇ ಸೆರೆ ಸಿಕ್ಕಿದ್ದ ಕ್ರಾಪ್ ರೈಡರ್

ವೀರನಹೊಸಳ್ಳಿ, ಹೊಸಕೆರೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಹೊಲ–ಗದ್ದೆಗಳಲ್ಲಿ ಬೆಳೆದಿದ್ದ ಫಸಲನ್ನು ತಿನ್ನುವುದನ್ನೇ ರೂಢಿಸಿಕೊಂಡಿದ್ದ 40–45 ವರ್ಷದ ಗಂಡಾನೆಯನ್ನು ಎರಡು ವರ್ಷದ ಹಿಂದೆಯೇ ಸೆರೆ ಹಿಡಿದು, ರೇಡಿಯೋ ಕಾಲರ್ ಅಳವಡಿಸಿ ಕೇರಳ ಗಡಿ ಭಾಗದ ನಾಗರಹೊಳೆ ಅಭಯಾರಣ್ಯದಲ್ಲಿ ಬಿಡುಗಡೆ ಮಾಡಲಾಗಿತ್ತು. ಆದರೆ, ಆ ಆನೆ ಬಿಡುಗಡೆಯಾದ ಎರಡೇ ತಿಂಗಳಲ್ಲಿ ಮೂಲಸ್ಥಳ ವೀರನಹೊಸಳ್ಳಿ ವಲಯಕ್ಕೆ ವಾಪಸ್ಸಾಗಿತ್ತು. ಪ್ರತಿದಿನ ರಾತ್ರಿ ಕಾಡಿನಿಂದ ಗ್ರಾಮಗಳತ್ತ ಬಂದು, ಹೊಲ, ಗದ್ದೆಗಳಲ್ಲಿ ಬೆಳೆದಿದ್ದ ಬೆಳೆ ತಿಂದು, ಬೆಳಗಾಗುವ ವೇಳೆಗೆ ಕಾಡಿಗೆ ವಾಪಸ್ಸಾಗುತ್ತಿತ್ತು. ರೇಡಿಯೋ ಕಾಲರ್ ಕೊರಳಲ್ಲಿಯೇ ಇರುವ ಈ ಆನೆಗೆ ಕ್ರಾಪ್ ರೈಡರ್ ಎಂದು ಸಿಬ್ಬಂದಿಗಳು ಗುರುತಿಸಿದ್ದಾರೆ. ಆದರೆ, ಇಂದು ಮುಂಜಾನೆ ಬ್ಯಾರಿಕೇಡ್‌ನ ಪಿಲ್ಲರ್‌ಗೆ ಸಿಲುಕಿ ಒದ್ದಾಡಿದೆ. ಅರಣ್ಯ ಸಿಬ್ಬಂದಿಗಳ ಸಮಯಪ್ರಜ್ಞೆಯಿಂದ ಕಾಡಾನೆ ರಕ್ಷಣೆ ಮಾಡಲಾಗಿದೆ.

ಫೆ.4, ಕ್ರಾಂತಿವೀರ ಬ್ರಿಗೇಡ್ ಉದ್ಘಾಟನೆ

ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಘೋಷಣೆ

ವಿಜಯಪುರ, ಜ.5– ಫೆಬ್ರವರಿ 4 ರಂದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ 1,008 ಸಾಧು ಸಂತರ ಪಾದ ಪೂಜೆ ಮೂಲಕ ಕ್ರಾಂತಿವೀರ ಬ್ರಿಗೇಡ್ ಉದ್ಘಾಟನೆ ನಡೆಯಲಿದೆ ಎಂದು ಮಾಜಿ ಡಿಸಿಎಂ ಕೆಎಸ್ ಈಶ್ವರಪ್ಪ ಘೋಷಿಸಿದ್ದಾರೆ.



ವಿಜಯಪುರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 1 ಲಕ್ಷ ಜನ ಸೇರಿಸಿ ಕಾರ್ಯಕ್ರಮ ಮಾಡುತ್ತೇವೆ. ಇದಕ್ಕಾಗಿ ಜ.12ರಿಂದ ರಾಜ್ಯಾದ್ಯಂತ ಪ್ರವಾಸ ಮಾಡಿ ಬ್ರಿಗೇಡ್ ಬಗ್ಗೆ ಜಾಗೃತಿ ಮೂಡಿಸುತ್ತೇವೆ. ಬ್ರಿಗೇಡ್ ಅನ್ನು ಕನ್ನೇರಿ ಮಠದ ಶ್ರೀಗಳು ಹಾಗೂ ಕಾಗಿನೆಲೆ ಮಹಾ ಸಂಸ್ಥಾನದ ಕನಕ ಗುರುಪೀಠದ ತಿಂಥಣಿ ಶಾಖಾ ಮಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಉದ್ಘಾಟನೆ ಮಾಡುತ್ತಾರೆ. ರಾಜ್ಯದ ವಿವಿಧ ಭಾಗಗಳಿಂದ ಒಂದು ಲಕ್ಷ ಜನ ಸೇರುವ ಸಾಧ್ಯತೆ ಇದೆ ಎಂದರು.

ಹಿಂದೂ ಸಮಾಜದ ಪರವಾಗಿ ಬ್ರಿಗೇಡ್ ಹೋರಾಟ ಮಾಡಲಿದೆ. ಹಿಂದುಳಿದ ವರ್ಗದ ಸ್ವಾಮೀಜಿಗಳ ಪರ ಬ್ರಿಗೇಡ್ ಕೆಲಸ ಮಾಡಲಿದೆ. ನನ್ನ ಜೀವನದಲ್ಲಿ ನಾನು ರಾಜಕಾರಣದ ಜೊತೆ ಜೊತೆಗೆ ಸಾಧು ಸಂತರ ಸೇವೆ ಮಾಡಿದ್ದೇನೆ. ಬ್ರಿಗೇಡ್ ಸ್ಥಾಪನೆ ಮಾಡುವ ಮುಖ್ಯ ಉದ್ದೇಶ ಹಿಂದುಳಿದ ಮಠಗಳ ಅಭಿವೃದ್ಧಿ. ಹಿಂದೂಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ನಮ್ಮ ಹೋರಾಟ ಇರಲಿದೆ ಎಂದು ಹೇಳಿದರು.

ರಾಜಕಾರಣದ ಜೊತೆಗೆ ಧಾರ್ಮಿಕ ಕಾರ್ಯದಲ್ಲೂ ನಾನು ಭಾಗಿಯಾಗುತ್ತಿದ್ದೇನೆ. ಈ ಹಿಂದೆ ಮಠ, ಮಂದಿರಗಳಿಗೆ ಹಣ ನೀಡುವಂತೆ ಮಾಡಿದ್ದು ನಾನೇ. ಹೀಗಾಗಿ ನಾನು ಧಾರ್ಮಿಕ ಕೆಲಸ ಮಾಡುತ್ತಿದ್ದೇನೆ ಎಂದರು.

ಮೋಸ್ಟ್ ವಾಂಟೆಡ್ ಆರು ನಕ್ಸಲರು ಶರಣಾಗತಿಗೆ ನಿರ್ಧಾರ

ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಮುಖ್ಯವಾಹಿನಿಗೆ ಬರಬೇಕೆಂದು ಸಿಎಂ ಸಿದ್ದರಾಮಯ್ಯ ಕರೆ ನೀಡಿದ್ದರು

'ಶಾಂತಿಗಾಗಿ ನಾಗರಿಕ ವೇದಿಕೆ'ಗೆ ನಕ್ಸಲರು ಪತ್ರ

- ಸರ್ಕಾರದ ಮುಂದೆ 7 ಬೇಡಿಕೆಗಳು
- ಮೂರು ದಿನದಲ್ಲಿ ಶರಣಾಗುವ ಸಾಧ್ಯತೆ

ಚಿಕ್ಕಮಗಳೂರು, ಜ. 5– ನಕ್ಸಲೀಯರು ಮುಖ್ಯವಾಹಿನಿಗೆ ಬರಬೇಕೆಂದು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದ ಬೆನ್ನಲ್ಲೇ ಕರ್ನಾಟಕ ಸೇರಿದಂತೆ ಕೇರಳ, ಆಂಧ್ರಕ್ಕೆ ಬೇಕಾಗಿದ್ದ ಮೋಸ್ಟ್ ವಾಂಟೆಡ್ ಆರು ನಕ್ಸಲರು ಚಿಕ್ಕಮಗಳೂರಿನ ಜಿಲ್ಲಾಡಳಿತ ಮುಂದೆ ಶರಣಾಗತಿಗೆ ನಿರ್ಧರಿಸಿದ್ದಾರೆ. ಕರ್ನಾಟಕ ನಕ್ಸಲ್ ತುಂಗಾ ದಳದ ನಾಯಕಿ ಮುಂಡಗಾರು ಲತಾ, ಸುಂದರಿ, ವನಜಾಕ್ಷಿ, ದಕ್ಷಿಣ ಭಾರತದ ಮೋಸ್ಟ್ ವಾಂಟೆಡ್ ನಕ್ಸಲ್ ಜೀಶ, ಆಂಧ್ರಪ್ರದೇಶದ ಕೆ. ವಸಂತ, ಮಾರೆಪ್ಪ ಅರೋಲಿ ಶರಣಾಗತಿಗೆ ನಿರ್ಧರಿಸಿದ್ದು, ಮೂರು ದಿನಗಳಲ್ಲಿ ಆರು ನಕ್ಸಲರು ಶರಣಾಗುವ ಸಾಧ್ಯತೆ ಇದೆ. ಆದರೆ ತಾವು ಶರಣಾಗಲು ನಕ್ಸಲರು ಸರ್ಕಾರದ ಮುಂದೆ 7 ಬೇಡಿಕೆಗಳನ್ನಿಟ್ಟಿದ್ದಾರೆ.



ಸಂಗ್ರಹ ಚಿತ್ರ

ಈ ಬಗ್ಗೆ 'ಶಾಂತಿಗಾಗಿ ನಾಗರಿಕ ವೇದಿಕೆ'ಗೆ ನಕ್ಸಲರು ಪತ್ರ ಬರೆದಿದ್ದಾರೆ. ಸಿಎಂ ಸಿದ್ದರಾಮಯ್ಯ ಜೊತೆ ನಾಗರಿಕ ವೇದಿಕೆಯ ಸದಸ್ಯರು ಚರ್ಚಿಸಿದ್ದಾರೆ. ಕಳೆದ 3 ತಿಂಗಳಿನಿಂದ ಚಿಕ್ಕಮಗಳೂರು, ಉಡುಪಿ ಭಾಗದಲ್ಲಿ ನಕ್ಸಲ್ ಚಟುವಟಿಕೆಗಳು ಕಂಡುಬಂದಿದ್ದವು.

ನಕ್ಸಲರ 7 ಬೇಡಿಕೆಗಳು: ನಕ್ಸಲರು ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆಯು ಘನತೆಯುತವಾಗಿ ನಡೆಯಬೇಕು ಹಾಗೂ ಅವರ ಆತ್ಮಗೌರವಕ್ಕೆ ಯಾವುದೇ ಧಕ್ಕೆಯಾಗಬಾರದು. ಹೋರಾಟದ ಮಾರ್ಗವನ್ನು ಬದಲಾಯಿಸಿ, ಪ್ರಜಾತಾಂತ್ರಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯಾವುದೇ ರೀತಿಯ ತಡೆಯಾಗಬಾರದು.

- ನಕ್ಸಲೀಯರು ಹೊರಬಂದ ನಂತರ ಜೈಲುಗಳಲ್ಲಿ ಕೊಳೆಯುವ ಸ್ಥಿತಿ ಎದುರಾಗಬಾರದು, ಯಾವುದೇ ಸಂಬಂಧವಿಲ್ಲದ ಕೆಲವು ಪ್ರಕರಣಗಳಲ್ಲಿ ಅವರ ಹೆಸರುಗಳನ್ನು ಸೇರಿಸಿದ್ದು, ಈ ಪ್ರಕರಣಗಳ ಜಾಲದಿಂದ ಮುಕ್ತಿ ಸಿಗಬೇಕು ಹಾಗೂ ■ 5ನೇ ಪುಟಕ್ಕೆ

ಕಾಂತರಾಜು ಸಮಿತಿ ವರದಿ ಅನುಷ್ಠಾನದ ವಿಚಾರ ಮುಂದಿನ ಕ್ಯಾಬಿನೆಟ್‌ನಲ್ಲಿ ಚರ್ಚೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟ

ದಾವಣಗೆರೆ, ಜ.5– ಸಮಸಮಾಜ ನಿರ್ಮಾಣ ಮಾಡಬೇಕೆಂದರೆ ಜಾತಿ ಜನಗಣತಿಯಿಂದ ಮಾತ್ರ ಸಾಧ್ಯ. ನಾನು ಜಾತಿ ಜನಗಣತಿ ಪರವಾಗಿದ್ದೇನೆ. ಕಾಂತರಾಜು ಸಮಿತಿ ವರದಿಯನ್ನು ಮುಂದಿನ ಕ್ಯಾಬಿನೆಟ್‌ನಲ್ಲಿಟ್ಟು ಚರ್ಚಿಸುವ ಉದ್ದೇಶವಿದೆ. ವರದಿ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.




ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ನಡೆದ ಕನಕದಾಸ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಕದಾಸರು ಕುರುಬ ಜಾತಿಯಲ್ಲಿ ಹುಟ್ಟಿ, ಜಾತಿ ರಹಿತ ಸಮಸಮಾಜಕ್ಕಾಗಿ ಹೋರಾಡಿದ ಜಾತ್ಯತೀತ ಸಂತ. ಮನುಕುಲದ ಏಳಿಗೆಗಾಗಿ ಶ್ರಮಿಸಿ ದಾಸ ಶ್ರೇಷ್ಠರಾದರು ಎಂದು ಸ್ಮರಿಸಿದರು. ಶರಣ ಸಾಹಿತ್ಯದಲ್ಲಿ ಬಸವಣ್ಣ, ದಾಸ ಸಾಹಿತ್ಯದಲ್ಲಿ ಕನಕದಾಸರು ಅತ್ಯಂತ ಪ್ರಮುಖರು. ಬುದ್ಧನಿಂದ ಕನಕದಾಸರವರೆಗೂ, ಆ ನಂತರವೂ ಬಹಳ ಪುಣ್ಯಾತ್ಮರು ಜಾತಿರಹಿತ ಸಮಾಜಕ್ಕಾಗಿ ಶ್ರಮಿಸಿದ್ದಾರೆ. ಅಂಬೇಡ್ಕರ್, ■ 5ನೇ ಪುಟಕ್ಕೆ

ಖ್ಯಾತ ಹಿರಿಯ ಸಾಹಿತಿ ಡಾ. ನಾ. ಡಿಸೋಜ ನಿಧನ

ಶಿವಮೊಗ್ಗ, ಜ. 5– ಖ್ಯಾತ ಹಿರಿಯ ಸಾಹಿತಿ ಡಾ. ನಾ. ಡಿಸೋಜ ಅವರು ಇಂದು ಸಂಜೆ 7.50ಕ್ಕೆ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅವರ ಪಾರ್ಥಿವ ಶರೀರವನ್ನು ನಾಳೆ(ಜ.6) ಮಧ್ಯಾಹ್ನದ ನಂತರ ಸಾಗರದ ಅವರ ಸ್ವಗೃಹದಲ್ಲಿ ಸಾರ್ವಜನಿಕ ವೀಕ್ಷಣೆಗೆ ಇಡಲಾಗುವುದು ಎಂದು ನಾ.ಡಿಸೋಜ ಅವರ ಪುತ್ರ ನವೀನ್ ನಾ.ಡಿಸೋಜ ತಿಳಿಸಿದ್ದಾರೆ.

ಡಾ. ನಾರ್ಬಟ್ ಡಿಸೋಜರವರು 1937 ಜೂನ್ 6ರಂದು ಜನಿಸಿದರು. ತಂದೆ ಎಫ್.ಪಿ.ಡಿಸೋಜ, ತಾಯಿ ರೂಪಿನಾ ಡಿಸೋಜ. ನಾ.ಡಿಸೋಜರವರು ಈವರೆಗೆ 37 ಕಾದಂಬರಿಗಳು, ನಾಲ್ಕು ನಾಟಕಗಳು,



ಇಪ್ಪತ್ತೆಂಟು ಮಕ್ಕಳ ಕೃತಿಗಳು ಸೇರಿದಂತೆ ನೂರಾರು ಕತೆಗಳನ್ನು ಬರೆದಿದ್ದಾರೆ.

ಇವರ ಕಾದಂಬರಿ 'ಕಾಡಿನ ಬೆಂಕಿ' ಹಾಗೂ 'ದ್ವೀಪ' ಚಲನಚಿತ್ರಗಳಾಗಿ 'ರಜತ ಕಮಲ' ಹಾಗೂ 'ಸ್ವರ್ಣಕಮಲ' ಪ್ರಶಸ್ತಿಗಳನ್ನು ಪಡೆದುಕೊಂಡಿವೆ. 'ಬಳುವಳಿ' ಕಾದಂಬರಿ ■ 5ನೇ ಪುಟಕ್ಕೆ

ಮಾನವಹಕ್ಕುಗಳ ಆಯೋಗಕ್ಕೆ ಸಿಟಿ ರವಿ ದೂರು: ಡಿಕೆಶಿ, ಬಾದರ್ಲಿ, ಹೆಬ್ಬಾಳ್ಕರ್ ವಿರುದ್ಧ ಗಂಭೀರ ಆರೋಪ

ಬೆಂಗಳೂರು, ಜ.5 ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ರಾಷ್ಟ್ರೀಯ ಮಾನವಹಕ್ಕುಗಳ ಆಯೋಗಕ್ಕೆ ಇ–ಮೇಲ್ ಮೂಲಕ 13 ಪುಟಗಳ ದೂರನ್ನು ಸಲ್ಲಿಸಿದ್ದು, ಬಂಧನದ ವೇಳೆ ತಮ್ಮ ಮೇಲೆ ನಡೆದ ಪೊಲೀಸ್ ದೌರ್ಜನ್ಯದಲ್ಲಿ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ಆರೋಪಿಸಿದ್ದಾರೆ.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ವಿಧಾನಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಬಸವನಗೌಡ ಬಾದರ್ಲಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಕಾರ್ಯದರ್ಶಿ ಮತ್ತು ಅವರ ಪಿಎಗಳು ಹಾಗೂ ಹಿರೇಬಾಗೇವಾಡಿ ಸಿಪಿಐ ರಾಜು ಪಾಟೀಲ್ ಹೆಸರನ್ನು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಡಾ. ಪರಮೇಶ್ವರ್, ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಕಾರ್ಯದರ್ಶಿ ಹಿಂಸೆ ತಡೆಯುವಲ್ಲಿ ವಿಫಲರಾಗಿದ್ದಾರೆ. ಪೊಲೀಸ್ ಅಧಿಕಾರಿಗಳ ವಿರುದ್ಧ ಡಿಜಿಪಿ ಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಆರೋಪ ಮಾಡಿದ್ದಾರೆ. ಒಂದೆಡೆ ಸಿಐಡಿ, ದಾಖಲೆಗಳನ್ನು ಸಂಗ್ರಹಿಸುತ್ತಿದ್ದು, ಸಿ.ಟಿ.ರವಿಗೂ ನೋಟಿಸ್ ಕೊಡಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಮತ್ತೊಂದೆಡೆ ರಾಜ್ಯಪಾಲರಿಗೆ, ಡಿಐಜಿ ■ 5ನೇ ಪುಟಕ್ಕೆ

ಸಂವಿಧಾನಕ್ಕೆ ತಿದ್ದುಪಡಿ ತರಲು ಅವಕಾಶವಿದೆಯೇ ಹೊರತು ಬದಲಾವಣೆ ಅಸಾಧ್ಯ

ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅಭಿಪ್ರಾಯ

- ಸಂವಿಧಾನ ಅಧ್ಯಯನ ಮಾಡಿದರೆ ಜ್ಞಾನ ವೃದ್ಧಿಯಾಗುತ್ತದೆ
- ಸಂವಿಧಾನದಲ್ಲಿ ಪ್ರತಿಯೊಬ್ಬರೂ ಸಮಾನರು
- ಭಾರತ ಸಂವಿಧಾನ ವಿಶ್ವದಲ್ಲೇ ಅಗ್ರಸ್ಥಾನದಲ್ಲಿದೆ

ಮೈಸೂರು, ಜ.5(ಬಿಎಲ್‌ಯು)– ಭಾರತ ದೇಶದ ಆತ್ಮವಾದ ಸಂವಿಧಾನಕ್ಕೆ ತಿದ್ದುಪಡಿ ತರಲು ಅವಕಾಶ ಇದೆಯೇ ಹೊರತು ಬದಲಾವಣೆ ಮಾಡಲು ಸಾಧ್ಯವೇ ಇಲ್ಲ ಎಂದು ಬಿಹಾರದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅಭಿಪ್ರಾಯಪಟ್ಟರು.

ಮೈಸೂರು ಮೆಡಿಕಲ್ ಕಾಲೇಜಿನ ಐಎಂಎ ಸಭಾಂಗಣದಲ್ಲಿ ಇಂದು 'ಸಂವಿಧಾನ ಬದಲಾಯಿಸಿದ್ದು ಯಾರು?' ಎಂಬ ಪುಸ್ತಕ ಕುರಿತು ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ಆಯೋಜಿಸಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಆತ್ಮರೂಪವಾದ ಸಂವಿಧಾನದಲ್ಲಿ ಪರಮಾತ್ಮನಿದ್ದಾನೆ ಎಂದರು.

ಸಂವಿಧಾನದ ಕರಡು ಸಮಿತಿ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರು ಸ್ವಾತಂತ್ರ್ಯ ದೊರೆತ ಮೂರು ವರ್ಷದ ನಂತರ ಸಂವಿಧಾನ ತಯಾರು ಮಾಡಿ ಅರ್ಪಿಸಿದರು. ಸಂವಿಧಾನಕ್ಕೆ ಕೆಲವು ತಿದ್ದುಪಡಿ ತರಲು ಅವಕಾಶ ಇದೆಯೇ ಹೊರತು ಬದಲಾವಣೆ ಮಾಡಲು ಸಾಧ್ಯವೇ ಇಲ್ಲ ಎಂದು ಆರಿಫ್ ಮೊಹಮ್ಮದ್ ಖಾನ್ ತಿಳಿಸಿದರು.



ಮೈಸೂರು ಮೆಡಿಕಲ್ ಕಾಲೇಜಿನ ಐಎಂಎ ಸಭಾಂಗಣದಲ್ಲಿ ಭಾನುವಾರ ಸಂವಿಧಾನ ಬದಲಾಯಿಸಿದ್ದು ಯಾರು ಎಂಬ ಪುಸ್ತಕ ಕುರಿತು ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ಆಯೋಜಿಸಿದ್ದ ಗೋಷ್ಠಿಯಲ್ಲಿ ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಮಾತನಾಡಿದರು.

ಭಾರತದ ಸಂವಿಧಾನದ ಬಗ್ಗೆ ಸಂಶೋಧನೆ ಮಾಡಿದರೆ ತಿಳುವಳಿಕೆ ಮೂಡಿ ಜ್ಞಾನ ವೃದ್ಧಿಯಾಗುತ್ತದೆ. ಸಂವಿಧಾನದ ಬಗ್ಗೆ ಅಧ್ಯಯನ ಮಾಡಿದರೆ ಭಾರತದ ಶಕ್ತಿ ಅನಾವರಣಗೊಳ್ಳುತ್ತದೆ. ಅಷ್ಟರ ಮಟ್ಟಿಗೆ ಭಾರತದ ಸಂವಿಧಾನ ವಿಶ್ವದಲ್ಲೇ ■ 5ನೇ ಪುಟಕ್ಕೆ

ಕಾಂಗ್ರೆಸ್ ಸುಡುವ ಮನೆ, ಅಲ್ಲಿಗೆ ಯಾರೂ ಹೋಗಬೇಡಿ ಎಂದಿದ್ದರು ಅಂಬೇಡ್ಕರ್

ಕಾಂಗ್ರೆಸ್ ಸುಡುವ ಮನೆಯಾಗಿದ್ದು, ಯಾರೂ ಅಲ್ಲಿಗೆ ಹೋಗಬಾರದು ಎಂದು ಸ್ವತಃ ಡಾ.ಅಂಬೇಡ್ಕರ್ ಅವರೇ ಎಚ್ಚರಿಸಿದ್ದರು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದರು.

ಭಾರತದ ಸಂವಿಧಾನದಲ್ಲಿ ಈ ತನಕ 106 ಬಾರಿ ತಿದ್ದುಪಡಿ ಮಾಡಿದ್ದು, ಇದರಲ್ಲಿ 76 ಬಾರಿ ಕಾಂಗ್ರೆಸ್ ಸರ್ಕಾರ ತಿದ್ದುಪಡಿ ಮಾಡಿದೆ. ಆದರೆ ಜನರಿಗೆ ತಪ್ಪು ತಿಳುವಳಿಕೆ ಮೂಡಿಸುತ್ತಿರುವ ಕಾಂಗ್ರೆಸ್, ಬಿಜೆಪಿ ಸಂವಿಧಾನ ಬದಲಾವಣೆ ಮಾಡುತ್ತದೆ ಎಂದು ಅಪಪ್ರಚಾರ ಮಾಡುತ್ತಿದೆ ಎಂದು ಕಿಡಿಕಾರಿದರು.

ಪರಿಶಿಷ್ಟ ಜಾತಿ ಮತ್ತು ವರ್ಗದವರನ್ನು ಕಾಂಗ್ರೆಸ್ ಓಟ್ ಬ್ಯಾಂಕ್‌ಗಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಗುಲಾಮಗಿರಿ ಸಂಸ್ಕೃತಿ ಹೊಂದಿರುವ ಕಾಂಗ್ರೆಸ್ ಕಪಿಮುಷ್ಟಿಯಿಂದ ದಲಿತ ಸಮುದಾಯ ಹೊರಗೆ ಬರಬೇಕು. ಇಲ್ಲವೆಂದರೆ ಬದುಕಿನುದ್ದಕ್ಕೂ ಕಾಂಗ್ರೆಸ್ ನಿಮ್ಮನ್ನು ಮತ ಬ್ಯಾಂಕ್‌ಗಾಗಿ ಬಳಕೆ ಮಾಡಿಕೊಳ್ಳುತ್ತಲೆ ಇರುತ್ತದೆ ಎಂದು ಎಚ್ಚರಿಸಿದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಹಣಕಾಸು ಖಾತೆ ಕೇಳಿದರೆ ನೆಹರು ಅವರು ಕಾನೂನು ಖಾತೆ ನೀಡಿದರು. ಇಷ್ಟೇ ಅಲ್ಲದೆ ಚುನಾವಣೆಯಲ್ಲಿ ಎರಡು ಬಾರಿ ಸೋಲಿಸಿದ್ದರು. ಅಂಬೇಡ್ಕರ್ ಅವರಿಗೆ ಭಾರತ ರತ್ನ ಕೂಡ ನೀಡಲಿಲ್ಲ. ಆದರೆ ವಿ.ಪಿ.ಸಿಂಗ್ ನೇತೃತ್ವದ ಸರ್ಕಾರ ಅಂಬೇಡ್ಕರ್ ಅವರಿಗೆ ಭಾರತ ರತ್ನ ನೀಡಿತು. ಅಂಬೇಡ್ಕರ್ ಬಗ್ಗೆ ಪ್ರೀತಿ ಇಲ್ಲದ ಕಾಂಗ್ರೆಸ್ ಪಕ್ಷವನ್ನು ನೀವು ನಂಬುತ್ತೀರಾ ಎಂದು ಗೋವಿಂದ ಕಾರಜೋಳ ಪ್ರಶ್ನಿಸಿದರು.

ರಾಜ್‌ಘಾಟ್ ಪೂರ್ಣ ಜಾಗವನ್ನು ಗಾಂಧಿ ಕುಟುಂಬ ಆವರಿಸಿಕೊಂಡಿದೆ. ಅಂಬೇಡ್ಕರ್ ಅವರ ಅಂತ್ಯಕ್ರಿಯೆಗಾಗಿ ಜಾಗ ಕೂಡ ನೀಡಲಿಲ್ಲ. ದಲಿತ ಸಮುದಾಯದ ಬಗ್ಗೆ ಕಾಂಗ್ರೆಸ್‌ಗಿರುವ ಮನೋಭಾವವನ್ನು ಇದು ತೋರಿಸುತ್ತದೆ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಯಾವುದೇ ಅಧಿಕಾರವಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಸೋನಿಯಾ, ರಾಹುಲ್ ಹಾಗೂ ಪ್ರಿಯಾಂಕಾ ಗಾಂಧಿ ಅವರೇ ಸರ್ವಾಧಿಕಾರಿಗಳು. ದಲಿತರ ಬಗ್ಗೆ ಕಾಂಗ್ರೆಸ್ ಹೊಂದಿರುವ ಸೂಕ್ಷ್ಮತೆಯನ್ನು ಈಗಲಾದರೂ ಅರಿಯಬೇಕು ಎಂದು ಗೋವಿಂದ ಕಾರಜೋಳ ದಲಿತ ಸಮುದಾಯಕ್ಕೆ ಸಲಹೆ ನೀಡಿದರು.

ಭಾರತ ಸಂವಿಧಾನ ಎನ್ನುವ ಬದಲು ಇಂದಿರಾ ಸಂವಿಧಾನ ಎನ್ನಬಹುದು

ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಈ ತನಕ 76 ತಿದ್ದುಪಡಿಗಳನ್ನು ಮಾಡಿದ್ದು, ಇದನ್ನು ಭಾರತ ಸಂವಿಧಾನ ಎನ್ನುವ ಬದಲು ಇಂದಿರಾ ಗಾಂಧಿ ಸಂವಿಧಾನ ಎನ್ನಬಹುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಲೇವಡಿ ಮಾಡಿದರು.

ಸಂಸದ ಯದುವೀರ್ ಲೇವಡಿ

ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಆರ್ಟಿಕಲ್ 368 ಕ್ಕೆ ಕಾಂಗ್ರೆಸ್‌ನವರು ತಿದ್ದುಪಡಿ ಮಾಡಿದ್ದಾರೆ. ಈ ಮೂಲಕ ಸಂವಿಧಾನದ ತಿದ್ದುಪಡಿಯನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದಾರೆ ಎಂದು ಟೀಕಿಸಿದರು.

ಸಂವಿಧಾನದ ವಿಚಾರ ಬಂದಾಗ ಮೈಸೂರು ಇತಿಹಾಸ ತಿಳಿಯುವುದು ಅತ್ಯವಶ್ಯ. ಸಂವಿಧಾನದ ಮೂಲವೇ ಮೈಸೂರು ರಾಜ್ಯವಾಗಿದೆ. 1918 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಿಲ್ಲರ್ ■ 5ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 6 ಜನವರಿ 2025

ಅಂಬೇಡ್ಕರ್ ಭವನ ಕಾಮಗಾರಿ ಅಪೂರ್ಣ : ಎಎಪಿ ಕಿಡಿ



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಅಂಬೇಡ್ಕರ್ ಭವನದ ಕಾಮಗಾರಿ ಅಪೂರ್ಣಗೊಂಡಿರುವುದನ್ನು ಕಾಣಬಹುದು.

ಮೈಸೂರು,ಜ.5(ಜಿಎ)–ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ಅಂಬೇಡ್ಕರ್ ಭವನದ ಬಾಕಿ ಕಾಮಗಾರಿಯನ್ನು ಸರ್ಕಾರ ಶೀಘ್ರವಾಗಿ ಪೂರ್ಣಗೊಳಿಸದಿದ್ದರೆ, ಜನರೇ ಚಂದಾ ಸಂಗ್ರಹಿಸಿ ಪೂರ್ಣಗೊಳಿಸುತ್ತಾರೆ ಎಂದು ಅಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ರಂಗಯ್ಯ ಕಿಡಿಕಾರಿದ್ದಾರೆ.

ಹಲವಾರು ವರ್ಷಗಳಿಂದ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸದಿರುವುದು ಮಹಾನಾಯಕನಿಗೆ ಮಾಡಿರುವ ಅವಮಾನ. ಭಾಷಣಗಳಲ್ಲಿ ಮಾತ್ರ ಮಹಾನಾಯಕನಿಗೆ ಗೌರವ ಸಲ್ಲಿಸಿ, ಕಾರ್ಯದಲ್ಲಿ ಅವಮಾನಿಸುತ್ತಿದ್ದಾರೆ. ಹಿಂದುಳಿದ ನಾಯಕ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಇದು ಕಾಣಿಸುತ್ತಿಲ್ಲವೇ ಎಂದು ಪ್ರಶ್ನಿಸಿ, ಅಂಬೇಡ್ಕರ್ ಸಿದ್ಧಾಂತವನ್ನ ಪ್ರತಿಪಾದಿಸುವ ಜಿಲ್ಲಾ ಉಸ್ತುವಾರಿ ಸಚಿವರಿಗೆ ಕಣ್ಣಿಲ್ಲವೇ ಎಂದು ದೂರಿದ್ದಾರೆ.

20ರಿಂದ 25 ಕೋಟಿ ರೂ. ವೆಚ್ಚದಲ್ಲಿ ಬಾಕಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ನಿಮ್ಮ ಬಳಿ ಹಣವಿಲ್ಲವಾದರೆ, ಜನಕ್ಕೆ ಹೇಳಿ ಜನರೇ ಚಂದಾ ಸಂಗ್ರಹಿಸಿ, ಕಾಮಗಾರಿ ಪೂರ್ಣಗೊಳಿಸುತ್ತಾರೆ. ಈಗಾಗಲೇ ಭವನದ ಬಳಿ ಗಿಡಗಂಟಿಗಳು ಬೆಳೆದು ನಿಂತಿದ್ದು, ಕಸದ ರಾಶಿ ಬಿದ್ದಿದೆ. ಈಗಲಾದರೂ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಪ್ರಕಟಣೆ ತಿಳಿಸಿದ್ದಾರೆ.

ಮಡಿವಾಳರ ಸಂಘದ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಜ.5(ಎಂಟಿವೈ)– ಕರ್ನಾಟಕ ರಾಜ್ಯ ಮಡಿವಾಳರ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜರುಗಿತು.


ಈ ವೇಳೆ ಕ್ಯಾಲೆಂಡರ್ ಬಿಡುಗಡೆ ಮಾಡಿದ ಕಾಂಗ್ರೆಸ್ ಮುಖಂಡ ಎನ್.ಆರ್. ನಾಗೇಶ್ ಮಾತನಾಡಿ, ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಕ್ಷಣ ಕೊಡಿಸಲು ಪೋಷಕರು ಮುಂದಾಗಬೇಕು. ಶಿಕ್ಷಣ ಪಡೆಯುವುದರಿಂದ ಮಾತ್ರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಏಳಿಗೆ ಸಾಧಿಸಲು ಸಾಧ್ಯ. ಇದನ್ನು ಗಂಭೀರವಾಗಿ ಪರಿಗಣಿಸಿ ಶೋಷಿತ ಹಾಗೂ ಹಿಂದುಳಿದ ವರ್ಗಗಳು ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸಮುದಾಯದ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಮುದಾಯದ ಮುಖಂಡರು ಹಾಗೂ ಕರ್ನಾಟಕ ರಾಜ್ಯ ಮಡಿವಾಳರ ಸಂಘ ಪದಾಧಿಕಾರಿಗಳಾದ ಬಿ.ಜಿ.ಕೇಶವ, ಸುರೇಶ್, ಚನ್ನಕೇಶವ, ನಾಗರಾಜು, ಮಂಜು, ಶ್ರೀಕಾಮತ್, ನಿಂಗರಾಜು ಇನ್ನಿತರರು ಉಪಸ್ಥಿತರಿದ್ದರು.

ಬ್ಯಾಂಕಿಂಗ್ ಪರೀಕ್ಷೆಗಳ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಜ.5–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ ಮತ್ತು ಇತರ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಜನವರಿ 8ರೊಳಗೆ ಕಚೇರಿ ದೂ.ಸಂ: 0821–2515944 ಅನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಕರಾಮುವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಬಿ.ಲಿಂಗರಾಜು ಮೈಸೂರು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ



ಮೈಸೂರು ತಾಲೂಕು ಕೃಷಿಕ ಸಮಾಜಕ್ಕೆ 2025–26ನೇ ಸಾಲಿನ 5 ವರ್ಷದ ಅವಧಿಗೆ ಅಧ್ಯಕ್ಷರಾಗಿ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷರಾಗಿ ಹಾರೋಹಳ್ಳಿ ಎನ್.ಮಹದೇವಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಚುಂಚರಾಯನಹುಂಡಿ ಸಿ.ಜಿ.ಶಿವಶಂಕರ್, ಖಜಾಂಚಿಯಾಗಿ ಇಲವಾಲ ಗೋವಿಂದಸ್ವಾಮಿ, ಜಿಲ್ಲಾ ಪ್ರತಿನಿಧಿಯಾಗಿ ಚಿಕ್ಕಳ್ಳಿ ಎಂ.ಕುಮಾರ್ ಅವಿರೋಧವಾಗಿ ಆಯ್ಕೆಯಾದರು. ಕೃಷಿಕ ಸಮಾಜದ ನಿರ್ದೇಶಕರಾದ ಕಲ್ಲೂರು ನಾಗನಹಳ್ಳಿ ಕೆ.ಬಸವರಾಜು, ಕುಂಬಾರಕೊಪ್ಪಲು ಶಿವಮಾದು, ಕೀಳನಪುರ ಕೆ.ಎಸ್.ಮಾದಪ್ಪ, ದೇವಲಾಪುರ ಎಲ್.ಲಿಂಗರಾಜು, ಮಾಧವಗೆರೆ ಎಂ.ರವಿ, ತಳೂರು ಟಿ.ಪಿ.ನಂಜುಂಡಸ್ವಾಮಿ, ಕುಂಬಾರಕೊಪ್ಪಲು ದೇವರಾಜೇಗೌಡ ಉಪಸ್ಥಿತರಿದ್ದರು. ಬಿ.ಡಿ.ಜಯರಾಮು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಕರ್ನಾಟಕ ಸೇನಾಪಡೆಯ ಕ್ಯಾಲೆಂಡರ್ ಬಿಡುಗಡೆ



ಕರ್ನಾಟಕ ಸೇನಾಪಡೆಯ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮೈಸೂರು, ಜ. 5–ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ.ಭಾಷ್ಯಂ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಬಿಡುಗಡೆ ಮಾಡಿದರು.

ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಶ್ರೀನಿವಾಸ್, ಡಾ.ರಘುರಾಂ ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಸಿ.ಜಿ.ಗಂಗಾಧರ್, ಎಂ.ಬಿ.ಮಂಜೇಗೌಡ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಎಂ.ಎನ್.ದೊರೆಸ್ವಾಮಿ, ಮಡ್ಡೀಕೆರೆ ಗೋಪಾಲ್, ಶ್ರೀ ಲಕ್ಷ್ಮಿನಾರಾಯಣ ಶೆಣೈ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಡಾ.ಮೊಗಣ್ಣಾಚಾರ್, ಡಾ.ಶಾಂತರಾಜೇಅರಸ್, ಕೃಷ್ಣಪ್ಪ, ಪ್ರಭುಶಂಕರ, ನೇಹಾ, ಪ್ರಜೀಶ್, ನಾಗರಾಜು, ವರಕೂಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಹನುಮಂತಯ್ಯ, ಸುಬ್ಬೇಗೌಡ, ಡಾ.ನರಸಿಂಹೇಗೌಡ, ಪದ್ಮಾ, ಪ್ರಭಾಕರ್, ಶಿವಲಿಂಗಯ್ಯ, ನಂದಕುಮಾರ್, ಕುಮಾರ್, ರಘು ಅರಸ್, ಮಹಾದೇವಸ್ವಾಮಿ, ಗಣೇಶ್‌ಪ್ರಸಾದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ರಾಷ್ಟ್ರಕವಿ ಕುವೆಂಪು ಅವರ 120 ಜಯಂತೋತ್ಸವ

ಶ್ರೀ ರಾಮಾಯಣ ದರ್ಶನಂ ಕುವೆಂಪು ಕೀರ್ತಿ ಹೆಚ್ಚಿಸಿದ ಮಹಾಕಾವ್ಯ

ಹಿರಿಯ ಸಾಹಿತಿ ಪ್ರೊ.ಎನ್.ಬೋರಲಿಂಗಯ್ಯ ಅಭಿಮತ

ಮೈಸೂರು,ಜ.5(ಎಸ್‌ಪಿಎನ್)– 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ರಾಷ್ಟ್ರಕವಿ ಕುವೆಂಪು ಅವರ ಕೀರ್ತಿ ಹೆಚ್ಚಿಸಿದ ಮಹಾಕಾವ್ಯ ಎಂದು ಹಿರಿಯ ಸಾಹಿತಿ ಪ್ರೊ.ಎನ್.ಬೋರಲಿಂಗಯ್ಯ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಚಿಕ್ಕಮ್ಮಾ ನಿಕೇತನ ಕಲ್ಯಾಣ ಮಂಟಪದಲ್ಲಿ ಜನಸ್ಪಂದನ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ರಾಷ್ಟ್ರಕವಿ ಕುವೆಂಪು ಅವರ 120 ಜಯಂತೋತ್ಸವ ಅಂಗವಾಗಿ ಕುವೆಂಪು ಆಶಯದಂತೆ ಮಂತ್ರ ಮಾಂಗಲ್ಯದ ಅಡಿಯಲ್ಲಿ ಅಂತರ್ಜಾತಿ ವಿವಾಹವಾಗಿ ಆದರ್ಶದ ಬದುಕು ನಡೆಸುತ್ತಿರುವ 11 ದಂಪತಿಗಳಿಗೆ ಅಭಿನಂದಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.



ಅಂತರ್ಜಾತಿ ವಿವಾಹವಾಗಿ ಆದರ್ಶದ ಬದುಕು ನಡೆಸುತ್ತಿರುವ 11 ದಂಪತಿಗಳಿಗೆ ಅಭಿನಂದಿಸಿ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

19ನೇ ಶತಮಾನದ ವಿಜ್ಞಾನಿಗಳು, ಜ್ಞಾನಿಗಳು, ಮಹಾಕವಿಗಳು ಸಂಗಮಿಸುವ ಶತಮಾನ. ಈ ಶತಮಾನದಲ್ಲಿ ಟಾಲ್‌ಟಾಯ್ಸ್, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಥಾಮಸ್ ಅಲ್ವಾ ಎಡಿಸನ್, ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ಕುವೆಂಪು ಸೇರಿದಂತೆ ಇತರೆ ಮಹಾನೀಯರು ಜನಿಸಿದ ಶತಮಾನವಾಗಿದೆ ಎಂದು ತಿಳಿಸಿದರು.

ಕುವೆಂಪು ಅವರು, ಆಡಂಬರದ ಮದುವೆಗಳಿಗೆ ವಿರೋಧ ಇದ್ದರು. ಹಾಗಾಗಿ ಅವರು, ಮಂತ್ರ ಮಾಂಗಲ್ಯಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಡ್ನುಡಿ ಇದೆ. ಅದರಂತೆ ಕುವೆಂಪು ಗ್ರಹಿಸದ ಜ್ಞಾನವಿಲ್ಲ. ಅವರು ಎಲ್ಲಾ ವಿಷಯಗಳಲ್ಲೂ ತಜ್ಞರಿಂದ ಕೇಳಿ, ಓದಿ ಅರ್ಥೈಸಿಕೊಂಡು, ತಮ್ಮ ಬರವಣಿಗೆ ಮೂಲಕ ದಾಖಲಿಸಿದ್ದಾರೆ. ಅದರ ಪ್ರತಿಬಿಂಬವೇ 'ಶ್ರೀ ರಾಮಾಯಣ ದರ್ಶನಂ'. ಹಾಗಾಗಿ ರಾಷ್ಟ್ರಕವಿ ಕುವೆಂಪು ಅವರ ಆದರ್ಶದಡಿ ಬದುಕು ಕಟ್ಟಿಕೊಂಡ ದಂಪತಿಗಳು ಅಂತರ್ಜಾತಿ ವಿವಾಹವಾದರೂ ಅಚ್ಚುಕಟ್ಟಾದ ಜೀವನ ಕಟ್ಟಿದ್ದಾರೆ. ಇವರಿಗೆ ಸಮಾಜದ ಪ್ರೋತ್ಸಾಹ ಅಗತ್ಯ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ. ಕುವೆಂಪು ಅವರ ಆದರ್ಶದಂತೆ ಅಂತರ್ಜಾತಿ ವಿವಾಹವಾಗಿ ಆದರ್ಶ ಬದುಕು ನಡೆಸುತ್ತಿರುವವರನ್ನು ಸನ್ಮಾನಿಸುತ್ತಿರುವುದು ಉತ್ತಮವಾದ ಕೆಲಸ ಹಾಗೂ ವಿಶೇಷ ಕಾರ್ಯಕ್ರಮ. ಪ್ರಸ್ತುತ ಸಮಾಜದಲ್ಲಿ ಜಾತಿಜಾತಿ ಎಂದು ಜಪಿಸುತ್ತಾರೆ. ಇಂತಹ ಸಂದರ್ಭದಲ್ಲಿ ಜಾತಿ ಮೀರಿದ ಬದುಕುಕಟ್ಟಿಕೊಂಡಿರುವ ದಂಪತಿಗಳನ್ನು ಪ್ರೋತ್ಸಾಹಿಸಬೇಕು. ಹುಟ್ಟು ಆಕಸ್ಮಿಕ, ಸಾವು ಖಚಿತ. ಇದರ ನಡುವೆ ನಾವು ವಿಶ್ವಮಾನವರಾಗಿ ಬದುಕು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, 12 ನೇ ಶತಮಾನದಲ್ಲಿಯೇ ಭಕ್ತಿ ಭಂಡಾರಿ ಬಸವಣ್ಣ ಜಾತಿ ವ್ಯವಸ್ಥೆ ಹೋಗಲಾಡಿಸಲು ಕ್ರಾಂತಿಕಾರಿ ನಿರ್ಣಯ ಮಾಡಿದ್ದರು. ಆ ನಿರ್ಣಯ ಇಂದಿನ ಕಾರ್ಯಕ್ರಮದ ಮೂಲಕ ಜಾರಿಗೆ ಬಂತೋ ಎಂಬಂತೆ ಬಾಸವಾಯಿತು. ವರ್ಷಕ್ಕೊಮ್ಮೆ ಇಂತಹ ಕಾರ್ಯಕ್ರಮ ಮಾಡಬೇಕು. ಇದರಿಂದ ಪ್ರೇರೆಪಿತರಾಗುವ ಯುವಕ–ಯುವತಿಯರು ಅಂತರ್ಜಾತಿ ವಿವಾಹವಾಗಲು ಮುಂದೆ ಬರುತ್ತಾರೆ. ಸಮಾಜದಲ್ಲಿನ ಎಲ್ಲಾ ಮನುಷ್ಯರು ಸಂತೋಷದಿಂದ ಬದುಕಲು ಇಂತಹ ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯ ಎಂದರು.

11 ಮಂದಿ ಆದರ್ಶ ದಂಪತಿಗಳಿಗೆ ಅಭಿನಂದನೆ: ಪ್ರೊ.ವೆಂ.ವನಜ ಮತ್ತು ಪ್ರೊ.ಕೆ.ಕಾಳಚನ್ನೇಗೌಡ ದಂಪತಿ, ಪ್ರೊ.ಲತಾ ಮೈಸೂರು ಮತ್ತು ಉಗ್ರನರಸಿಂಹೇಗೌಡ ದಂಪತಿ, ಟಿ.ಪದ್ಮಶ್ರೀ ಮತ್ತು ಬಿ.ಆರ್.ರಂಗಸ್ವಾಮಿ, ಟಿ.ವಿ.ರಾಣಿ ಮತ್ತು ಆರ್.ರಾಜೇಂದ್ರ, ಭಾರತಿ ಮತ್ತು ಉಜ್ಜನಿಗೌಡ ದಂಪತಿ, ಪ್ರೊಲಕ್ಷ್ಮಿ ಮತ್ತು ಪ್ರೊ.ರವಿಕುಮಾರ್ ಬಾಗಿ ದಂಪತಿ, ಎಂ.ಎನ್.ಶಿವಕುಮಾರಿ ಮತ್ತು ಡಾ. ಕೆ.ಪಿ.ಪ್ರಸನ್ನ ದಂಪತಿ, ಪ್ರೇಮಾಬಾಯಿ ಮತ್ತು ಎಂ.ಶಿವಪ್ರಸಾದ್ ದಂಪತಿ, ಮಾನಸ ಮತ್ತು ಡಿ.ಅವಿನಾಶ್ ದಂಪತಿ, ಕೆ.ಇ.ಸಿಂಧು ಮತ್ತು ಸಿ.ಎಲ್.ಮಧುಸೂಧನ್ ದಂಪತಿ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಜನಸ್ಪಂದನ ಟ್ರಸ್ಟ್ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರೊ.ಕಾಳೇಗೌಡ ನಾಗವಾರ, ರಂಗಾಯಣ ಮಾಜಿ ನಿರ್ದೇಶಕ ಎಚ್. ಜನಾರ್ಧನ್(ಜನ್ನಿ), ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಕಾಂಗ್ರೆಸ್ ಮುಖಂಡ ಎಚ್.ಎ.ವೆಂಕಟೇಶ್, ಡಾ.ಅಮ್ಮಸಂದ್ರ ಸುರೇಶ್, ಡಾ.ಆರ್. ಸ್ವಾಮಿ ಆನಂದ್, ಸಾಮಾಜಿಕ ಹೋರಾಟಗಾರ ಈ.ಧನಂಜಯ ಎಲಿಯೂರು, ಪ್ರೊ.ಭದ್ರಪ್ಪ ಹೆನ್ಲಿ, ಎಸ್.ಜಿ.ರಮೇಶ್, ಸೇರಿದಂತೆ ಇತರರಿದ್ದರು.

> "ಈಗಲೂ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಾತಿ ವಿವಾಹ ಸುಲಭ ಅಲ್ಲ. ಮೇಲ್ಜಾತಿ ಯುವತಿರನ್ನು ಕೆಳ ಜಾತಿ ಯುವಕರು ಮದುವೆ ಆದಾಗ ಬಹಳ ಸಂಕಷ್ಟಗಳು ಎದುರಾಗುತ್ತವೆ. ಅಂತರ್ಜಾತಿ ವಿವಾಹ ಆಗುವುದರಿಂದ ಸಾಮಾಜಿಕ ಶ್ರೇಷ್ಠತೆಯ ಮತ್ತುಷ್ಟ ಹೆಚ್ಚುತ್ತದೆ.
>
> – ಡಾ.ಬಂಜಗೆರೆ ಜಯಪ್ರಕಾಶ್, ಪ್ರಗತಿಪರ ಚಿಂತಕರು

ಇಂದಿನಿಂದ ಡಿಇಎಲ್‌ಇಡಿ ಪೂರಕ ಪರೀಕ್ಷೆ ಆರಂಭ

ಮೈಸೂರು,ಜ.5(ಬಿಲ್‌ಯು)–ಮೈಸೂರಿನ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್) ಯಲ್ಲಿ ನಾಳೆಯಿಂದ ಜ.11ರವರೆಗೆ ಪ್ರಥಮ ಮತ್ತು ದ್ವಿತೀಯ ಡಿಇಎಲ್‌ಇಡಿ ಪೂರಕ ಪರೀಕ್ಷೆಗಳು ನಡೆಯಲಿವೆ. ಸುಸೂತ್ರವಾಗಿ ಪರೀಕ್ಷೆ ನಡೆಸುವ ಉದ್ದೇಶ ಹಾಗೂ ಯಾವುದೇ ಅಹಿತಕರ ಘಟನೆಗೆ ಅವಕಾಶವಿಲ್ಲದಂತೆ ನಡೆಯಲು ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆ ತನಕ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು, ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಪರೀಕ್ಷಾ ಕೇಂದ್ರದ ಬಳಿ ಬರಬಾರದು. ಕೇಂದ್ರಗಳ ಸುತ್ತಮುತ್ತಿನ ಜೆರಾಕ್ಸ್ ಮತ್ತು ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿ ಮುಗಿಯುವ ತನಕ ಮುಚ್ಚಲು ಆದೇಶಿಸಲಾಗಿದೆ ಎಂದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ; ಸಾಧಕರಿಗೆ ಅಭಿನಂದನೆ




ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಿಸಲಾಯಿತು. ಈ ವೇಳೆ ಕೆ.ಆರ್.ಆಸ್ಪತ್ರೆಯ ನಿವೃತ್ತ ವೈದ್ಯರಾದ ಡಾ.ಲಕ್ಷ್ಮೀಗೌಡ, ಅಥ್ಲೆಟಿಕ್ ಕ್ರೀಡಾಪಟು ನಿಶ್ಚಿತ್ ಪಿ.ಗೌಡ, ಬಿಜೆಪಿ ಹಿರಿಯ ಮುಖಂಡ ನಜರ್‌ಬಾದ್ ಪರಮೇಶ್ ಹಾಗೂ ಪ್ರೊ.ವಿನೋದ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ನಗರ ಜಿಲ್ಲಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ವಸ್ತುಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷರಾದ ಹೇಮಂತ್‌ಕುಮಾರ್‌ಗೌಡ, ಮಿರ್ಲೆ ಶ್ರೀನಿವಾಸ್‌ಗೌಡ, ಜಯಪ್ರಕಾಶ್(ಜೆಪಿ), ಮಂಗಳ ಸೋಮಶೇಖರ್, ರಾಕೇಶ್, ಹೇಮಾ ನಂದೀಶ್ ಮತ್ತಿತರರು ಉಪಸ್ಥಿತರಿದ್ದರು.

'ನಾವೇಕೆ ಸಾಯುತ್ತೇವೆ' ಪುಸ್ತಕ ಕುರಿತು ಜ.8ರಂದು ಚರ್ಚೆ

ಮೈಸೂರು,ಜ.5–ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ –2015ರ ಸಂಯುಕ್ತ ಆಶ್ರಯದಲ್ಲಿ ಜ.8ರಂದು ಸಂಜೆ 6 ಗಂಟೆಗೆ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮರಣದ ಕಡೆಗೆ ಒಂದು ಪ್ರಯಾಣ, 'ನಾವೇಕೆ ಸಾಯುತ್ತೇವೆ' ಪುಸ್ತಕ ಕುರಿತು ಚರ್ಚೆ ಏರ್ಪಡಿಸಲಾಗಿದೆ.

ವಯಸ್ಸಾದ ಮತ್ತು ದೀರ್ಘಾಯುಷ್ಯದ ಹೊಸ ವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ ಮಾಲಿಕ್ಯೂಲರ್ ಜೀವಶಾಸ್ತ್ರಜ್ಞ ಮತ್ತು ಲೇಖಕ ವೆಂಕಿ ರಾಮಕೃಷ್ಣ ಅವರು ಪ್ರೊ.ಸಿ.ನಾಗಣ್ಣ ಅವರೊಂದಿಗೆ ಸಂವಾದ ನಡೆಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.01.2025 ಸೋಮವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ನೆಗಡಿ, ಕೆಮ್ಮು ಮತ್ತು ಅಸ್ತಮಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.


■ **ಅಂತಾರಾಷ್ಟ್ರೀಯ ಲಯನ್ ಸಂಸ್ಥೆ (ಜಿಲ್ಲೆ 317ಜಿ), ಲಯನ್ಸ್ ಕ್ಲಬ್ ಜೆ.ಪಿ.ನಗರ:** ಕ್ಲಬ್ಬಿನ 16ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಮತ್ತು ಲಯನ್ಸ್ ಜಿಲ್ಲಾ ರಾಜ್ಯಪಾಲ ಲಯನ್ ಎನ್.ಸುಬ್ರಹ್ಮಣ್ಯ ಭೇಟಿ ಕಾರ್ಯಕ್ರಮ, ಅಧ್ಯಕ್ಷತೆ: ಕ್ಲಬ್ ಅಧ್ಯಕ್ಷ ಲಯನ್ ಕೆ.ಎ.ಸಿದ್ದಲಿಂಗಪ್ಪ, ಮುಖ್ಯ ಅತಿಥಿಗಳು: ಸಂಪುಟ ಕಾರ್ಯದರ್ಶಿ ಲಯನ್ ಸಿ.ಡಿ.ಕೃಷ್ಣ, ಸಂಪುಟ ಕೋಶಾಧಿಕಾರಿ: ಲಯನ್ ಕೆ.ಎನ್.ಪುನೀತ್‌ಕುಮಾರ್, ಪ್ರಾದೇಶಿಕ ಮುಖ್ಯಸ್ಥ ಲಯನ್ ಬಿ.ಎಲ್.ಗಿರೀಶ್, ವಲಯ ಮುಖ್ಯಸ್ಥ ವಿ.ಗುರುದತ್, ಸ್ಥಳ: ರಾಹುಲ್ ಕನ್‌ವೆನ್ಷನ್ ಮಿನಿ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 10.30ಕ್ಕೆ.

■ **ಧರ್ಮಪ್ರಕಾಶ್ ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ:** ವಿಶ್ವ ಮಾನವ ದಿನಾಚರಣೆ, ಅಧ್ಯಕ್ಷತೆ: ಪ್ರೌಢಶಾಲಾ ಮುಖ್ಯ ಶಿಕ್ಷಕ ಕೃಪಾಶಂಕರ್, ಉದ್ಘಾಟನೆ: ಜಾನಪದ ತಜ್ಞ ಡಾ.ಬಿ.ಸಿ.ವಿಜಯಕುಮಾರ್, ಮುಖ್ಯ ಅತಿಥಿ: ಖ್ಯಾತ ಅಂಕಣಕಾರ ಬನ್ನೂರು ಕೆ.ರಾಜು, ಸ್ಥಳ: ಧರ್ಮಪ್ರಕಾಶ್ ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆ, ಮಧ್ಯಾಹ್ನ 12 ಗಂಟೆಗೆ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ):** ವಿಶೇಷ ಉಪನ್ಯಾಸ, ದಿವ್ಯ ಆಶೀರ್ವಾದ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಉಪನ್ಯಾಸ: ಕೃಷಿಕರು ಮತ್ತು ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿ, ವಿಷಯ: ಜೀವನ ಮೌಲ್ಯಗಳು, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

■ **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಕರ್ನಾಟಕ ನಾಟಕ ಅಕಾಡೆಮಿ, ಸಂಚಲನ ಮೈಸೂರು** : ಸಬ್ಬನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳಿಗಾಗಿ 60 ದಿನಗಳ ಮಕ್ಕಳ ರಂಗ ತರಬೇತಿ ಮತ್ತು ಜಾನಪದ ತರಬೇತಿ ಶಿಬಿರ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸಬ್ಬನಹಳ್ಳಿ, ಬಿಳಿಕೆರೆ, ಮಧ್ಯಾಹ್ನ 3 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ರಾಜಶೇಖರ ಜಮದಂಡಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ, ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ.ಪುಟ್ಟಿ, ಕೆ.ಪಿ.ರೇವತಿ, ಎ.ಎನ್.ಶೀಲಾ, ವ್ಯಾಖ್ಯಾನ–ಡಾ.ಲತಾ, ಮೈಸೂರು, 6.50–ರೈತರಿಗೆ ಸಲಹೆ, 7.15 –ಭಾವಗೀತೆಗಳು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಭಾರತೀಯ ಚಿತ್ರರಂಗದ ಸಿನೆಮಾಟೋಗ್ರಾಫರ್, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ವಿ.ಕೆ.ಮೂರ್ತಿ ಅವರೊಂದಿಗೆ ಉದಯಾದ್ರಿ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಎನ್. ಭಾಸ್ಕರ್–ಮಯೋಲಿನ್ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, 12.05–ವನಿತಾ ವಿಹಾರ–ಧಾರವಾಡದ ಭಾರತೀನಗರ ಮಹಿಳಾ ವೃಂದದ ಸದಸ್ಯೆಯರಿಂದ ಕಾರ್ಯಕ್ರಮ. ನಿರ್ವಹಣೆ: ಮಂಜುಳಾ ಪುರಾಣಿಕ್.

ಮಧ್ಯಾಹ್ನ: 12.35–ದೇವರನಾಮ, 12.45–ನಮ್ಮ ಆರೋಗ್ಯ: 'ಚಳಿಗಾಲ ಮತ್ತು ಚರ್ಮದ ಆರೈಕೆ' ಕುರಿತು ವಯನಾಡಿನ ಡಾ.ಮೂಪೆನ್ಸ್ ಮೆಡಿಕಲ್ ಕಾಲೇಜಿನ ಚರ್ಮರೋಗ ವಿಭಾಗದ ಪ್ರಾಧ್ಯಾಪಕ ಡಾ.ಜಯದೇವ ಬಿ. ಬೆಟ್‌ಕೆರೂರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಪ್ರಭುಸ್ವಾಮಿ ಮಳಿಮಠ್, 1.00–ಪ್ರಗತಿಪಥ –ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಅಗ್ನಿಪಥ್ ಯೋಜನೆ ಕುರಿತು ಕೆ.ಪಿ.ಪ್ರದ್ಯುಮ್ನ ಅವರಿಂದ ಭಾಷಣ, 1.20–ಭಾವಗೀತೆಗಳು– ಜಯಂತಿ. ವಿ.ಭಟ್, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಯು.ಶ್ರೀನಿವಾಸ್, ಮ್ಯಾಂಡೋಲಿನ್, 4.00–ಮಹಿಳಾರಂಗ, "ನಾನು ನನ್ನ ಕಂಪನಿ" –ಸಂಕ್ರಾಂತಿ ಹಬ್ಬಕ್ಕೆ ವಿಶೇಷವಾಗಿ ಮನೆಯಲ್ಲಿಯೇ ಸಕ್ಕರೆ ಅಚ್ಚು ತಯಾರಿಸುವ ನಳಿನಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ –ಪ್ರಸ್ತುತಿ: ಎಸ್.ಈಶ್ವರಭಟ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೋಳಿ ಸಾಕಾಣಿಕೆ ಕುರಿತು ಮೈಸೂರು ತಾಲೂಕು ಜಯಪುರ ಹೋಬಳಿ ಹಾರೋಹಳ್ಳಿ ಗ್ರಾಮದ ಎಸ್. ಗುರುರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ– ಮೈಸೂರಿನ ಹಳೆಕೆಸರೆಯ ಬೆಥಾನಿಯಾ ಸಹೋದರರ ಸಭೆಯ ಯೌವನಸ್ಥರ ಬಳಗದ ಸದಸ್ಯರಿಂದ ಹೊಸವರ್ಷದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ–'ಹೊಸ ವರ್ಷ–ಹೊಸ ಹರ್ಷ', 9.30– ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಚಂದ್ರಿಕಾ–ಹಾಡುಗಾರಿಕೆ, 10.00–ರೂಪಕ–ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ: ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು.

■ **ಹಿರಿಯ ನಾಗರಿಕರ ಮಂಡಲಿ :** ಮಾಸಿಕ ಉಪನ್ಯಾಸ, ಆರೋಗ್ಯ ಸುಧಾರಣೆ ಬಗ್ಗೆ ಗೋಕುಲಂ ಆದಿತ್ಯ ಅಧಿಕಾರಿ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ.ಎನ್.ಚಂದ್ರಶೇಖರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಸಂಜೆ 5ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ದೇಸಿರಂಗ ನಾಟಕೋತ್ಸವ, ಉದ್ಘಾಟನೆ: ಲೇಖಕರು ಹಾಗೂ ಚಿಂತಕರಾದ ನಾ.ದಿವಾಕರ್, ಅಧ್ಯಕ್ಷತೆ: ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿ: ರಂಗ ನಿರ್ದೇಶಕ ಡಿ.ನಾಗೇಂದ್ರ ಕುಮಾರ್, ಉಪಸ್ಥಿತಿ: ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣಜನಮನ, 'ಅಕ್ಕ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6 ಗಂಟೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

ಗೀತ್ ಗಾತಾ ಚಲ್ ಸಂಗೀತ ಸಂಜೆಯಲ್ಲಿ ವೈದ್ಯ ಸಮೂಹದ ಹಾಡಿನ ಮೋಡಿ

ಗಾನ ಮಾಧುರ್ಯಕ್ಕೆ ಮನಸೋತ ಶ್ರೋತೃಗಳು



ಡಾ.ಶ್ಯಾಮ್ ಪ್ರಸಾದ್ ಹಾಡಿಗೆ ಸ್ಪರ್ಶಾ ಶೆಣೈ ತಂಡದಿಂದ ನೃತ್ಯ ಪ್ರದರ್ಶಿಸಲಾಯಿತು.



ಡಾ.ಅಮೃತಾ ಗಾಯನ ಪ್ರಸ್ತುತಪಡಿಸಿದರು.



ಡಾ.ಪಿ.ಎ.ಕುಶಾಲಪ್ಪ ಹಾಡಿನ ಮೋಡಿ.



ಡಾ.ಶಿವಾನಿ ನಾಯಕ್ ಹಾಡಿದ ಕ್ಷಣ.



ಡಾ.ಎ.ಎಲ್.ಹೇಮಲತಾ ಹಾಗೂ ಶಬ್ಬೀರ್ ಗಾಯನ ಸಾದರಪಡಿಸಿದರು.



ಡಾ.ಸುಷ್ಮಾ ಕೃಷ್ಣಮೂರ್ತಿ ಮತ್ತು ಡಾ.ಯುಗಣೇಶ್ ರಾವ್ ಹಾಡಿದ ಸಂದರ್ಭ.

ಮೈಸೂರು,ಜ.5(ಪಿಎಂ)– ಮಾಧುರ್ಯದೊಂದಿಗೆ ಸೂಸಿದ ಹಳೇ ಹಿಂದಿ ಚಿತ್ರಗೀತೆಗಳ ಗಾನ ರಸಧಾರೆಗೆ ಶ್ರೋತೃವರ್ಗ ಮನಸೋತು ಸಂಭ್ರಮಿಸಿತು. ಇದರ ಜೊತೆಗೆ ಹಳೇ ಕನ್ನಡ ಚಿತ್ರಗೀತೆಗಳ ಗಾಯನದಲ್ಲಿ ಹೊಮ್ಮಿದ ನಾದಮಯ ಲೋಕದಲ್ಲಿ ತೇಲಾಡಿ ಮೈಮರೆಯಿತು. ವೈದ್ಯ ಸಮೂಹದ ಹಾಡಿನ ಮೋಡಿ ಇದು.

ವೈದ್ಯರು ಮತ್ತು ಅವರ ಕುಟುಂಬದ ಸದಸ್ಯರು ಗಾಯನ ಸಾದರಪಡಿಸುವ 'ಗೀತ್ ಗಾತಾ ಚಲ್–ವೈದ್ಯರ ಸಂಗೀತ ಸಂಜೆ' ಕಾರ್ಯಕ್ರಮದ ಸೊಗಸು ಇದು. ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 23ನೇ ವರ್ಷದ ಈ ಗಾಯನ ಕಾರ್ಯಕ್ರಮದಲ್ಲಿ ಶ್ರೋತೃಗಳು ಸಂಗೀತದ ಸಾಗರದಲ್ಲಿ ತೇಲಿ ಹೋದರು. ಆ ಮೂಲಕ ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ಸಂಗೀತದ ಇಂಪಿನ ಕಂಪನ ಉಂಟಾಯಿತು.

ವೈದ್ಯರು, ಅವರ ಕುಟುಂಬಸ್ಥರ ಕಂಠಸಿರಿಯಲ್ಲಿ ಮೂಡಿಬಂದ ಹಾಡುಗಳು ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದವು. 'ಹೊಸಬೆಳಕು' ಕನ್ನಡ ಚಿತ್ರದ 'ತೆರೆದಿದೆ ಮನೆ ಓ ಬಾ ಅತಿಥಿ...' ಗೀತೆಯನ್ನು ಡಾ.ಸುಷ್ಮಾ ಅರುಣ್, ಇವರ ಪುತ್ರಿ ಭೂಮಿಕಾ ಪ್ರಸ್ತುತಪಡಿಸಿ ಸಭಿಕರ ಮನಕ್ಕೆ ಲಗ್ಗೆಯಿಟ್ಟರು. ಬಳಿಕ ಹಿಂದಿ ಸಿನಿಮಾ 'ಸೀಮಾ' ಚಿತ್ರದ 'ತು ಪ್ಯಾರ್ ಕಾ ಸಾಗರ್ ಹೈ' ಗೀತೆಯನ್ನು ಡಾ.ಎಂ.ಎಸ್.ನಟಶೇಖರ್, ಅವರ ಪುತ್ರಿ ಅಪೂರ್ವ ನಟಶೇಖರ್ ಹಾಡುವ ಮೂಲಕ ನಾದ ಹೊಮ್ಮಿಸಿ ಸಭಿಕರ ಮೋಡಿ ಮಾಡಿದರು.

ಶ್ರೋತೃಗಳ ಅಪೇಕ್ಷೆಯ ಗಾನ ಪ್ರಸ್ತುತಿ...

'ಗೀತ್ ಗಾತ ಚಲ್'ನಲ್ಲಿ ಇದೇ ಮೊಟ್ಟಮೊದಲಿಗೆ 'ಆಪ್ ಕಿ ಫರ್ಮಾಯಿಶ್' ಶೀರ್ಷಿಕೆಯಡಿ ಸಭಿಕರ ಅಪೇಕ್ಷಿಸಿದ ಹಾಡನ್ನು ಸಾದರಪಡಿಸಲಾಯಿತು. 10 ಮಂದಿಗೆ ತಮ್ಮಿಷ್ಟದ ಗೀತೆಯನ್ನು ಚೀಟಿಯಲ್ಲಿ ಬರೆದು ನೀಡಲು ಅವಕಾಶ ಕಲ್ಪಿಸಿ ಸ್ವಲ್ಪ ಸಮಯ ನಂತರದಲ್ಲಿ ಆ ಪೈಕಿ ಎರಡು ಗೀತೆಗಳನ್ನು ಆಯ್ಕೆ ಮಾಡಿ ಪ್ರಸ್ತುತಪಡಿಸಲಾಯಿತು.

ಇದಾದ ನಂತರದಲ್ಲಿ ಮತ್ತೊಂದು ಹಿಂದಿ ಚಿತ್ರಗೀತೆಯ ಗಾನ ಸೂಸಲಾರಂಭಿಸಿತು. 1966ರಲ್ಲಿ ತೆರೆಕಂಡ ಸಿನಿಮಾ 'ಆಖ್ರಿ ಖತ್'ನ 'ಬಹರೋನ್ ಮೇರಾ ಜೀವನ್...' ಗೀತೆಯನ್ನು ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಹಾಡಿದ್ದು, ಈ ಗೀತೆಯನ್ನು ಡಾ.ಎ.ಎಲ್.ಹೇಮಲತಾ ಅವರು ಸಾದರಪಡಿಸಿ ಸಭಿಕರು ಸಂಭ್ರಮಿಸುವಂತೆ ಮಾಡಿದರು. ಪಹಾಡಿ ರಾಗದಲ್ಲಿ ಮೂಡಿಬಂದಿರುವ ಈ ಗೀತೆಯ ಮಾಧುರ್ಯಕ್ಕೆ ಸಭಿಕರು ಮನಸೋತು ಚಪ್ಪಾಳೆ ಮಳೆ ಸುರಿಸಿದರು.

ಅನಂತರದಲ್ಲಿ 1960ರಲ್ಲಿ ತೆರೆಕಂಡ ಹಿಂದಿ ಸಿನಿಮಾ 'ಭಬಿಲಿ'ಯ 'ಲೆಹ್ರೋ ಪೆ ಲೆಹರ್...' ಗೀತೆಯ ಸುನಾದ ಸೂಸಲಾರಂಭಿಸುತ್ತಿದ್ದಂತೆ ಸಭಿಕರ ಗಾಯಕರ ಹಾಡಿಗೆ ಚಪ್ಪಾಳೆಯೊಂದಿಗೆ ಸಂಭ್ರಮಿಸಿದರು. ಡಾ.ಪಿ.ಎ.ಕುಶಾಲಪ್ಪ ಅವರು ಈ ಹಾಡನ್ನು ಸಾದರಪಡಿಸುವ ಮೂಲಕ ಸಭಿಕರು ತಲೆದೂಗುವಂತೆ ಮಾಡಿ, ಅಭಿಮಾನದಿಂದ ಚಪ್ಪಾಳೆ ಗಿಟ್ಟಿಸಿದರು. 'ಅಪೂರ್ವ ಸಂಗಮ' ಕನ್ನಡ ಚಿತ್ರದ 'ಅರಳಿದೆ ತನು ಮನ ನೋಡುತ ನಿನ್ನ...' ಗೀತೆಯನ್ನು ಡಾ.ಸೀತಾಲಕ್ಷ್ಮೀ ಹಾಗೂ ಡಾ.ಸೋಮನಾಥ್ ವಾಸುದೇವ ವೈದ್ಯ ದಂಪತಿ ಪ್ರಸ್ತುತಪಡಿಸಿ ಸಭಿಕರ ಮನಕ್ಕೆ ಮುದ ನೀಡಿದರು.

'ಬಚ್ಪನ್ ಕೆ ಮಹೋಬತ್...' ಗೀತೆಯನ್ನು ಡಾ.ಸ್ನೇಹಶ್ರೀ, 'ಬಂದ ಪರ್ವಾರ್...' ಹಾಡನ್ನು ಡಾ.ಗಣೇಶ್‌ರಾವ್, 'ಅವರಾ ಹೂನ್...' ಗೀತೆಯನ್ನು ಡಾ.ಯು.ಜಿ.ಶೆಣೈ, 'ಮುಝೆ ಕಿತ್ನಾ ಪ್ಯಾರ್ ಹೈಂ...' ಗೀತೆಯನ್ನು ಡಾ.ಎಂ.ಎಸ್. ನಟಶೇಖರ್, ಅವರ ಪುತ್ರಿ ಅಪೂರ್ವ, 'ಓ ಮೇರೆ ದಿಲ್ ಕೆ ಚೈನ್...' ಗೀತೆಯನ್ನು ಡಾ.ಸೋಮನಾಥ್ ವಾಸುದೇವ, 'ತೇರೆ ಸುರ್ ಔರ್ ಮೇರೆ...' ಗೀತೆಯನ್ನು ಡಾ.ಸೀತಾಲಕ್ಷ್ಮೀ, 'ಫೈಲಿ ಹುಯಿ ಹೈ...' ಗೀತೆಯನ್ನು ಡಾ.ಶಿವಾನಿ ನಾಯಕ್, 'ಚಂದ್ ಫಿರ್ ನಿಕ್ಲಾ...' ಗೀತೆಯನ್ನು ಡಾ.ಅಮೃತಾ, 'ನಾ ಬಿಡಲಾರೆ ಎಂದು ನಿನ್ನ...' (ಕನ್ನಡ ಚಿತ್ರಗೀತೆ) ಗೀತೆಯನ್ನು ಡಾ.ಸುಷ್ಮಾ ಕೃಷ್ಣಮೂರ್ತಿ ಮತ್ತು ಡಾ.ಗಣೇಶ್‌ರಾವ್, 'ಸತ್ಯಂ ಶಿವಂ ಸುಂದರಂ...' ಗೀತೆಯನ್ನು ವರ್ಷಾ, 'ಮಧುಬನ್ ಮೈನ್ ರಾಧಿಕಾ...' ಗೀತೆಯನ್ನು ಡಾ.ಶ್ಯಾಮ್‌ಪ್ರಸಾದ್, 'ಸೈಯಾನ್ ದಿಲ್ ಮೇನ್ ಅನಾ...' ಗೀತೆಯನ್ನು ಸ್ಪರ್ಶ ಶೆಣೈ ಅವರು ಸುಶ್ರಾವ್ಯವಾಗಿ ಹಾಡಿ ಶ್ರೋತೃಗಳ ಅಭಿಮಾನದ ಚಪ್ಪಾಳೆಗೆ ಪಾತ್ರರಾದರು. ಕರೋಕೆ ಸಂಗೀತದೊಂದಿಗೆ 50, 60 ಮತ್ತು 70ರ ದಶಕದ ಹಳೇ ಹಿಂದಿ ಚಿತ್ರಗೀತೆಗಳು ಹಾಗೂ ಕನ್ನಡ ಚಿತ್ರಗೀತೆಗಳನ್ನು ಪ್ರಸ್ತುತಪಡಿಸಿ ಶ್ರೋತೃಗಳನ್ನು ರಂಜಿಸಲಾಯಿತು.

ಇದಕ್ಕೂ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ, ನಮ್ಮ ಸಂಸ್ಥೆ ಆವರಣದಲ್ಲಿ 60 ಲಕ್ಷ ವೆಚ್ಚದಲ್ಲಿ ಡಾ.ಎಂ.ಜಗನ್ನಾಥ್ ಶೆಣೈ ಅವರು ವಿದ್ಯಾರ್ಥಿಗಳ ವಿಶ್ರಾಂತಿ ಗೃಹದ ಕಟ್ಟಡ ನಿರ್ಮಿಸಿಕೊಟ್ಟಿದ್ದಾರೆ. ನಮ್ಮ ಸಂಸ್ಥೆಯ ಪರವಾಗಿ ಜಗನ್ನಾಥ್ ಶೆಣೈ ದಂಪತಿಗೆ ಧನ್ಯವಾದ ಹೇಳುತ್ತೇನೆ. ವೈದ್ಯರು ಒತ್ತಡದಲ್ಲಿ ಮುಳುಗಿರುತ್ತಾರೆ. ಹೀಗಾಗಿ ವೈದ್ಯರಿಗೆ ಇಂತಹ ಕಾರ್ಯಕ್ರಮ ಅಗತ್ಯವಿದೆ ಎಂದು ಹೇಳಿದರು.

ಗೀತ್ ಗಾತಾ ಚಲ್ ಕಾರ್ಯಕ್ರಮದ ಪ್ರಾಯೋಜಕರೂ ಆದ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಮಾತನಾಡಿ, ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವ ಸಂದರ್ಭದಲ್ಲಿ ಸಂಸ್ಥೆ ಆವರಣದಲ್ಲಿ ವಿಶ್ರಾಂತಿ ಗೃಹ ನಿರ್ಮಿಸಿಕೊಟ್ಟಿರುವುದು ನಮಗೆ ಭಾಗ್ಯವೆಂದೇ ಭಾವಿಸಿದ್ದೇನೆ. ನಾವು ನಿರ್ಮಿಸಿಕೊಟ್ಟಿದ್ದು ಎಂಬ ಹೆಮ್ಮೆ ಸಹ ಇದೆ. ಕೋವಿಡ್ ಕಾರಣಕ್ಕೆ ಎರಡು ವರ್ಷ ಗೀತ್ ಗಾತಾ ಚಲ್ ಕಾರ್ಯಕ್ರಮ ಮಾಡಲಾಗಲಿಲ್ಲ. ಇಲ್ಲವಾಗಿದ್ದರೆ ಇಂದಿನ ಕಾರ್ಯಕ್ರಮ 25 ವರ್ಷದ್ದಾಗುತ್ತಿತ್ತು ಎಂದು ತಿಳಿಸಿದರು.

ಆರಂಭದಲ್ಲಿ ಡಾ.ಎಂ.ಜಗನ್ನಾಥ್ ಶೆಣೈ ಅವರ ಕೊಡುಗೆ ಮತ್ತು ಆದರ್ಶ ಜೀವನ ಕುರಿತ ಕಿರುಚಿತ್ರ ಪ್ರದರ್ಶಿಸಲಾಯಿತು. ಸೈಯದ್ ಅಫ್ತಾಬ್ ಅಹ್ಮದ್ ಕಾರ್ಯಕ್ರಮ ನಿರೂಪಿಸಿದರು. ಡಾ.ಎಂ.ಜಗನ್ನಾಥ್ ಶೆಣೈ ಅವರ ಪತ್ನಿ ಕುಸುಮಾ ಶೆಣೈ, ಉದ್ಯಮಿ ಸ್ಯಾಮ್ ಚೆರಿಯನ್, ಹಿರಿಯ ಗಾಯಕ ಪುತ್ತೂರು ನರಸಿಂಹನಾಯಕ್, ಗೀತ್ ಗಾತಾ ಚಲ್ ಪೋಷಕ ಡಾ.ಸಿ.ಉಮೇಶ್ ಕಾಮತ್, ಮಹಾನ್ ಅಸೋಸಿಯೇಷನ್ ಅಧ್ಯಕ್ಷ ಡಾ.ಜಾವೀದ್ ನಯೀಮ್, ಹಿರಿಯ ವೈದ್ಯರಾದ ಡಾ.ಸಿ.ಜಿ.ನರಸಿಂಹನ್, ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಸೇರಿದಂತೆ ಇನ್ನಿತರ ಗಣ್ಯರು, ವೈದ್ಯರು, ಅವರ ಕುಟುಂಬಸ್ಥರು, ಸಂಗೀತಾಸಕ್ತರು ಅಪಾರ ಸಂಖ್ಯೆಯಲ್ಲಿ ಹಾಜರಿದ್ದರು.

ಮೊಹಮ್ಮದ್ ರಫಿಗೆ ಗಾನ ಗೌರವ...

ಭಾರತದ ಅತ್ಯಂತ ಖ್ಯಾತ ಹಿನ್ನೆಲೆ ಗಾಯಕ ಮೊಹಮ್ಮದ್ ರಫಿ ಅವರ ಜನ್ಮ ಶತಮಾನೋತ್ಸವ ಪ್ರಯುಕ್ತ ಅತಿಥಿ ಗಾಯಕರಾಗಿ ಭಾಗವಹಿಸಿದ್ದ ಮೈಸೂರಿನವರೇ ಆದ ಶಬ್ಬೀರ್ ಗಾಯನ ಸಾದರಪಡಿಸಿದರು. ಇವರು ಜೂನಿಯರ್ ಮೊಹಮ್ಮದ್ ರಫಿ ಎಂದೇ ಗುರುತಿಸಿಕೊಂಡಿದ್ದಾರೆ. 1963ರಲ್ಲಿ ತೆರೆಕಂಡ 'ಸೆಹ್ರಾ' ಹಿಂದಿ ಸಿನಿಮಾದ 'ತುಮ್ ತೊ ಪ್ಯಾರ್ ಹೋ...' ಗೀತೆಯನ್ನು ಶಬ್ಬೀರ್ ಹಾಡಿದರು. ಇವರೊಂದಿಗೆ ಡಾ.ಎ.ಎಲ್. ಹೇಮಲತಾ ಧ್ವನಿಗೂಡಿಸಿ ಹಾಡಿದರು. ಮೊಹಮ್ಮದ್ ರಫಿ ಮತ್ತು ಲತಾ ಮಂಗೇಶ್ಕರ್ ಈ ಹಾಡಿನ ಮೂಲ ಗಾಯಕರಾಗಿದ್ದಾರೆ. ಮೊಹಮ್ಮದ್ ರಫಿ ಅವರ ಕಂಠಸಿರಿಯಲ್ಲಿ ಹೊರಹೊಮ್ಮಿರುವ 'ಕನ್ಯಾದನ್' ಸಿನಿಮಾದ 'ಲೈಖೆ ಜೋ ಖಾತ್ ತುಜೆ...' ಗೀತೆಯನ್ನು ಸಹ ಶಬ್ಬೀರ್ ಸಾದರಪಡಿಸಿದರು.



ಡಾ.ಎಂ.ಎಸ್.ನಟಶೇಖರ್ ಮತ್ತು ಅಪೂರ್ವ ಹಾಡುತ್ತಿರುವುದು.

ನಾಳಿನ ಮೈಸೂರು ಬಂದ್‌ಗೆ ಹೋಟೆಲ್ ಮಾಲೀಕರ ಸಂಘ ನೈತಿಕ ಬೆಂಬಲ

ಮೈಸೂರು, ಜ.5(ಎಸ್‌ಬಿಡಿ)– ಡಾ.ಬಿ. ಆರ್.ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಹಾಗೂ ವಿವಿಧ ಸಂಘಟನೆಗಳು ಜ.7ಕ್ಕೆ ಕರೆ ನೀಡಿರುವ ಮೈಸೂರು ಬಂದ್‌ಗೆ ನೈತಿಕ ಬೆಂಬಲ ನೀಡಲು ಮೈಸೂರು ಹೋಟೆಲ್ ಮಾಲೀಕರ ಸಂಘ ನಿರ್ಧರಿಸಿದೆ.



ನಾರಾಯಣ ಗೌಡ

ಹೋಟೆಲ್, ರೆಸ್ಟೋರೆಂಟ್, ಬೇಕರಿ, ಸ್ವೀಟ್ ಶಾಪ್, ಫಾಸ್ಟ್ ಫುಡ್, ಟಿಫಾನೀಸ್, ಟೀ–ಕಾಫಿ ಅಂಗಡಿ, ಚಾಟ್ಸ್ ಅಂಗಡಿ, ಐಷಾರಾಮಿ ಹೋಟಲುಗಳು ಸೇರಿದಂತೆ ಎಲ್ಲಾ ರೀತಿಯ ಆತಿಥ್ಯ ಕೇಂದ್ರಗಳಲ್ಲಿ ವ್ಯಾಪಾರಿಗಳು ಕಪ್ಪುಪಟ್ಟಿ ಧರಿಸಿ, ಬಂದ್‌ಗೆ ನೈತಿಕ ಬೆಂಬಲ ನೀಡುವುದರ ಜೊತೆಗೆ ಅಂದು ಬೆಳಗ್ಗೆ 10ಕ್ಕೆ ಪ್ರತಿ ಭಟನೆಯಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ಹಾಗೂ ಗೌರವ ಕಾರ್ಯದರ್ಶಿ ಎ.ಆರ್.ರವೀಂದ್ರ ಭಟ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಯಾವ ಮಹನೀಯರಿಗೂ ಅಪಮಾನವಾಗಬಾರದು. ಅಂತಹ ಸಂಗತಿಗಳನ್ನು ಹೋಟೆಲ್ ಮಾಲೀಕರ ಸಂಘ ಖಂಡಿಸುತ್ತದೆ. ನಾಡು, ನುಡಿ, ನೆಲ, ಜಲ, ಸಂಸ್ಕೃತಿ ವಿಚಾರ ಬಂದಾಗ ನಮ್ಮ ಸಂಘವು ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತದೆ. ಆದರೆ ಆಸ್ಪತ್ರೆಗಳಲ್ಲಿರುವ ರೋಗಿಗಳು ಹಾಗೂ ಅವರ ಸಹಾಯಕರು, ಆಹಾರಕ್ಕೆ ಹೋಟೆಲ್ ಅವಲಂಬಿಸಿರುವವರ ಹಿತದೃಷ್ಟಿಯಿಂದ ಸೇವೆ ನೀಡುವುದು ಅವಶ್ಯವಾಗಿದೆ. ಆದ್ದರಿಂದ ಬಂದ್‌ಗೆ ನೈತಿಕ ಬೆಂಬಲ ನೀಡಲು ಸಂಘದ ತುರ್ತು ಸಭೆಯಲ್ಲಿ ಒಮ್ಮತದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ದರ ಏರಿಕೆ; ಟಿಕೆಟ್ ತೆಗೆದುಕೊಳ್ಳದೇ ಬಸ್‌ನಲ್ಲಿ ಪ್ರಯಾಣಿಸಿ ವಾಟಾಳ್ ಪ್ರತಿಭಟನೆ

ರಾಮನಗರ, ಜ.5– ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಖಂಡಿಸಿ ರಾಮನಗರದಲ್ಲಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದ್ದಾರೆ. ರಾಮನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ ಏರಿ ಕುಳಿತು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಪುರುಷರಿಗೂ ಬಸ್ ಪ್ರಯಾಣ ಉಚಿತ ಮಾಡುವಂತೆ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಸರ್ಕಾರ ರಾಜ್ಯ ಜನರ ಬಳಿ ಹಗಲು ದರೋಡೆ ಮಾಡುತ್ತಿದೆ. ಪುರುಷರ ಬಳಿ ದುಪ್ಪಟ್ಟು ಹಣ ವಸೂಲಿ ಮಾಡಿ ಮಹಿಳೆಯರಿಗೆ ಉಚಿತ ಕೊಡುತ್ತಿದೆ. ಪುರುಷರಿಗೆ ಬಸ್ ಪ್ರಯಾಣ ದರ ಹೆಚ್ಚಳ ಮಾಡಿರುವುದು ಸರಿಯಲ್ಲ. ಕೂಡಲೇ ಸರ್ಕಾರ ದರ ಏರಿಕೆಯನ್ನು ಕೈಬಿಡಬೇಕು. ಇಲ್ಲ ಪುರುಷರಿಗೂ ಉಚಿತ ಬಸ್ ಪ್ರಯಾಣ ಎಂದು ಬಜೆಟ್‌ನಲ್ಲಿ ಘೋಷಣೆ ಮಾಡುವಂತೆ ವಾಟಾಳ್ ನಾಗರಾಜ್ ಒತ್ತಾಯ ಮಾಡಿದರು.



ಕರ್ನಾಟಕದಲ್ಲಿ 60 ಪರ್ಸೆಂಟ್ ಕಮಿಷನ್ ಸರ್ಕಾರ ಅಸ್ತಿತ್ವದಲ್ಲಿದೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ



ಮೈಸೂರು, ಜ.5(ಬಿಎಲ್‌ಯು)– ಪ್ರಸ್ತುತ ಕರ್ನಾಟಕದಲ್ಲಿ ಶೇಕಡ 60 ಪರ್ಸೆಂಟ್ ಕಮಿಷನ್ ಸರ್ಕಾರ ಅಸ್ತಿತ್ವದಲ್ಲಿದ್ದು, ಆಡಳಿತದ ಶಕ್ತಿ ಕೇಂದ್ರ ವಿಧಾನಸೌಧ ಇದರ ಮೂಲವಾಗಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಸರ್ಕಾರದಲ್ಲಿ ಶೇಕಡ 60 ಕಮಿಷನ್ ಪಡೆಯುತ್ತಿರುವ ವಿಚಾರವನ್ನು ಸ್ವತಃ ಕಾಂಗ್ರೆಸ್ ಕಾರ್ಯಕರ್ತರೇ ಒಪ್ಪಿಕೊಂಡಿದ್ದಾರೆ ಎಂದರು.

ಆಶ್ರಯ ಮನೆ ಹಂಚಿಕೆಯಲ್ಲಿ ಈ ಮೊದಲು ಪಿಡಿಒಗಳು ಲಂಚ ಪಡೆಯುತ್ತಿದ್ದರು. ಆದರೆ ಈಗ ವಿಧಾನಸೌಧದಲ್ಲಿ ಸಚಿವರು ರಾಜಾರೋಷವಾಗಿ ಲಂಚ ವಸೂಲಿಗಿಳಿದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನೀವು ಹೇಳುವ 'ಸತ್ಯ ಮೇವ ಜಯತೆ' ಇದೇನಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಕಾಂಗ್ರೆಸ್ ಸರ್ಕಾರದ ಘೋಷಣೆಗಳು ಜಾಹೀರಾತಿಗೆ ಮಾತ್ರ ಸೀಮಿತ ಎಂದು ಟೀಕಿಸಿದರು.

ರಾಜ್ಯದಲ್ಲಿ ಗುತ್ತಿಗೆದಾರರ ಪರಿಸ್ಥಿತಿ ಶೋಚನೀಯವಾಗಿದೆ. ಈ ಸರ್ಕಾರದ ವರ್ತನೆ ನೋಡಿದರೆ ಹಿಂದಿನ ಬಿಜೆಪಿ ಸರ್ಕಾರವೇ ಚೆನ್ನಾಗಿತ್ತು ಎಂಬ ಮನೋಭಾವ ಜನರಲ್ಲಿದೆ. ಇದಕ್ಕೆಲ್ಲಾ ಭವಿಷ್ಯತ್ತಿನಲ್ಲಿ ಕಾಂಗ್ರೆಸ್ ಪಕ್ಷ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಲೂಟಿ ಮಾಡಲು ಇತಿಮಿತಿ ಇಲ್ಲವೇ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಮಧ್ಯಮ ವರ್ಗದ ಜನರ ಬದುಕಿನ ಜೊತೆ ಈ ಸರ್ಕಾರ ಚೆಲ್ಲಾಟವಾಡುತ್ತಿದೆ. ಪುರುಷರ ಬಸ್ ದರ ಹೆಚ್ಚಳ ಮಾಡಿ ಅದನ್ನು ಮಹಿಳೆಯರಿಗೆ ನೀಡುತ್ತಿರುವ ಈ ಸರ್ಕಾರದ ಮೋಸದಾಟ ಎಲ್ಲರಿಗೂ ಮನವರಿಕೆಯಾಗುತ್ತಿದೆ ಎಂದರು.

ಈಗ ಬಸ್ ದರವನ್ನು ಶೇಕಡ 15ರಷ್ಟು ಹೆಚ್ಚಳ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಹಣಕಾಸಿನ ಪರಿಸ್ಥಿತಿ ಸರಿದೂಗಿಸಲು ಪರದಾಡುತ್ತಿದೆ. ಇದರಿಂದ ಗ್ಯಾರಂಟಿ ಯೋಜನೆ ನಿಲ್ಲಿಸಲು ನೆಪ ಹುಡುಕುತ್ತಿದೆ ಎಂದು ಆರೋಪಿಸಿದರು.

ಶಾಸಕರು ಹಾಗೂ ಮಂತ್ರಿಗಳ ಮಕ್ಕಳು ಬಸ್‌ನಲ್ಲಿ ಪ್ರಯಾಣ ಮಾಡುವುದಿಲ್ಲ. ಬಡ ಹಾಗೂ ಮಧ್ಯಮ ವರ್ಗದ ಜನರು ಪ್ರಯಾಣ ಮಾಡುತ್ತಾರೆ. ಇದರಿಂದ 10 ರೂಪಾಯಿ ಏರಿಕೆ ಮಾಡಿದರೂ ಜನಸಾಮಾನ್ಯರಿಗೆ ಇದರಿಂದ ದೊಡ್ಡ ಹೊರೆಯಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಸ್ ದರ ಸಮರ್ಥನೆ ಮಾಡಿಕೊಳ್ಳುವ ಸಚಿವರು ಜನರು ಮಾಂಸಾಹಾರ ಸೇವಿಸುವುದಿಲ್ಲವೇ ಎಂದು ಪ್ರಶ್ನಿಸುತ್ತಾರೆ. ಬಡವರು ಹಾಗೂ ಮಧ್ಯಮವರ್ಗದವರು ಸೇವಿಸುವ ಆಹಾರದ ಮೇಲೂ ಇವರ ಕೆಟ್ಟದೃಷ್ಟಿ ನಾಟಿದೆ. ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ಜನರು ಎಷ್ಟರ ಮಟ್ಟಿಗೆ ಸಂಕಷ್ಟ ಎದುರಿಸುತ್ತಿದ್ದಾರೆ ಎಂಬ ಸಾಮಾನ್ಯ ಪರಿಜ್ಞಾನ ಇವರಿಗಿಲ್ಲವೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಕುಮಾರಸ್ವಾಮಿ ಆರೋಪ ಸಾಬೀತುಪಡಿಸಲಿ: ಸಿಎಂ ಸಿದ್ದರಾಮಯ್ಯ ಸವಾಲು

ದಾವಣಗೆರೆ, ಜ.5– ಕಾಂಗ್ರೆಸ್ ಆಡಳಿತಾವಧಿಯಲ್ಲಿ ಶೇ. 60 ರಷ್ಟು ಕಮಿಷನ್ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಆರೋಪ ಆಧಾರರಹಿತ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿದಂತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಕುಮಾರಸ್ವಾಮಿ ಆರೋಪ ಕುರಿತು ಪ್ರತಿಕ್ರಿಯಿಸಿದ ಅವರು, ವಿರೋಧ ಪಕ್ಷಗಳದ್ದು ಕೇವಲ ಆರೋಪ ಮಾಡುವುದೇ ಕೆಲಸವಲ್ಲ. ದಾಖಲಾತಿಗಳ ಸಮೇತ ಆರೋಪ ಮಾಡಬೇಕು ಹಾಗೂ ಆರೋಪಗಳನ್ನು ಸಾಬೀತುಪಡಿಸಬೇಕು. ಆಧಾರವಿಲ್ಲದೆ ಆರೋಪಗಳನ್ನು ಮಾಡಬಾರದು ಎಂದರು.

ರಸ್ತೆ ಸಾರಿಗೆ ಸಂಸ್ಥೆಗಳ ಬಸ್ ದರ ಹೆಚ್ಚಿಸಿರುವುದು ಇದು ಮೊದಲಲ್ಲ ಎಲ್ಲಾ ಕಾಲದಲ್ಲಿಯೂ ಬಸ್ ದರಗಳು ಏರಿಕೆಯಾಗಿದೆ. ನೌಕರರ ವೇತನ, ಡೀಸಲ್ ಬೆಲೆ ಏರಿಕೆ, ಬಸ್‌ಗಳನ್ನು ಕೊಳ್ಳುವುದು ಹಾಗೂ ಹಣದುಬ್ಬರವೂ ಆಗಿದೆ. ವರ್ಷಗಳ ಹಿಂದೆ ಬೆಲೆ ಹೆಚ್ಚಿಸಲಾಗಿದ್ದು, ಸಾರಿಗೆ ನಿಗಮಗಳು ತೊಂದರೆಯಲ್ಲಿವೆ ಎನ್ನುವ ಕಾರಣ ಹಾಗೂ ಬೇಡಿಕೆಯೂ ಇದ್ದುದ್ದರಿಂದ ಬೆಲೆಯೇರಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿ ಹಾಗೂ ಕುಮಾರಸ್ವಾಮಿಯವರ ಕಾಲದಲ್ಲಿಯೂ ಬೆಲೆ ಹೆಚ್ಚಿಸಲಿಲ್ಲವೇ? ಕೇಂದ್ರ ಸರ್ಕಾರ ರೈಲ್ವೆ ದರ ಏರಿಕೆ ಮಾಡಿಲ್ಲವೇ? ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು. ಮಾರ್ಚ್‌ನಲ್ಲಿ ಬಜೆಟ್ ಮಂಡಿಸಲಿದ್ದು, ಪೂರ್ವಭಾವಿ ಸಭೆಗಳಲ್ಲಿ ಆದ್ಯತೆಗಳ ಕುರಿತು ಮಾತನಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಅಲ್ಲಾರೀ ಗಂಡಸರು ಸತ್ರೆ ಸ್ವರ್ಗದಲ್ಲಿ ಅಪ್ಸರೆಯರು ಸಿಗ್ತಾರಂತೆ ಹೌದಾ?

ಗಂಡ : ಹೌದು, ಕಣೇ?

ಹೆಂಡತಿ : ಮತ್ತೆ ಹೆಂಡತಿಯರು ಸತ್ರೆ?

ಗಂಡ : ಮಂಗ ಸಿಗುತ್ತೆ.

ಹೆಂಡತಿ : ಇದೇನು ಅನ್ಯಾಯ? ನಿಮಗೆ ಮಾತ್ರ ಇಲ್ಲೂ ಅಪ್ಸರೆ, ಅಲ್ಲೂ ಅಪ್ಸರೆ, ನಮಗೆ ಇಲ್ಲೂ ಮಂಗ, ಅಲ್ಲೂ ಮಂಗ...

ಮೈಸೂರು ಮಿತ್ರ

ಸೋಮವಾರ, 6 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಈ ಪ್ರಪಂಚದಲ್ಲಿ ಹೆಚ್ಚು ಹಂಚಿದಷ್ಟು ಹೆಚ್ಚಾಗುವ ವಸ್ತುವೆಂದರೆ 'ಸಂತೋಷ'. ನೀವು ನಗುತ್ತಾ ಇರಿ, ಬೇರೆಯವರನ್ನು ನಗಿಸುತ್ತಾ ಇರಿ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ರಟ್ಟೆ ಮುರಿಬೇಕು ರೊಟ್ಟಿ ತಿನ್ನಬೇಕು'

ನಿಮ್ಮ ಪತ್ರಗಳು

ಭತ್ತದ ಬೆಲೆ ಇಳಿಕೆ, ರೈತರಲ್ಲಿ ಆತಂಕ

ಮಾನ್ಯರೇ,

ರೈತ ಎಂದರೆ ದೇಶದ ಬೆನ್ನೆಲುಬು ಎಂದು ಎಲ್ಲರಿಗೂ ಗೊತ್ತಿದೆ. ಆದರೆ, ದೇಶದ ಏಳಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ರೈತನ ಗೋಳು ಯಾರಿಗೂ



ಬೇಡವಾಗಿದೆ. ಇತ್ತೀಚಿನ ದಿನಗಳಲ್ಲಿ ಭತ್ತದ ಬೆಲೆ ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ. ಕಳೆದ ವರ್ಷದಲ್ಲಿ ಭತ್ತದ ಬೆಲೆ ಒಂದು 2000ರಿಂದ 3000 ರೂ. ಇತ್ತು. ಆದರೆ ಈ ವರ್ಷ ಭತ್ತದ ಬೆಲೆ ತುಂಬಾ ಕಡಿಮೆ ಆಗಿದ್ದು ಈ ವರ್ಷದ ಭತ್ತದ ಮೊತ್ತ 1800ರಿಂದ 2000 ರೂಪಾಯಿ ಆಸುಪಾಸಿನಲ್ಲಿದೆ. ಆದರೆ ಇತರೆ ದಿನಸಿ ಪಧಾರ್ಥಗಳ ಬೆಲೆಯಂತೂ ಭತ್ತಕ್ಕಿಂತಲೂ ಹೆಚ್ಚಿದೆ. ಬಹುತೇಕ ರೈತ ಕುಟುಂಬವು ತಮ್ಮ ವಾರ್ಷಿಕ ಆದಾಯವನ್ನಾಗಿ ಆ ಭತ್ತವನ್ನೇ ನಂಬಿದ್ದಾರೆ. ಇಂದು ಚಿನ್ನಕ್ಕೆ ಇರುವಂತಹ ಬೆಲೆ ತಿನ್ನೋ ಅನ್ನಕ್ಕೆ ಇಲ್ಲ. ಇತ್ತೀಚಿನ ದಿನಗಳಲ್ಲಿ ಭತ್ತ ಬೆಳೆಯುವುದು ಬಹಳ ಕಷ್ಟ. ಆದರೆ, ಭತ್ತಕ್ಕೆ ಉತ್ತಮ ಬೆಲೆ ಇಲ್ಲ. ಸರ್ಕಾರವು ರೈತರಿಗೆ ಅನುಕೂಲವಾಗುವಂತಹ ಸಹಕಾರವನ್ನು ನೀಡಬೇಕು. ಭತ್ತದ ಜೊತೆಗೆ ರೈತರು ಬೆಳೆಯುವ ಇನ್ನಿತರ ಕೃಷಿ ಉತ್ಪನ್ನಗಳಾದ ಹಣ್ಣು, ಕಾಯಿ, ತರಕಾರಿ, ಹೂವುಗಳಿಗೆ ಸರಿಯಾದ ಬೆಲೆ ಸಿಗುವಂತೆ ಮಾಡಬೇಕು. ಇಲ್ಲವಾದಲ್ಲಿ ರೈತರು ಕೃಷಿಗಾಗಿ ಮಾಡಿದ ಸಾಲ ತೀರಿಸಲಾಗದೇ ಆತ್ಮಹತ್ಯೆಯಂತಹ ಮಾರ್ಗಗಳನ್ನು ಹಿಡಿಯುತ್ತಾರೆ. ರೈತರ ಆತ್ಮಹತ್ಯೆ ಅನುಸರಿಸುವುದನ್ನು ತಪ್ಪಿಸಬೇಕು. ರೈತರ ಸಮಸ್ಯೆಗಳ ಬಗ್ಗೆ ಆಲಿಸುವುದು ಸರಕಾರದ ಆದ್ಯ ಜವಾಬ್ದಾರಿ. ರೈತರಲ್ಲಿರುವ ಆತ್ಮಹತ್ಯೆಯಂತಹ ಕೆಟ್ಟ ಆಲೋಚನೆಯಿಂದ ಹೊರಬರಲು ಸರಕಾರಗಳು ಧೈರ್ಯ ನೀಡಬೇಕು ಮತ್ತು ರೈತರಿಗೆ ಸ್ಪಂದಿಸಬೇಕು. **–ಕಿಶೋರ್ ಸಿ., ಮೈಸೂರು.**

ಜೆ.ಪಿ.ನಗರಕ್ಕೆ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣದಲ್ಲಿ ಬೆಳಗಿನ ಸಮಯ



ದಲ್ಲಿ ಜನದಟ್ಟಣೆ ಇರುತ್ತದೆ. ಸಹಜವಾಗಿ ಇದು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಮತ್ತು ನೌಕರರು ತಮ್ಮ ಕಚೇರಿಗಳಿಗೆ ತೆರಳುವ ಸಮಯವಾಗಿರುತ್ತದೆ. ಈ ಸಮಯದಲ್ಲಿ ಸಮರ್ಪಕ ಬಸ್ ಸೌಲಭ್ಯವಿಲ್ಲದೆ ಪ್ರಯಾಣಿಕರು ಪರದಾಡುವಂತಾಗಿದೆ. ಕೋವಿಡ್ ಸಮಯದಲ್ಲಿ ಸ್ಥಗಿತವಾಗಿದ್ದ 10ಎ, 11 ಆರ್, 11 ಆರ್‌ಜಿ, 62 ಆರ್‌ಜೆ, 15, 11ಸಿ, 135 ಬಸ್‌ಗಳು ಇದುವರೆಗೂ ಕಾರ್ಯಾಚರಣೆ ಆಗಿಲ್ಲ. ಇದು ಸಮಸ್ಯೆ ಉಲ್ಬಣವಾಗಲು ಕಾರಣವಾಗಿದೆ. ತಂಗುದಾಣಗಳಲ್ಲಿ ಅಳವಡಿಸಿರುವ ಬಸ್‌ಗಳ ಆಗಮನದ ಬಗ್ಗೆ ಮಾಹಿತಿ ನೀಡುವ ವಿದ್ಯುನ್ಮಾನ ಫಲಕಗಳು ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದಾಗಿ ಪ್ರಯಾಣಿಕರಿಗೆ ಬಸ್‌ಗಳು ಯಾವಾಗ ಬರುತ್ತದೆ ಎಂಬುದರ ಬಗ್ಗೆ ಮಾಹಿತಿ ಇಲ್ಲದೆ ಅನಿಶ್ಚಿತತೆಯಿಂದ ಕಾಯುವಂತಾಗಿದೆ. ಪ್ರಸ್ತುತ ಶಕ್ತಿ ಯೋಜನೆಯಿಂದ ಸರ್ಕಾರಿ ಬಸ್‌ಗಳು ಯಾವಾಗಲೂ ಜನದಟ್ಟಣೆಯಿಂದ ಕೂಡಿರುತ್ತದೆ. ಬಸ್‌ಗಳ ಅಭಾವದಿಂದಾಗಿ ನಿತ್ಯ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳು ಸಕಾಲದಲ್ಲಿ ತಮ್ಮ ಕಾರ್ಯ ಸ್ಥಳಗಳಿಗೆ ತಲುಪಲು ತೊಂದರೆಯಾಗುತ್ತಿದೆ. ಅನಿವಾರ್ಯವಾಗಿ ದುಬಾರಿ ಹಣ ನೀಡಿ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ತೆರಳುವಂತಾಗಿದೆ. ಆದಕಾರಣ ಸಂಬಂಧಪಟ್ಟ ನಗರ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಿ, ಆದಷ್ಟು ಶೀಘ್ರ ಕೋವಿಡ್ ಸಮಯದಲ್ಲಿ ಸ್ಥಗಿತವಾಗಿದ್ದ ನಗರ ಸಾರಿಗೆ ಬಸ್‌ಗಳನ್ನು ಮರು ಕಾರ್ಯಾಚರಣೆಗೊಳಿಸಬೇಕು ಮತ್ತು ಬಸ್‌ಗಳ ಆಗಮನದ ಬಗ್ಗೆ ಮಾಹಿತಿ ನೀಡುವ ವಿದ್ಯುನ್ಮಾನ ಫಲಕವನ್ನು ಸಮರ್ಪಕವಾಗಿ ಚಾಲನೆಗೊಳಿಸಬೇಕೆಂದು ಈ ಮೂಲಕ ಮನವಿ. **–ಪದ್ಮಾ ಮುರಳೀಧರ್, ಜೆ.ಪಿ.ನಗರ, ಮೈಸೂರು.**

ಮೈಸೂರು ಪಾಲಿಕೆಯ ಅಚ್ಚರಿ ನಡೆ...!

ಮಾನ್ಯರೆ,

ಮೈಸೂರಿನ ಸರಸ್ವತಿಪುರಂ ಮತ್ತು ಕುವೆಂಪುನಗರದ 150ಕ್ಕೂ ಹೆಚ್ಚು ನಾಗರಿಕರು 2018ರಲ್ಲಿ ಸರಸ್ವತಿಪುರಂನ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಬೇಕ್ ಪಾಯಿಂಟ್ ಎಂಬ ವೃತ್ತಕ್ಕೆ ಜಗದಕವಿ ಯುಗದ ಕವಿ ಕರ್ನಾಟಕ ರತ್ನ ಕುವೆಂಪು ಅವರ ಪತ್ನಿಯವರ ಹೆಸರಾದ ಹೇಮಾವತಿ ಅವರ ಹೆಸರನ್ನು ನಾಮಕರಣ ಮಾಡಲು ಕೋರಿ ಮಹಾನಗರಪಾಲಿಕೆಗೆ ಮನವಿ ಸಲ್ಲಿಸಿದ್ದೆವು.

ಆದರೆ ವಿಜಯಶ್ರೀಪುರ ಎಂಬ ರೆವಿನ್ಯೂ ಬಡಾವಣೆಯಲ್ಲಿ ಶರಾವತಿ, ಹೇಮಾವತಿ, ವೇದಾವತಿ, ನೇತ್ರಾವತಿ ಎಂಬ ಹೆಸರಿನ ಸಣ್ಣ ಸಣ್ಣ ರಸ್ತೆಗಳಿವೆ. ಆದುದರಿಂದ ಸರಸ್ವತಿಪುರಂ ವೃತ್ತಕ್ಕೆ ಹೇಮಾವತಿ ವೃತ್ತ ಎಂದು ಹೆಸರು ಕೊಡಲಾಗುವುದಿಲ್ಲ ಎಂದು ಮೈನಾಪ/ನಾಮಕರಣ/98/19–20ರ ಪತ್ರದ ಮೂಲಕ ತಿಳಿಸಿತ್ತು. ಮತ್ತೆ ಸ್ವಲ್ಪ ಹೆಸರನ್ನು ಬದಲಾಯಿಸಿ ಹೇಮಾವತಿ ಕುವೆಂಪು ವೃತ್ತ ಎಂದು ನಾಮಕರಣ ಮಾಡಲು 19–01–2022ರಂದು ಮತ್ತೆ ಮನವಿ ನೀಡಿದೆವು. ಆದರೆ, 2024ರಲ್ಲೂ 9 ವಲಯ ಕಚೇರಿಗಳಲ್ಲಿ ಕೆಲವು ವಲಯ ಕಚೇರಿಗಳಿಂದ ಇನ್ನೂ ಅನುಮೋದನೆ ಬಂದಿಲ್ಲ ಎಂದರು.

ನೋಡಿ ರಾಷ್ಟ್ರಕವಿ ಪದ್ಮವಿಭೂಷಣ ಕುವೆಂಪು ಅವರ ಧೀಶಕ್ತಿಯಾಗಿದ್ದ ಅವರ ಪತ್ನಿಯ ಹೆಸರನ್ನು ಅವರ ಪ್ರತಿಮೆ ಇರುವ ವಿಶ್ವಮಾನವ ಜೋಡಿ ರಸ್ತೆಯಲ್ಲಿ ನಾಮಕರಣ ಮಾಡಲು ವರ್ಷಾನುಗಟ್ಟಲೇ ಆದರೂ ಅನುಮೋದನೆ ನೀಡದ ವಲಯ ಕಚೇರಿಗಳು ಸಿದ್ದರಾಮಯ್ಯನವರ ಹೆಸರನ್ನು ಪ್ರಿನ್ಸೆಸ್ ರಸ್ತೆಗೆ ನಾಮಕರಣ ಮಾಡಲು 9 ವಲಯ ಕಚೇರಿಗಳು ಒಂದೇ ವಾರದಲ್ಲಿ ಅನುಮೋದನೆ ನೀಡಿರುವುದು ನಿಜಕ್ಕೂ ಆಶ್ಚರ್ಯ.

–ಅರಕೆರೆ ದೇವರಾಜು, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಸ್ನೇಹವೇ ಭಾವ ಸೇತುವೆ

ಕುಚುಕು... ಕುಚುಕು... ಕುಚುಕು... ನೀನು ಚಡ್ಡಿ ದೋಸ್ತಿ ಕಣೊ ಕುಚುಕು... ದೋಸ್ತಿ ಮ್ಯಾಲೆ ಕೋಪಬೇಡ ಕುಚುಕು... ಸ್ನೇಹಕ್ಕೆ ಸ್ನೇಹ... ಪ್ರೀತಿಗೆ ಪ್ರೀತಿ... ನಾನು ಸ್ನೇಹಜೀವಿ, ನೀನು ಸ್ನೇಹಜೀವಿ, ಲೋಕದಲ್ಲಿ ಸ್ನೇಹಚಿರಂಜೀವಿ.... ಹಾಡು ಬಾರೋ ಸ್ನೇಹಜೀವಿ.... ರಕ್ತಸಂಬಂಧಗಳ ಮೀರಿದ ಬಂಧವಿದು ಯಾವ ಬಿಂದುವಿನಲ್ಲಿ ಸಂಧಿಸಿಹುದು?

ಹೀಗೆ ಸಾಗುವ ಹಾಡುಗಳ ಝಲಕ್ ಸ್ನೇಹದ ಬಂಧುತ್ವವನ್ನು ತುಂಬಾ ಎತ್ತರದಲ್ಲಿ ಪ್ರತಿಬಿಂಬಿಸಿರುವುದು ಸ್ನೇಹದ ಭಾವಸೇತುವೆಯನ್ನು ಸುವರ್ಣ ಚೌಕಟ್ಟಿನಲ್ಲಿ ಅಡಕಗೊಳಿಸಿ ಅನುಭಾವದ ಕಾವ್ಯ ಲಹರಿಯೇ ಅದರ ಮಹತ್ತನ್ನು ಅನಾವರಣಗೊಳಿಸುವುದು. ಹಾಗೆ ನೋಡಿದರೆ ಸ್ನೇಹದ ಕುಸುಮವು ಪ್ರತಿಯೊಬ್ಬರ ಹೃದಯದಲ್ಲು ಅರಳುವುದಾಗಿದೆ. ಎಲ್ಲರ ಬದುಕಿನಲ್ಲೂ ಗೆಳೆತನ ಎಂಬುದು ಪ್ರಧಾನವಾದ ಪಾತ್ರ ವಹಿಸಿರುತ್ತದೆ. ಬಂಧುಗಳಿಲ್ಲದೆ ಬದುಕಬಹುದೇನೋ ಆದರೆ ಗೆಳೆತನವಿಲ್ಲದೆ, ಗೆಳೆಯರಿಲ್ಲದೇ ಬದುಕು ನಡೆಸುವುದು ಕಷ್ಟ. ಗೆಳೆತನ ಎಂದರೆ ಸೋಲು–ಗೆಲುವು, ನೋವು–ನಲಿವು ಎಂತಹದ್ದೇ ಪರಿಸ್ಥಿತಿ ಬಂದರು ಜೊತೆಯಾಗಿ ನಿಲ್ಲುವಂಥದ್ದು. ಇಂತಹ ಸ್ನೇಹ ದೊರೆತರೆ ಮಾತ್ರ ಬದುಕು ಬಂಗಾರವಾಗಲು ಸಾಧ್ಯ.

ಸ್ನೇಹವೆಂದರೆ ನಂಬಿಕೆ: ಗೆಳೆತನ ಎಂಬುದು ನಂಬಿಕೆಯ ತಳಹದಿ ಮೇಲೆ ನಿಂತಿರುವಂತದ್ದು. ಎಂತಹ ಪರಿಸ್ಥಿತಿ ಎದುರಾದರೂ, ಇಡೀ ಪ್ರಪಂಚವೇ ತನ್ನ ವಿರುದ್ಧ ತಿರುಗಿಬಿದ್ದರೂ ನನ್ನ ಜೊತೆ ನಿಲ್ಲಬಲ್ಲ ಗೆಳೆಯ ಇರುವನು ಎಂಬ ನಂಬಿಕೆ ನಮಗಿದ್ದಲ್ಲಿ ಅದು ನಿಜವಾದ ಗೆಳೆತನ ಎನಿಸಿಕೊಳ್ಳುತ್ತದೆ. ಇಂತಹ ಗೆಳೆತನ ಸಿಗುವುದು ಅಪರೂಪ. ನಂಬಿಕೆ ಎಂಬ ಸೇತುವೆ ಮೇಲೆ ಗೆಳೆತನ ಎಂಬ ಅಣೆಕಟ್ಟನ್ನು ಭದ್ರವಾಗಿ ಕಟ್ಟುವ ಕೆಲಸ ನಮ್ಮದಾಗಬೇಕು. ಇಂತಹ ನಂಬಿಕೆಯನ್ನು ತಿಳಿಸುವಂತಹ ಕಥೆ ನಮ್ಮ ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಸ್ನೇಹದ ಸದ್ವಿಚಾರದ ಬಗ್ಗೆ ಹಲವಾರು ಸಾಹಿತ್ಯ ಕೃತಿಗಳಲ್ಲಿ ಕವಿ ಹೃದಯಗಳು ಉತ್ಕಟವಾಗಿ ಚಿತ್ರಿಸಿರುವುದು ನಾವು ಗಮನಿಸಬೇಕಾದ ಸಂಗತಿ. ಪುರಾಣದ ಕಾಲದಿಂದಲೂ ಸ್ನೇಹವನ್ನು, ಸ್ನೇಹದ ಮಹತ್ವವನ್ನು ಸಾರುವಂತಹ ಮಹಾಕಾವ್ಯಗಳು–ಕಥೆಗಳು ರಚಿತಗೊಂಡಿವೆ. ಕನ್ನಡದ ಆದಿಮಹಾಕವಿಯಾಗಿರುವ ಪಂಪ ತನ್ನ ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ ದುರ್ಯೋಧನ ಮತ್ತು ಕರ್ಣನ ಸ್ನೇಹದ ತೀವ್ರತೆಯನ್ನು ವ್ಯಕ್ತಪಡಿಸುವಲ್ಲಿ ಮೂಲ ಮಹಾಭಾರತದಲ್ಲಿ ಇಲ್ಲದ ಪ್ರಸಂಗ ತಂದಿಡುತ್ತಾನೆ. ಒಮ್ಮೆ ದುರ್ಯೋಧನ ಮಡದಿ ಭಾನುಮತಿ ಮತ್ತು ದುರ್ಯೋಧನ ಸ್ನೇಹಿತನಾದ ಕರ್ಣ ಪಗಡೆಯಾಟ ಆಡುತ್ತಿರುತ್ತಾರೆ. ಆಟದಲ್ಲಿ ಸೋತವರು ಗೆದ್ದವರಿಗೆ ಮುತ್ತಿನ ಸರವನ್ನು ಕೊಡಬೇಕೆಂಬ ಒಪ್ಪಂದವಾಗಿರುತ್ತದೆ. ಆಟದಲ್ಲಿ ಭಾನುಮತಿ ಸೋತಾಗ ಕರ್ಣ ಮುತ್ತಿನ ಸರವನ್ನು ಕೇಳುತ್ತಾನೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಚಿನ್ನದ ಆಭರಣಗಳ ಬಗ್ಗೆ ತೀವ್ರವಾದ ವ್ಯಾಮೋಹ ಹೆಚ್ಚಾಗಿ ಇರುವುದರಿಂದ ಭಾನುಮತಿ ಮುತ್ತಿನ ಸರ ಕೊಡಲು ನಿರಾಕರಿಸುತ್ತಾಳೆ. ಒಂದು ಕ್ಷಣ ಮೈಮರೆತ ಕರ್ಣ ಅವಳಿಂದ ಚಿನ್ನದ ಸರವನ್ನು ಕಸಿದುಕೊಳ್ಳಲು ಪ್ರಯತ್ನಿಸಿದಾಗ ಅದನ್ನು ಭಾನುಮತಿ ವಿರೋಧಿಸುವ ಮನೋಇಚ್ಛೆಗೆ ಜಾರುತ್ತಾಳೆ. ಈ ಸಂದರ್ಭದಲ್ಲಿ ಮುತ್ತಿನ ಸರವು ಕರ್ಣನ ಕೈಯ ರಭಸವನ್ನು ತಾಳಲಾರದೆ ಸರವು ತುಂಡಾಗಿ ಅದರಲ್ಲಿನ ಮುತ್ತುಗಳು ಸಿಡಿದು ನೆಲದ ಒಡಲಲ್ಲಿ ಬೀಳುತ್ತಿರುತ್ತವೆ. ಆಗಲೇ ಆಗಮಿಸಿದ ದುರ್ಯೋಧನನ್ನು ನೋಡಿ ಅನಿರೀಕ್ಷಿತ ಇರವು ಈರ್ವರ ಅಂತರಂಗವನ್ನು ನಡುಗಿಸುತ್ತದೆ. ಬಹುಶಃ ಎಷ್ಟೇ ಆಪ್ತಮಿತ್ರನಾಗಿದ್ದರೂ ತನ್ನ ಹೆಂಡತಿಯ ಕುತ್ತಿಗೆಗೆ ಕೈಹಾಕಿ ಸರ ಕಸಿದುಕೊಳ್ಳುವ ಉದ್ಧಟತನವನ್ನು ಮಾಡಿರುವುದನ್ನು ನೋಡಿದರೆ ಎಂತವರಿಗಾದರೂ ರೋಷ ಉಕ್ಕುವುದು ಸಹಜ. ಆದರೆ ಪಂಪನ ದುರ್ಯೋಧನ ಕರ್ಣನನ್ನು ಈ ರೀತಿ ಕೇಳುತ್ತಾನೆ ಮುತ್ತಿನ ಸರವನ್ನು ಆಯ್ದುಕೊಡಲೇ ಅಥವಾ ಪೋಣಿಸಿ ಕೊಡಲೇ ಎಂದು ಪ್ರಶ್ನಿಸುವ ಮೂಲಕ ಕರ್ಣನ ಮೇಲೆ ತನಗಿರುವ ಅಪಾರವಾದ ನಂಬಿಕೆ ವ್ಯಕ್ತಪಡಿಸುತ್ತಾನೆ. ಕರ್ಣ ತನ್ನ ಉದ್ಧಟತನಕ್ಕೆ ಕ್ಷಮೆ ಕೋರುತ್ತಾನೆ. ಕೆಲವು ವಿದ್ವಾಂಸರು ಮೂಲದಲ್ಲಿ ಇಲ್ಲದ ಈ ಪ್ರಸಂಗ ಪಂಪ ಸೇರಿಸಿದ್ದಾನೆ ಎಂದರೆ ಇದು ಪಂಪ ಮತ್ತು ಅವನ ಆಶ್ರಯದಾತನಾದ ಅರಿಕೇಸರಿಯ ಜೀವನದಲ್ಲಿ ನಡೆದಿರಬಹುದಾದ ಘಟನೆ ಇರಬಹುದು ಎಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ.

ಇದೇ ಕರ್ಣ ತಾನು ಪಾಂಡವರಲ್ಲಿ ಹಿರಿಯ ಎಂದು ವಿಷಯ ಗೊತ್ತಾದರೂ ತಾನು ದುರ್ಯೋಧನ ಪರವಾಗಿ ನಿಂತು ಯುದ್ಧ ಮಾಡುತ್ತೇನೆ ಎಂದು ತನ್ನ ನಿಲುವನ್ನು ಬದಲಿಸಿದ ಕರ್ಣ ಸೋಲುತ್ತೇನೆ, ಸಾಯುತ್ತೇನೆ ಎಂದು ತಿಳಿದಿದ್ದರೂ ಯಾವುದೇ ಕಾರಣಕ್ಕೂ ದುರ್ಯೋಧನ ಬಿಟ್ಟು ಕೊಡುವುದಿಲ್ಲ. ಅವನನ್ನು ಬಿಟ್ಟು ಪಾಂಡವರ ಸೇನೆಯನ್ನು ಸೇರುವುದು ಇಲ್ಲ. ನಿಜವಾದ ಗೆಳೆತನ ಇದು. ಮಹಾಭಾರತ ನಡೆದಿತ್ತೇ? ಕರ್ಣ ಅಷ್ಟು ಒಳ್ಳೆಯವನೇ? ಎಂಬಿತ್ಯಾದಿ ಅತಾರ್ಕಿಕ ಪ್ರಶ್ನೆಗಳನ್ನಾಕಿ ತಲೆಕೆಡಿಸಿಕೊಳ್ಳುವ ಬದಲು ಕಥೆ ಕೊಡುವ ಸಂದೇಶವನ್ನು ಅರ್ಥಮಾಡಿಕೊಂಡರೆ ನಿಜವಾದ ಗೆಳೆತನ ಯಾವುದನ್ನೂ ನಿರೀಕ್ಷೆ ಮಾಡುವುದಿಲ್ಲ, ನಂಬಿಕೆ ಎಂಬುದು ಗೆಳೆತನಕ್ಕೆ ಅಡಿಪಾಯವಾದುದು ಎಂಬುದನ್ನು ಗ್ರಹಿಸಬಹುದು.

ಬಡತನ–ಸಿರಿತನ ಸ್ನೇಹಕ್ಕೆ ಮುಖ್ಯ: ಸ್ನೇಹ ಎರಡು ನಿಷ್ಕಲ್ಮಶ ಹೃದಯಗಳ ಆತ್ಮ ನಿವೇದನೆ ಇದು ಅಕ್ಕರೆ–ಒಲುಮೆಯನ್ನು ಮಿಗಿಲಾಗಿ ಭಾವಿಸಿ ಬಡವ ಬಲ್ಲಿದ ಎನ್ನದೆ ಅಂಕುರಗೊಳ್ಳುವ ರಸಬಳ್ಳಿ. ನಿಜವಾದ ಗೆಳೆತನಕ್ಕೆ ಬಡವ–ಶ್ರೀಮಂತ, ಮೇಲು–ಕೀಳು ಎಂಬ ಭೇದ ಭಾವ ಇರಲಾರದು. ಇವೆಲ್ಲವನ್ನು ಮೀರಿದ್ದು ನಿಜವಾದ ಗೆಳೆತನ ಎನಿಸಿಕೊಳ್ಳುತ್ತದೆ. ನನಗೆ ಇದನ್ನು ಹೇಳುವಾಗ ಕೃಷ್ಣ–ಕುಚೇಲರ ಕಥೆ ನೆನಪಿಗೆ ಬರುತ್ತದೆ.



> "ಎಲ್ಲರ ಬದುಕಿನಲ್ಲೂ ಗೆಳೆತನ ಎಂಬುದು ಪ್ರಧಾನವಾದ ಪಾತ್ರ ವಹಿಸಿರುತ್ತದೆ. ಬಂಧುಗಳಿಲ್ಲದೆ ಬದುಕಬಹುದೇನೋ ಆದರೆ ಗೆಳೆತನವಿಲ್ಲದೆ, ಗೆಳೆಯರಿಲ್ಲದೇ ಬದುಕು ನಡೆಸುವುದು ಕಷ್ಟ. ಗೆಳೆತನ ಎಂದರೆ ಸೋಲು–ಗೆಲುವು, ನೋವು–ನಲಿವು ಎಂತಹದ್ದೇ ಪರಿಸ್ಥಿತಿ ಬಂದರು ಜೊತೆಯಾಗಿ ನಿಲ್ಲುವಂಥದ್ದು. ಇಂತಹ ಸ್ನೇಹ ದೊರೆತರೆ ಮಾತ್ರ ಬದುಕು ಬಂಗಾರವಾಗಲು ಸಾಧ್ಯ.

ಕಥೆ: ಕೃಷ್ಣ ಶ್ರೀಮಂತ, ಕುಚೇಲ ಕಡು ಬಡವ. ಒಮ್ಮೆ ಕುಚೇಲ ಕಷ್ಟದ ಪರಿಸ್ಥಿತಿ ಅನುಭವಿಸುತ್ತಿರಬೇಕಾದರೆ ಆತನ ಮಡದಿ ನಿಮ್ಮ ಗೆಳೆಯ ಶ್ರೀಕೃಷ್ಣನ ಸಹಾಯವನ್ನು ಕೇಳಿ ಎಂದು ಒತ್ತಾಯಿಸಿದಾಗ; ಅವಳ ಮಾತಿಗೆ ಇಲ್ಲವೆನ್ನಲಾಗದೇ ಗೆಳೆಯನನ್ನು ಕಾಣಲು ಆತನಿಗೆ ಇಷ್ಟವಾದ ಅವಲಕ್ಕಿ ತೆಗೆದುಕೊಂಡು ಕೃಷ್ಣನನ್ನು ಭೇಟಿಯಾಗಲು ಕುಚೇಲನು ಹೋಗುತ್ತಾನೆ. ಕುಚೇಲನನ್ನು ತನ್ನ ಅರಮನೆಯಲ್ಲಿ ಕಂಡೊಡನೆ ಅತಿ ಆನಂದದಿಂದ ಕೃಷ್ಣ ಅವನನ್ನು ಸತ್ಕರಿಸುತ್ತಾನೆ. ಅವನಿಗೆ ಭಕ್ಷ್ಯ–ಭೋಜನಾದಿಗಳನ್ನು ಬಡಿಸಿ ಕುಚೇಲನಿಗೆ ಸತ್ಕರಿಸಿದಾಗ ಕೃಷ್ಣನ ವಿನಯವಂತಿಕೆ, ಸರಳತೆಗೆ ಮನಸೋತ ಕುಚೇಲ ಮುಜುಗರಕ್ಕೀಡಾಗುತ್ತಾನೆ. ಅಷ್ಟೇ ಅಲ್ಲ ತಾನು ತಂದ ಅವಲಕ್ಕಿಯನ್ನು ಹೇಗೆ ನೀಡಲಿ ಎಂದು ತೊಳಲಾಡುವಾಗ ಸ್ವತಃ ಕೃಷ್ಣನೇ ಅದನ್ನು ತೆಗೆದುಕೊಂಡು ತಿಂದು ತನ್ನ ಮಡದಿಯರಿಗೂ ಕೊಟ್ಟು ಸಂತೋಷಪಡುವ ಪರಿಯನ್ನು ನೋಡಿದಾಗ ಕುಚೇಲನ ಬಾಯಿ ಕಟ್ಟಿದಂತಾಗುತ್ತದೆ. ತಾನು ಬಂದ ಉದ್ದೇಶವನ್ನೇ ಮರೆಯುತ್ತಾನೆ. ಇಷ್ಟು ಪ್ರೀತಿ ತೋರುವ ಗೆಳೆಯನ ಮುಂದೆ ತನ್ನ ಕಷ್ಟವನ್ನು ಹೇಳಿಕೊಳ್ಳದೆ ಕೇವಲ ನಿನ್ನನ್ನು ನೋಡಿ ಹೋಗಲು ಬಂದಿರುವುದಾಗಿ ಹೇಳಿ ತನ್ನ ಮನೆಗೆ ಹಿಂತಿರುಗುತ್ತಾನೆ. ತನ್ನ ಮನೆಗೆ ಹಿಂತಿರುಗಿ ಬಂದ ಕುಚೇಲನಿಗೆ ಆಶ್ಚರ್ಯ ಕಾದಿರುತ್ತದೆ. ಆತನ ಮನೆ ಮೊದಲಿನಂತಿರದೆ ಸಂಪೂರ್ಣವಾಗಿ ಬದಲಾಗಿರುತ್ತದೆ. ಆಶ್ಚರ್ಯಗೊಂಡ ಕುಚೇಲ ತನ್ನ ಮಡದಿಯನ್ನು ಪ್ರಶ್ನಿಸಿದಾಗ ಕೃಷ್ಣನ ಕಡೆಯವರೆ ಬಂದು ಎಲ್ಲವನ್ನು ಬದಲಿಸಿದ್ದಾಗಿ ತಿಳಿಸುತ್ತಾಳೆ. ಅಷ್ಟೇ ಅಲ್ಲದೆ ತಮ್ಮ ಕಷ್ಟಗಳು ದೂರಾಗಿ ಹೋದುದ್ದನ್ನು ತಿಳಿಸುತ್ತಾಳೆ. ಕೃಷ್ಣನ ಈ ಸಹಾಯಕ್ಕೆ ಕುಚೇಲನಿಗೆ ಏನು ಹೇಳಬೇಕೆಂಬುದೇ ತಿಳಿಯದಂತಾಗುತ್ತದೆ. ಕಥೆಯಲ್ಲಿನ ಅಂಶ ಕೆಲವರಿಗೆ ಅತಿಶಯೋಕ್ತಿ ಎಂದೆನಿಸಬಹುದು. ಆದರೆ ಕಥೆ ತಿಳಿಸುವ ಅಂಶ ಮುಖ್ಯವಾಗಿದೆ. ಗೆಳೆಯನಿಗೆ ಏನು ಬೇಕು ಅದನ್ನು ತಿಳಿದುಕೊಂಡು ಅದನ್ನು ಆತನಿಗೆ ತಿಳಿಯದಂತೆ ನೀಡುವ ಕೃಷ್ಣ, ಗೆಳೆಯನ ಸರಳತೆ ಮೆಚ್ಚಿ ಏನನ್ನು ಕೇಳದೆ ಹಿಂತಿರುಗುವ ಕುಚೇಲ ನಿಜವಾದ ಗೆಳೆತನ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿ ನಿಲ್ಲುತ್ತಾರೆ.

ಪ್ರತಿಫಲದ ಅಪೇಕ್ಷೆ ಇಲ್ಲದ್ದು ನಿಜವಾದ ಗೆಳೆತನ: ಲಾಭದ ಜಗತ್ತಿನಲ್ಲಿ ನಿರೀಕ್ಷೆಯಲ್ಲಿ ನಿರೂಪಗೊಳ್ಳುವ ವಿರೂಪ ಸಂಬಂಧಗಳೇ ಇಂದು ಹೇರಳವಾಗಿರುವಾಗ ಅದು ಅಲ್ಲದೆ ಹುಟ್ಟುತ್ತಾ ಅಣ್ಣ–ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎಂಬ ಅನುಭವದ ಮಾತೊಂದಿದೆ. ಒಡಹುಟ್ಟಿದವರೇ ದೂರವಾದವರಂತೆ ಬದುಕುವ ಇವತ್ತಿನ ದಿನಮಾನಗಳಲ್ಲಿ ನಿಜಕ್ಕೂ ಒಂದೇ ಕರುಳ ಬಳ್ಳಿಗಳಂತೆ ಬದುಕುವ ಸ್ನೇಹದ ಸೆಳಕು ಅಂತರಂಗದ ಬೆಳಕಾಗಿ ಗೋಚರವಾಗುತ್ತದೆ. ನಿಜವಾದ ಗೆಳೆತನ ಪ್ರತಿಫಲದ ಅಪೇಕ್ಷೆಯನ್ನು ಮಾಡಲಾರದು. ನಾನು ಅವನಿಗೆ ಸಹಾಯ ಮಾಡಿದ್ದೇನೆ, ಅವನು ನನಗೆ ಸಹಾಯ ಮಾಡಬೇಕು. ಅಥವಾ ನನ್ನ ಕಷ್ಟದಲ್ಲಿ ಅವನು ಸಹಾಯ ಮಾಡಲೇಬೇಕು ಎಂಬಿತ್ಯಾದಿ ಪ್ರತಿಫಲದ ಅಪೇಕ್ಷೆಯನ್ನು ನಿಜವಾದ ಗೆಳೆತನ ನಿರೀಕ್ಷಿಸಲಾರದು. ಗೆಳೆತನ ಎಂದರೆ ಯಾವಾಗಲೂ ಮಾತನಾಡುತ್ತಿರಬೇಕು, ನನ್ನ ಕಷ್ಟಕ್ಕೆ ಅವನು/ಅವಳು ಸ್ಪಂದಿಸಲೇಬೇಕು, ನನ್ನೊಂದಿಗೆ ಬಿಟ್ಟು ಮತ್ತ್ಯಾರೊಂದಿಗೆ ಆತ್ಮೀಯರಾಗಿರಬಾರದು ಎಂಬ ಸಣ್ಣ ಪುಟ್ಟ ಮನಸ್ತಾಪಗಳನ್ನೇ ದೊಡ್ಡದಾಗಿ ಮಾಡಿಕೊಂಡು ಮಾತನಾಡದೇ ಇರಬೇಕೆನ್ನುವ ಸಣ್ಣತನಗಳನ್ನು ಮೀರಿ ನಿಲ್ಲುವಂತದ್ದೆ ನಿಜವಾದ ಗೆಳೆತನ.

ಬೈಯ್ದು ಬುದ್ಧಿ ಹೇಳುವ ಗುಣ: ಗೆಳೆತನ ಎಂದರೆ ತಪ್ಪುಗಳಿಗೆ ಪ್ರೋತ್ಸಾಹ ಕೊಡುವುದಿಲ್ಲ. ಒಳ್ಳೆಯ ವಿಷಯಗಳಿಗೆ ಪ್ರೋತ್ಸಾಹವನ್ನು ನೀಡುತ್ತಾ ಕೆಟ್ಟ ವಿಚಾರಗಳಿಗೆ ಬೈದು ಬುದ್ಧಿ ಹೇಳಿ, ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡುವುದೇ ನಿಜವಾದ ಗೆಳೆತನ. ದುರಂತ ಎಂದರೆ ಪ್ರಸ್ತುತ ಅಡ್ಡ ಮಾರ್ಗದಲ್ಲಿ ನಡೆಯುವವರಿಗೆ ಗೆಳೆಯರು ಹೆಚ್ಚು. ಕೆಟ್ಟದ್ದನ್ನು ಪ್ರೋತ್ಸಾಹಿಸುವ ಅವರೇ ಜಾಸ್ತಿ ಕಂಡು ಬರುತ್ತಾರೆ. ನಮ್ಮ ಜೊತೆಗಿದ್ದು ಕೆಟ್ಟದ್ದನ್ನು ಮಾಡಲು ಪ್ರೇರಣೆ ನೀಡಿ ನಾವು ಸಿಕ್ಕಿ ಹಾಕಿಕೊಂಡಾಗ ನಮ್ಮಿಂದ ದೂರ ನಿಲ್ಲುವ ಪ್ರಯತ್ನ ಮಾಡುತ್ತಾರೆ. ಇಂತಹ ಸ್ನೇಹಿತರಿಂದ ದೂರವಿರುವುದು ಒಳಿತು. ನಿಜವಾದ ಗೆಳೆಯ ತಪ್ಪು ದಾರಿಯಲ್ಲಿ ನಡೆಯುವಾಗ ಅದನ್ನು ಖಂಡಿಸಿ, ಸರಿದಾರಿಗೆ ತರುವ ಪ್ರಯತ್ನವನ್ನು ಮಾಡುತ್ತಾನೆ ಅಂತಹ ಸ್ನೇಹವನ್ನು ಉಳಿಸಿಕೊಳ್ಳುವ ಕೆಲಸವನ್ನು ಪ್ರತಿಯೊಬ್ಬರು ಮಾಡಿದಾಗ ನಿಜವಾದ ಗೆಳೆತನದ ಅನುಭವ ನಮ್ಮದಾಗುತ್ತದೆ.

ಹುಸಿ ಮುನಿಸು ತೋರುವ ಗೆಳೆತನ: ಗೆಳೆತನದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕೆಲವೊಮ್ಮೆ ಹುಸಿ ಮುನಿಸು ತೋರುವ ಸಂದರ್ಭಗಳು, ಸನ್ನಿವೇಶಗಳು ಎದುರಾದರೂ ಅದು ಕೂಡ ನಿಜವಾದ ಗೆಳೆತನವಾಗಿರುತ್ತದೆ. ಯಾವಾಗಲೂ ಜೊತೆಯಾಗಿಯೇ ಇರಬೇಕು ಎಂದಾಗಲೀ, ನನಗೆ ಪ್ರಾಧಾನ್ಯತೆ ನೀಡುತ್ತಿಲ್ಲ ಎಂದಾಗಲೀ ಏನಾದರೊಂದು ನೆಪ ಮಾಡಿ ಹುಸಿ ಮುನಿಸು ತೋರುವುದು ನಿಜವಾದ ಗೆಳೆತನದಲ್ಲಿ ಕಂಡುಬರುತ್ತದೆ.

ಆಕಸ್ಮಿಕವಾಗಿ ಸ್ನೇಹ ಬಂಧ ದೂರವಾದರೂ ಗೆಳೆಯನ ಕೊರತೆಗಳನ್ನು ಎತ್ತಿತೋರಿಸದೇ, ತಾನು ಅವನಿಗೆ ಅಷ್ಟು ಸಹಾಯ ಮಾಡಿದ್ದೆ, ನನಗೆ ಮೋಸ ಮಾಡಿಬಿಟ್ಟ ಎಂದು ಕೊರಗದೆ, ಮತ್ತೊಬ್ಬರ ಮುಂದೆ ತನ್ನ ಗೆಳೆಯ/ಗೆಳತಿಯನ್ನು ಸಣ್ಣವನ್ನಾಗಿ ಮಾಡದೇ, ಸಣ್ಣತನಗಳನ್ನು ನಗಣ್ಯ ಎಂದು ಭಾವಿಸಿ ಜೊತೆ ಕಳೆದ ಕ್ಷಣಗಳನ್ನೇ ಮೆಲುಕು ಹಾಕಿಕೊಂಡು ದೂರವಾಗಿದ್ದರೂ ಸ್ನೇಹ ಸಂಬಂಧ ಚಿರಕಾಲವಿರಲಿ ಎಂದು ನಿರೀಕ್ಷಿಸುವ ಸ್ನೇಹ ಬಂಧ ಸಿಕ್ಕರೆ ನಮ್ಮಷ್ಟು ಅದೃಷ್ಟವಂತರು ಬೇರೆ ಯಾರೂ ಸಿಗಲಾರರು. ಈ ಬಗೆಯ ಅಂಶಗಳು ಸ್ನೇಹ ಸೇತುವೆಯ ಬಂಧುತ್ವವನ್ನು ಅಕ್ಷಯದ ಅಕ್ಷರದಲ್ಲಿ ನಿರೂಪಿಸುವ ಕಾರ್ಯವ ಮಾಡಿರುವೆನು ಆದರೆ ಸ್ನೇಹ ಗೆಳೆತನ ಇದಕ್ಕು ಮೀರಿದ ಭಾವಜಲ ತನ್ನ ಅಂತಃಕರಣದಲ್ಲಿ ಇರಿಸಿಕೊಂಡಿರುವುದಂತು ಸತ್ಯ.

ಸ್ನೇಹ

ಅನ್ಯೋನ್ಯ ಭಾವ, ಅನನ್ಯ ಜೀವ,
ಬದುಕಿನಲ್ಲಿ ಏನೇ ಎದುರಾದರೂ
ಬೆಂಬಿಡದಂತೆ ಕಾಪಿಡುವ
ಭರವಸೆಗಳ ದಾರಿಯಲ್ಲಿ ಬೆಳ್ಳಿಚುಕ್ಕಿಗಳ ಕೂಡಿಸುತ,
ಸಕಾರಾತ್ಮಕತೆಯನ್ನು ಬಿತ್ತಿ ಬೆಳೆದು,
ಸಾಧನೆ ದಡ ಸೇರುವಂತೆ ಮಾಡುವ
ನಿಷ್ಕಲ್ಮಶ ಬೆಸುಗೆ–ಜೀವ ಕುಸುಮದ ಭಾವ ಪರಿಮಳ,
ಇಷ್ಟ–ಕಷ್ಟದಲ್ಲಿ ಸ್ನೇಹವೇ ಸೇತುವೆ.

ಸಿದ್ದರಾಮಯ್ಯ ಜಾತಿ ಮೀರಿದ ಆಡಳಿತ ನಡೆಸುತ್ತಿದ್ದಾರೆ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ

ಮೈಸೂರು, ಜ.5(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ ಜಾತಿಯನ್ನು ಮೀರಿದ ಆಡಳಿತ. ಆದರೂ ಕೆಲವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮ್ಮನಿಕೇತನ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಶ್ರೀ ಕನಕದಾಸ ನೌಕರರ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಸಂತ ಶ್ರೇಷ್ಠ ಕನಕದಾಸರ 537ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನಕದಾಸರ ಆಶಯದಂತೆ ಒಂದು ಜಾತಿಯ ಸಂಘಟನೆ ಮಾಡುವುದು ಬೇಡ, ಅಹಿಂದ ಸಂಘಟಿಸೋಣ ಎಂದು ತೀರ್ಮಾನಿಸಿ, 1987ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ರಾಜ್ಯಾದ್ಯಂತ ಕನಕ ಜಯಂತಿ ಆಚರಣೆ ಆರಂಭಿಸಿದ್ದೆವು. ಇದರ ಜೊತೆಗೆ ಕುರುಬರ ಸಂಘಟನೆಯೂ ಮಾಡಲಾಯಿತು ಎಂದರು.



ಸಂತಶ್ರೇಷ್ಠ ಕನಕದಾಸರ 537ನೇ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವವನ್ನು ಪ್ರಶ್ನೆ ಮಾಡುವ ಪರಿಸ್ಥಿತಿ ನಿರ್ಮಿಸುತ್ತಿದ್ದಾರೆ ಹಿಂದುಳಿದ ವರ್ಗ, ಶೋಷಿತ ಸಮುದಾಯ ಮೂಲೆ ಗುಂಪು ಮಾಡಿ ಚಾರಿತ್ರ್ಯ ಹರಣದಲ್ಲಿ ತೊಡಗಿರುವ ಜಾತಿವಾದಿಗಳನ್ನು ತಳ ಸಮುದಾಯಗಳು ಅರಿತುಕೊಳ್ಳಬೇಕು. ಅಹಿಂದ ವರ್ಗಗಳು ಎಚ್ಚೆತ್ತುಕೊಳ್ಳಬೇಕು ಎಂದು ಕರೆ ನೀಡಿದರು.

ಸಮಾನತೆ, ಮಾನವ ಹಕ್ಕುಗಳು ತಳಹದಿಯ ಮೇಲೆ ಸಮಾಜ ನಿರ್ಮಾಣವಾಗಬೇಕು ಎಂಬುದೇ ಕನಕದಾಸರ ಸಂದೇಶ. ಇಂದು ರಾಜ್ಯದ ಮೂಲೆ ಮೂಲೆಯಲ್ಲಿ ಕನಕದಾಸರ ವಿಚಾರಗಳನ್ನು ಹರಡುವ ಕೆಲಸ ನಡೆಯುತ್ತಿದೆ. ಆದರೆ, ಇಂದಿಗೂ ಜಾತಿ ಹೆಸರಿನಲ್ಲಿ ಬೇದ–ಭಾವ ಮಾಡುವ ಕೆಲಸಗಳು ನಡೆಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸಂಘದ ನೂತನ ಕ್ಯಾಲೆಂಡರನ್ನು ಬಿಡುಗಡೆ ಮಾಡಿದ ಶಾಸಕ ಕೆ.ಹರೀಶ್ ಗೌಡ ಮಾತಾಡಿ, ಕನಕದಾಸರ ಆಶಯದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ನಡೆಸುತ್ತಿದ್ದಾರೆ. ಶ್ರೇಷ್ಠ ಆಡಳಿತಗಾರನಿಗೆ ವ್ಯಾಪಕ ಟೀಕೆ–ವಿರೋಧ ವ್ಯಕ್ತವಾಗುವುದು ಸಹಜ. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಇದೆ ಪರಿಸ್ಥಿತಿ ಬಂದೊದಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಗೆ ಸಿದ್ದರಾಮಯ್ಯ ಕೊಟ್ಟಿರುವ ಕೊಡುಗೆಗಳನ್ನು ಆಧರಿಸಿ ರಸ್ತೆಗೆ ಅವರ ಹೆಸರು ನಾಮಕರಣ ಮಾಡಲು ವಿರೋಧ ವ್ಯಕ್ತವಾಗುತ್ತಿದೆ. ಯಾರು ವಿರೋಧ ಮಾಡುತ್ತಿದ್ದಾರೆ ಎಂಬುದು ಜನತೆ ಅರಿಯಬೇಕು. ಅವರೆಲ್ಲರೂ ಕನಕದಾಸರ ಕೀರ್ತನೆಯ ಸಂದೇಶವನ್ನು ತಿಳಿದುಕೊಂಡರೆ ವಿರೋಧ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಹಾಗಾಗಿ ಕನಕದಾಸರ ಕೀರ್ತನೆಗಳು, ಮಾರ್ಗದರ್ಶನವನ್ನು ಅಳವಡಿಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ, ಹುಣಸೂರಿನ ಕಾವೇರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಂಸ್ಥಾಪಕ ಡಾ.ಪಿ.ಎಸ್.ಲೋಹಿತ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ಹಿರಿಯ ಕಾರ್ಮಿಕ ಮುಖಂಡ ಎಂ.ಮಲ್ಲಯ್ಯ, ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಎಚ್.ಟಿ. ವೀರೇಶ್, ಸಂಘದ ಅಧ್ಯಕ್ಷ ಜವರೇಗೌಡ, ಕಾಂಗ್ರೆಸ್ ಮುಖಂಡ ಶಿವಕುಮಾರ್, ಮಲ್ಲಹಳ್ಳಿ ರಾಜೇಶ್, ದೊಡ್ಡೇಗೌಡ ಉಪಸ್ಥಿತರಿದ್ದರು.

ಕರವೇ (ಪ್ರವೀಣ್ ಶೆಟ್ಟಿ ಬಣ) ಹೆಚ್.ಡಿ.ಕೋಟೆ ಪದಾಧಿಕಾರಿಗಳ ಆಯ್ಕೆ

ಮೈಸೂರು, ಜ.5(ಎಂಟಿವೈ)– ಕರ್ನಾಟಕ ರಕ್ಷಣಾ ವೇದಿಕೆಯು (ಪ್ರವೀಣ್ ಶೆಟ್ಟಿ ಬಣ) ಹೆಚ್.ಡಿ.ಕೋಟೆ ತಾಲೂಕು ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಕರ್ನಾಟಕ ರಕ್ಷಣಾ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳಿಗೆ ಕರವೇ ರಾಜ್ಯ ಉಪಾಧ್ಯಕ್ಷ ಜಿ.ಉಮೇಶ್ ಗೌಡ ನೇಮಕಾತಿ ಪತ್ರ ವಿತರಿಸಿದರು. ಬಳಿಕ ಮಾತನಾಡಿದ ಅವರು, ಸಂಘಟನೆಯನ್ನು ಸಕ್ರಿಯವಾಗಿಟ್ಟುಕೊಂಡು ನಾಡು–ನುಡಿ, ನೆಲ–ಜಲದ ವಿಷಯದಲ್ಲಿ ಪ್ರಾಮಾಣಿಕವಾಗಿ ಹೋರಾಟ ನಡೆಸಲು ಪದಾಧಿಕಾರಿಗಳು ಮುಂದಾಗಬೇಕು. ನಾಡಿಗೆ ಸಂಕಷ್ಟ ಪರಿಸ್ಥಿತಿ ಬಂದಾಗ ಸರ್ಕಾರ ಮತ್ತು ಜನರನ್ನು ಎಚ್ಚರಿಸಬೇಕಾದ ಸಂಘಟನೆಗಳು ವೈಯಕ್ತಿಕ ಪ್ರತಿಷ್ಠೆಯಿಂದಾಗಿ ಛಿದ್ರವಾಗುತ್ತಿರುವುದರಿಂದ ಹೋರಾಟದ ಧ್ವನಿ ಕುಗ್ಗಲಿದೆ. ಹೀಗಾಗಿ ಎಲ್ಲ ಸಂಘಟನೆ ಗಳು ಒಂದು ವೇದಿಕೆಗೆ ಬರುವ ಅವಶ್ಯಕತೆ ಇದೆ ಎಂದರು.

ಈ ವೇಳೆ ಹೆಚ್.ಡಿ.ಕೋಟೆ ತಾಲೂಕು ಘಟಕದ ಅಧ್ಯಕ್ಷ ಕ್ರಾಂತಿ ಕುಮಾರ್, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್, ಗೌರವಾಧ್ಯಕ್ಷ ವೆಂಕಟಸ್ವಾಮಿ, ಉಪಾಧ್ಯಕ್ಷ ಚಿಕ್ಕರಾಜು, ಕಾರ್ಯಾಧ್ಯಕ್ಷ ಸಿದ್ದರಾಜು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ನಾಮಪತ್ರ ಸಲ್ಲಿಕೆ



ಜನವರಿ 19ರಂದು ನಡೆಯಲಿರುವ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆಗೆ ಎಸ್‌ಟಿ ವಿಭಾಗದ ನಿರ್ದೇಶಕ ಸ್ಥಾನಕ್ಕೆ ಪಡುವಾರಹಳ್ಳಿ ಎಂ.ರಾಮಕೃಷ್ಣ ಭಾನುವಾರ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೆ. ಉಮಾಶಂಕರ್, ಪಿ. ರಾಜೇಶ್ವರಿ, ಪಿ.ಸವಿತಾ, ಸಂಜೀವಿನಿ ಎಂ.ಕುಮಾರ್, ಎಸ್.ಕೃಷ್ಣಕುಮಾರ್, ಕೇಬಲ್ ಕಿಟ್ಟಿ ಉಪಸ್ಥಿತರಿದ್ದರು

ಒಂದನೇ ಪುಟದಿಂದ

ಒಂಟಿಸಲಗ: ಜೆಸಿಬಿ ಬಳಸಿ ರಕ್ಷಣೆ

ಸಿಮೆಂಟ್ ಪಿಲ್ಲರ್ ಸಡಿಲಗೊಳಿಸಿ, ಪಕ್ಕಕ್ಕೆ ಸರಿಸಲಾಯಿತು. ಇದರಿಂದ ಕಿಷ್ಕಿಂದೆ ಜಾಗದಲ್ಲಿ ಸಿಲುಕಿದ್ದ ಒಂಟಿ ಸಲಗ ಮುಂದೆ ಸಾಗಿ ಬ್ಯಾರಿಕೇಡ್ ದಾಟಿ, ಕಾಡಿನತ್ತ ಸಾಗಿತು. ಸುಮಾರು ಒಂದೂವರೆ ಗಂಟೆ ನರಕಯಾತನೆ ಅನುಭವಿಸಿದ್ದ ಸಲಗ ಕಾಡಿಗೆ ಘೀಳುಡುತ್ತಾ ಓಡಿ ಹೋಯಿತು.

ಜನಜಂಗುಳಿ: ಕಾಡಾನೆ ಸಿಲುಕಿಕೊಂಡಿರುವ ವಿಷಯ ತಿಳಿದು ಸುತ್ತುಮುತ್ತಲಿನ ಗ್ರಾಮ ಹಾಗೂ ಹಾಡಿಗಳ ನಿವಾಸಿಗಳು ಕಾಡಾನೆ ಇದ್ದ ಸ್ಥಳಕ್ಕೆ ಆಗಮಿಸಿ, ಕುತೂಹಲದಿಂದ ಆನೆ ನೋಡಲು ಮುಗಿ ಬಿದ್ದರು. ಅಲ್ಲದೆ, ರಕ್ಷಣಾ ಕಾರ್ಯಾಚರಣೆ ವೀಕ್ಷಿಸಿದರು.

ಶರಣಾಗತಿಗೆ ನಿರ್ಧಾರ

ಮುಖ್ಯವಾಹಿನಿಗೆ ಬಂದ ನಂತರ ಬೇಗನೆ ಜಾಮೀನಿನ ಮೇಲೆ ಹೊರಬರಲು ಸಹಕರಿಸುವಂತೆ ಬೇಡಿಕೆ ಇಡಲಾಗಿದೆ. ● ಎಲ್ಲ ಮೊಕದ್ದಮೆಗಳನ್ನು ಒಂದೇ ನ್ಯಾಯಾಲಯದಡಿಯಲ್ಲಿ ತಂದು ತ್ವರಿತ ವಿಚಾರಣೆ ಮಾಡಬೇಕು. ● ಅವರಿಗೆ ಆರ್ಥಿಕ ನೆರವು ಒದಗಿಸುವ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಹಾಗೂ ಹೊರಬಂದ ನಂತರ ಅವರ ಜೀವನಕ್ಕೆ ದಾರಿ ಏನು ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು. ● ಈಗಾಗಲೇ ಮುಖ್ಯವಾಹಿನಿಗೆ ಬಂದಂತಹ ಹಲವರ ಬದುಕು ಅತಂತ್ರವಾಗಿದೆ. ಅವರ ಕೇಸ್‌ಗಳ ಇತ್ಯರ್ಥಕ್ಕೆ ಹಾಗೂ ಬದುಕಿನ ಭದ್ರತೆಗೆ ತಕ್ಷಣ ಕ್ರಮಕೈಗೊಳ್ಳಬೇಕು ಹಾಗೂ ಬೇರೆ ಬೇರೆ ಜೈಲುಗಳಲ್ಲಿರುವ ಸಂಗಾತಿಗಳಿಗೆ ಕೂಡ ಈ ಪ್ಯಾಕೇಜ್ ಅನ್ವಯವಾಗು ವಂತೆ ಮಾಡಿ. ಅವರ ಬಿಡುಗಡೆಗೆ ಸಹಕರಿಸುವಂತೆ ಬೇಡಿಕೆ ಇಡಲಾಗಿದೆ. ● ಈ ಎಲ್ಲ ವಿಚಾರಗಳಲ್ಲಿ ಕರ್ನಾಟಕ, ಕೇರಳ, ತಮಿಳುನಾಡು 3 ರಾಜ್ಯಗಳ ನಿಲುವು ಒಂದೇ ಆಗಿರುತ್ತದಾ ಎಂದು ಸ್ಪಷ್ಟತೆ ಕೋರಿದ್ದಾರೆ.

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ನಕ್ಸಲೀಯರಿಗೆ ಶರಣಾಗುವಂತೆ ಕರೆ ನೀಡಿದ್ದರು. ಆ ಮೂಲಕ ಕರ್ನಾಟಕದ ಎಲ್ಲಾ ನಕ್ಸಲೀಯರು ಮುಖ್ಯವಾಹಿನಿಗೆ ಬರಲು ನಮ್ಮ ಸರ್ಕಾರವು ಬಯಸುತ್ತದೆ. ನಕ್ಸಲೀಯರು ಪ್ರಜಾತಾಂತ್ರಿಕತೆಯ ಮುಖ್ಯವಾಹಿನಿಗೆ ಬರಬೇಕೆಂದು ಹೇಳಿದ್ದರು. ಅಷ್ಟೇ ಅಲ್ಲದೆ ಶರಣಾದ ನಕ್ಸಲೀಯರಿಗೆ ಹಂತ ಹಂತವಾಗಿ ಆರ್ಥಿಕ ನೆರವು, ಪ್ರೋತ್ಸಾಹ ಧನ, ಕೌಶಲ್ಯ ತರಬೇತಿಗಳು ನೀಡುವುದಲ್ಲದೆ ಅವರ ಪುನರ್ವಸತಿಗೂ ಸಹ ಎಲ್ಲ ಕ್ರಮಗಳನ್ನು ಸಹಾನುಭೂತಿಯಿಂದ ಹಾಗೂ ಆದ್ಯತೆ ಮೇರೆಗೆ ಪರಿಗಣಿಸಲು ಕ್ರಮವಹಿಸಲಾಗುವುದು. ಅವರ ಮೇಲಿನ ಮೊಕದ್ದಮೆ, ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುವುದೆಂದು ಎಂದು ಭರವಸೆ ನೀಡಿದ್ದರು.

ಮುಂದಿನ ಕ್ಯಾಬಿನೆಟ್‌ನಲ್ಲಿ ಚರ್ಚೆ

ನಾರಾಯಣಗುರು ಮತ್ತು ಕನಕದಾಸರು ಕೂಡ ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆಯ ಕಾರಣಕ್ಕೆ ಅವಮಾನಿತರಾಗಿದ್ದರು. ಯಾರೂ ಜನ್ಮತಃ ದಡ್ಡರಾಗಿರಲು ಸಾಧ್ಯವಿಲ್ಲ. ಕಾಳಿದಾಸರು ಶಾಕುಂತಲಾ ಬರೆದದ್ದು, ವ್ಯಾಸರು ಮಹಾಭಾರತ ಬರೆದದ್ದು, ವಾಲ್ಮೀಕಿ ರಾಮಾಯಣ ಬರೆದದ್ದೇ ಹುಟ್ಟಿನಿಂದ ಯಾರೂ ದಡ್ಡರಲ್ಲ ಎನ್ನುವುದಕ್ಕೆ ಉದಾಹರಣೆಯಾಗಿದೆ ಎಂದರು. ಶೋಷಿತ ಸಮುದಾಯಗಳು ಜಾತಿ ಸಮ್ಮೇಳನ ಮಾಡುವುದು ತಪ್ಪಲ್ಲ. ಆದರೆ ಮುಂದುವರಿದ ಜಾತಿಗಳು ಜಾತಿ ಹೆಸರಲ್ಲಿ ಸಮ್ಮೇಳನ ನಡೆಸುವುದು ಸಾಮಾಜಿಕವಾಗಿ ತಪ್ಪಾಗುತ್ತದೆ. ಸಂಘಟನೆ–ಒಗ್ಗಟ್ಟು ಇಲ್ಲದಿದ್ದರೆ ಶೋಷಿತ ಸಮುದಾಯಗಳಿಗೆ ಶಕ್ತಿ ಬರುವುದಿಲ್ಲ. ಮನುಷ್ಯ ಧರ್ಮ ಸ್ಥಾಪನೆ ಆಗುವವರೆಗೂ ನಾವೆಲ್ಲರೂ ಶ್ರಮಿಸುತ್ತಲೇ ಇರಬೇಕು. ನಾನು ಎಲ್ಲಾ ಜಾತಿಯವರನ್ನೂ ಪ್ರೀತಿಸುತ್ತೇನೆ. ಆದರೆ ಜಾತಿ ತಾರತಮ್ಯ ಮಾಡುವವರನ್ನು ವಿರೋಧಿಸುತ್ತೇನೆಯೇ ಹೊರತು ಅವರನ್ನೂ ದ್ವೇಷಿಸುವುದಿಲ್ಲ. ಜಾತಿ ಕಾರಣದಿಂದ ಕನಕದಾಸರನ್ನು ಉಡುಪಿ ಮಠದ ಒಳಗೆ ಬಿಡಲಿಲ್ಲ, ಎನ್ನುತ್ತಾ ಕನಕನ ಕಿಂಡಿ ಸೃಷ್ಟಿಯಾದ ಪ್ರಸಂಗವನ್ನು ವಿವರಿಸಿದರು.

ಸಾಹಿತಿ ಡಾ. ನಾ. ಡಿಸೋಜ ನಿಧನ

ಕೊಂಕಣಿಯಲ್ಲಿ ಚಲನಚಿತ್ರವಾಗಿದೆ. 'ಸಾರ್ಕ್' ದೇಶಗಳ ಸಾಹಿತಿಗಳ ಸಮ್ಮೇಳನದಲ್ಲಿ ಸ್ವಂತ ಕಥಾವಾಚನ ಮಾಡಿದ್ದರು. ಇವರ 'ಮುಳುಗಡೆಯ ಊರಿಗೆ ಬಂದವರು' ಕಿರು ಕಾದಂಬರಿಗೆ 2011ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗುಲ್ವಾಡಿ ವೆಂಕಟರಾವ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ಸಂದೇಶ ಪ್ರಶಸ್ತಿ, ನವದೆಹಲಿ ಕಥಾ ಪ್ರಶಸ್ತಿ, ಪುತ್ತೂರು ನಿರಂಜನ ಸಾಹಿತ್ಯ ಪ್ರಶಸ್ತಿ ಮುಂತಾದವುಗಳಿಂದ ಪುರಸ್ಕೃತರಾಗಿದ್ದಾರೆ. 2014ರ ಜನವರಿಯಲ್ಲಿ ಮಡಿಕೇರಿಯಲ್ಲಿ ನಡೆದಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಹೆಬ್ಬಾಳ್ಕರ್ ವಿರುದ್ಧ ಗಂಭೀರ ಆರೋಪ

ಅಲೋಕ್ ಮೋಹನ್ ಅವರಿಗೆ ಸಿ.ಟಿ.ರವಿ ದೂರು ನೀಡಿದ್ದು, ನಾನು ಕೊಟ್ಟ ಕೇಸ್ ಎಫ್‌ಐಆರ್ ಆಗಿಲ್ಲ ಅಂತಾ ಕಿಡಿಕಾರಿದ್ದಾರೆ. ಪ್ರಕರಣದಲ್ಲಿ ಸಿಐಡಿಗೆ ಅತಿದೊಡ್ಡ ಸವಾಲು ಅಂದರೆ ಪರಿಷತ್‌ನಲ್ಲಿ ಮಹಜರು ನಡೆಸುವುದು. ಈ ಸಂಬಂಧ ಈಗಾಗಲೇ ಪೊಲೀಸರು ಸಭಾಪತಿಗಳಿಗೆ ಪತ್ರ ಬರೆದು ಮಹಜರಿಗೆ ಅನುಮತಿ ಕೇಳಿದ್ದಾರೆ. ಆದರೆ ಹೇಗೆ ಮಹಜರು ಮಾಡುತ್ತೀರಾ ಅಂತಾ ವಿವರವಾಗಿ ತಿಳಿಸುವಂತೆ ಸಭಾಪತಿ ಹೊರಟ್ಟಿ ಪ್ರಶ್ನಿಸಿದ್ದರು. ಸಿಐಡಿ ಉತ್ತರ ಬಂದ ಬಳಿಕ ಮಹಜರು ಬಗ್ಗೆ ಅಂತಿಮ ನಿರ್ಧಾರವಾಗಲಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಸಿ.ಟಿ.ರವಿ, ಸದನದೊಳಗೆ ನಡೆದ ಘಟನೆಯಾಗಿದ್ದರಿಂದ ಸಭಾಪತಿಗಳದ್ದೇ ಅಂತಿಮ ತೀರ್ಮಾನ ಎಂದು ಹೇಳಿದ್ದರು. ಡಿ.19ರಂದು ಬೆಳಗಾವಿಯಲ್ಲಿ ಬಂಧಿಸಿ ರಾತ್ರಿಯಿಡೀ ಸುತ್ತಾಡಿಸಿರೋದಕ್ಕೆ ಗರಂ ಆಗಿದ್ದ ಸಿ.ಟಿ.ರವಿ ಇತ್ತೀಚೆಗೆ ಡಿಜಿಪಿ ಅಲೋಕ್ ಮೋಹನ್ ಭೇಟಿ ಆಗಿ 8 ಪುಟಗಳ ದೂರು ನೀಡಿದ್ದರು. ಇಡೀರಾತ್ರಿ ಅಲೆದಾಡಿಸಿದ ಪೊಲೀಸರ ವಿರುದ್ಧ ಕ್ರಮಕ್ಕೆ ಮನವಿ ಮಾಡಿದ್ದರು.

ಹೊರತು ಬದಲಾವಣೆ ಅಸಾಧ್ಯ

ಅಗ್ರ ಸ್ಥಾನದಲ್ಲಿದೆ ಎಂದರು. ಆದರ್ಶ, ಮೌಲ್ಯ, ಪರಂಪರೆಗೆ ಸಂವಿಧಾನದಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ. ಜೊತೆಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೂಡ ನೀಡಲಾಗಿದೆ. ಭಾರತದ ಸಂವಿಧಾನದಲ್ಲಿ ವಿವಿಧತೆಯಲ್ಲಿ ಏಕತೆ ಇದೆ. ಹಾಗೆಯೇ ಭಾರತ ಸಂವಿಧಾನದಲ್ಲಿ ಯಾರಿಗೂ ವಿಶೇಷ ಅಧಿಕಾರವಿಲ್ಲ. ಪ್ರಜಾಪ್ರಭುತ್ವದ ತಳಹದಿ ಮೇಲೆ ನಿಂತಿರುವ ಭಾರತದ ಸಂವಿಧಾನದಲ್ಲಿ ಸಮಾನತೆ ಮಹತ್ವ ಪಡೆದಿದೆ ಎಂದು ಹೇಳಿದರು. ಶ್ರೇಷ್ಠ ಮಾನವೀಯತೆ ಹಾಗೂ ವ್ಯಕ್ತಿತ್ವದ ಗೌರವವನ್ನು ಸಂವಿಧಾನದಲ್ಲಿ ಎತ್ತಿ ಹಿಡಿಯಲಾಗಿದೆ. ಇದರಿಂದ ಇಡೀ ವಿಶ್ವದಲ್ಲೆ ಭಾರತದ ಸಂವಿಧಾನ ಅಗ್ರ ಪಂಕ್ತಿಯಲ್ಲಿ ಸ್ಥಾನ ಪಡೆದಿದೆ ಎಂದು ಆರೀಫ್ ಮೊಹಮ್ಮದ್ ಖಾನ್ ತಿಳಿಸಿದರು. ಸಂಸದರಾದ ಗೋವಿಂದ ಕಾರಜೋಳ, ಯದುವೀರ್ ಹಾಗೂ ಪುಸ್ತಕದ ಲೇಖಕ ಪಿ.ವಿಕಾಸ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಂದಿರಾ ಸಂವಿಧಾನ ಎನ್ನಬಹುದು

ಕಮಿಷನ್ ರಚನೆ ಮಾಡಿದ್ದರು. ಆ ವರದಿ ಆಧರಿಸಿ ಮೈಸೂರು ಸರ್ಕಾರದಲ್ಲಿ ಮೀಸಲಾತಿ ಕಲ್ಪಿಸಿದ್ದರು ಎಂದು ಹೇಳಿದರು. ಭಾರತದ ಸಂವಿಧಾನ ರಚನೆ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಮಿಲ್ಲರ್ ಕಮಿಷನ್ ವರದಿಯನ್ನು ಪರಿಗಣನೆಗೆ ತೆಗೆದು ಕೊಂಡಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಸಂವಿಧಾನವನ್ನು ಸ್ವಾರ್ಥಕ್ಕೆ ಬಳಕೆ ಮಾಡಿಕೊಂಡಿತು. ಈ ಮೂಲಕ ಸಂವಿಧಾನ ಒಂದು ರಾಜಕೀಯ ಪಕ್ಷ ಹಾಗೂ ಒಂದು ಕುಟುಂಬದ ಲಾಭಕ್ಕಾಗಿ ಬಳಕೆಯಾಯಿತು ಎಂದು ಯದುವೀರ್ ಆರೋಪಿಸಿದರು. ದಲಿತ ಸಮುದಾಯದ ಉದ್ಧಾರಕ್ಕಾಗಿ ಬಿಜೆಪಿ ಸಂವಿಧಾನಕ್ಕೆ ತಿದ್ದುಪಡಿ ತಂದರೆ, ಕಾಂಗ್ರೆಸ್ ಸ್ವಾರ್ಥ ರಾಜಕೀಯ ಲಾಭಕ್ಕೆ ತಿದ್ದುಪಡಿ ತಂದಿದೆ. ಇದಲ್ಲದೆ ವಿದೇಶದ ವೇದಿಕೆಯಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನ ವಿರೋಧಿ ಹೇಳಿಕೆ ನೀಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಂವಿಧಾನದಲ್ಲಿ ಮೂಲ ಆಕಾಂಕ್ಷೆ ಇದೆ, ಮೂಲಭೂತ ಹಕ್ಕುಗಳು ಕೂಡ ಇದೆ. ಆದ ಕಾರಣ ಭಾರತದ ಸಂವಿಧಾನ ಎಂದೆಂದಿಗೂ ಪ್ರಸ್ತುತವಾಗಿದ್ದು, ಇದನ್ನು ಸಂರಕ್ಷಣೆ ಮಾಡಬೇಕಿದೆ ಎಂದು ಯದುವೀರ್ ಸಲಹೆ ನೀಡಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

ಶ್ರೀ ಮೂರ್ತಿ ಟೂರಿಸ್ಟ್
11–1–25 ಶನಿವಾರ ಬೆಳಿಗ್ಗೆ 4.30ಕ್ಕೆ "3 ಶ್ರೀರಂಗನಾಥ" (ಆದಿ, ಮಧ್ಯ, ಅಂತ್ಯ) ದರ್ಶನಕ್ಕಾಗಿ ಪ್ರವಾಸ. 12–1–25 ಬೆಳಿಗ್ಗೆ 11.30ಕ್ಕೆ ವಾಪಸ್ ಬರುವುದು. (50 ಸೀಟ್‌ಗಳ ಬಸ್ಸಿನಲ್ಲಿ).
Mob: 94807 33069

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋವೋವನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas 9379699229

WE ARE HIRING
Qualification - PUC or Degree
Male / Female
Age-Between 18 to 40 Years
Able to Communicate
Able to work Together with Team
9844184349

ಶ್ರೀ ಗೌರೀಶಂಕರ ಟ್ರಾವೆಲ್ಸ್
10-4-25 (6 ದಿನ): ಅಯೋಧ್ಯೆ, ಕಾಶಿ, ಪ್ರಯಾಗ್‌ರಾಜ್
1-5-25 (4 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
11-5-25 (10 ದಿನ): ಅಯೋಧ್ಯೆ, ಕಠ್ಮಂಡು, ಮುಕ್ತಿನಾಥ, ಕಾಶಿ.
23-5-25 (9 ದಿನ): ಜಮ್ಮು, ಕಾಶ್ಮೀರ್, ವೈಷ್ಣೋದೇವಿ.
8-6-25 (12 ದಿನ): ಗಂಗೋತ್ರಿ, ಕೇದಾರ್‌ನಾಥ್.
(ವಿಮಾನ, ಬಸ್, ಊಟ, ರೂಂ)
Mob: 9620002114

ಪ್ರವಾಸ
ಗುಜರಾತ್ ಪ್ರವಾಸ 8 ದಿನಗಳು ದಿನಾಂಕ: 18–01–2025
ನೇಪಾಳ ಪ್ರವಾಸ 9 ದಿನಗಳು ದಿನಾಂಕ: 18–01–2025
ಪೂರಿ ಜಗನ್ನಾಥ ಪ್ರವಾಸ 4 ದಿನಗಳು ದಿನಾಂಕ: 21–01–2025
ಶಿರಡಿ ಪ್ರವಾಸ 3 ದಿನಗಳು ದಿನಾಂಕ: 23–01–2025
ಶ್ರೀಲಂಕಾ ಪ್ರವಾಸ 8 ದಿನಗಳು ದಿನಾಂಕ: 18–01–2025
6360146483, 9480843945

ಬೇಕಾಗಿದ್ದಾರೆ
ಸೇಲ್ಸ್ ಗರ್ಲ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 15000-20000/-
Ph.7406 369 369

WANTED
We are Hiring
1. HR /Admin personnel-1 No- 3yrs experience, Plan, Co-ordinate and manage the administrative functions of an office
2. Loan / Debt Recovery Executives
Telecallers-5 Nos.
Field Executives-5 Nos.
9482676099
9591425134

SBIT TRAVELS
Group Tour
DUBAI 5 DAYS
28 Jan | 5,13,25 Feb | 1,8,19,28 Mar | 6,20,22 Apr | 3,10,26 May
Air tickets | Entry tickets | Meals
Hotel | Visa | All tours and transfers
9343524127
(Saraswathipuram, Mysuru)

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOME LOANS
CORPORATION, MUDA, KHB
GRAMATHANA PROPERTY
ROI Starts from 8.60%
Contact: 9108416410

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ನಲ್ಲಿ ಅನುಭವವುಳ್ಳ, D.Pharma ಮಾಡಿರುವ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ, ಹುಡುಗ/ಹುಡುಗಿಯರು /ಮಹಿಳೆಯರು ಬೇಕಾಗಿದ್ದಾರೆ.
9901080314

INVESTOR ಬೇಕಾಗಿದ್ದಾರೆ
Leading Food Products Business ಅಭಿವೃದ್ಧಿ ಪಡಿಸಲು 50 ಲಕ್ಷಗಳವರೆಗೆ Funds ಬೇಕಾಗಿದೆ. 20% ಡಿವಿಡೆಂಡ್ & ಸೂಕ್ತ ಭದ್ರತೆಯೊಂದಿಗೆ ಕನಿಷ್ಠ 2 ಲಕ್ಷದಿಂದ 5 ಲಕ್ಷದವರೆಗೆ Invest ಮಾಡುವವರು ಸಂಪರ್ಕಿಸಿರಿ
7019012485

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯೊಂದಿಗೆ ಸಂಬಳ – ಓ.ಟಿ. 15200 – 56,100
7337645977, 7892046990

ಸಪ್ತಪದಿ ವಧು-ವರರ ಮಾಹಿತಿ ಕೇಂದ್ರ
BE/ MBA / M.Tech / MCA / MBBS / MD / MS and any Degree ಯ India / USA / UK / Germany / Canada / Australia / Bangalore / Mysore ನ ವಧು–ವರರ ಮಾಹಿತಿ / ನೋಂದಣಿಗೆ ಸಂಪರ್ಕಿಸಿ:
Mob: 9663199511
ವೆಬ್‌ಸೈಟ್ available

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, PUC, Diploma, Any Degree pass or fail. ಸಂಬಳ: 15,000 ಇಂದ 30,000 ವರೆಗೆ ವಿ.ಸೂ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ. Android Mobile ಹಾಗೂ two wheeler ಇರಬೇಕು. ಸಂಪರ್ಕಿಸಿ:
Mob: 9880151303

Business for Sale
Dealership of Good Brand
Running in Good Location with Profit Oriented Business contact
7899163458
96066 38899

WANTED
1. KITCHEN SUPERVISOR-1 MEN
2. CAPTAINS – MEN
3. STEWARDS – MEN/WOMEN
4. SALES MANAGER MEN
Maya's Kings Kourt
JLB Road, Mysore-570005
9448142639

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WE ARE HIRING
(BOTH MALE & FEMALE)
* Customer Service Executive
* Senior Agency Partner
* Financial Consultant
Requirements: * PUC or any Degree * Age 25 & above * Salary 15K to 35K.
Locatiion: Mysore, Mandya, Madikeri, Hassan & Chamarajanagar. For more details:
Mob: 7411122619

FOR SALE
1. Sites @ Bogadi Near Rainbow School Including @ Registration 20L
2. 30x40 Sites @ JnanaBharathi Layout, JP Nagar
3. 40x60 West Facing Site @ Sharada Layout JP Nagar.
4. 30x40, Sites Attach to Brahmins Layout, Just 5 Kms from Ring Road@Just 20 Lakh
PRAKRUTHI PROPERTIES
95386 90359, 90359 90359

ಬಸವಮಾರ್ಗ ವ್ಯಸನಮುಕ್ತ ಕೇಂದ್ರ, ಹೆಬ್ಬಾಳ್, ಮೈಸೂರು
WANTED
ಸೌತ್ ಇಂಡಿಯನ್ ಶೈಲಿಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಇಎಸ್‌ಐ, ಪಿಎಫ್, ವಸತಿ ಸೌಲಭ್ಯ. 35–50 ಸಾವಿರ ರೂ. ವರೆಗೆ ವೇತನ. ಶುಚಿ, ರುಚಿಯಾಗಿ ಮಾಡುವವರಿಗೆ ಅವಕಾಶ.
88849-51621

S/W 28x40 ಕಾರ್ನರ್ ಸೈಟು ಮಾರಾಟಕ್ಕಿದೆ.
15 ಲಕ್ಷದ 50 ಸಾವಿರಗಳು
DTCP "A" ಖಾತೆ
GSS ಲೇಔಟ್
TVS ಫ್ಯಾಕ್ಟರಿ ತಳೂರು ಹತ್ತಿರ ಮೈಸೂರು
9972557534

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸು : 18 ರಿಂದ 45 ಸಂಬಳ: 17000+ESI+PF ಕಳೆದು 17000 ಸಿಗುತ್ತದೆ. Week Off ಹಾಗೂ Shift ಗಳು ಇರುತ್ತದೆ. ಆಸಕ್ತಿ ಉಳ್ಳವರು ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ರಿಂಗ್ ರೋಡ್, ಮೈಸೂರು
9986874574

ಹೋಟೆಲ್ ಬಾಡಿಗೆಗೆ ಇದೆ
ಫರ್ನಿಚರ್, ಅಡುಗೆ ವಸ್ತುಗಳು ಗ್ಯಾಸ್‌ಸ್ಟೌವ್, ಫ್ರಿಡ್ಜ್, ಗ್ರೈಂಡರ್ ಹೋಟೆಲ್‌ಗೆ ಅನುಕೂಲವಿರುವ ಎಲ್ಲಾ ಸಾಮಾಗ್ರಿಗಳು ಬಾಡಿಗೆಗೆ ಅಥವಾ ಮಾರಾಟಕ್ಕಿದೆ. ಹಿನಕಲ್ ರಿಂಗ್ ರಸ್ತೆ, ಹೋಂಡಾ ಶೋರೂಂ ಹತ್ತಿರ
9900664421, 9448434110

WANTED (RECEPTIONIST)
JP Nagar Service Apartment ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
Education - Degree
Ladies Only
Language- Kannada, English, Hindi Fluency
Computer Knowledge Must
9686225522

ತಕ್ಷಣ ಬೇಕಾಗಿದ್ದಾರೆ
ಹೊಸ ವರ್ಷಕ್ಕೆ ಹೊಸ ವಿಭಾಗಕ್ಕೆ ಯುವತಿಯರು Age (18-24) 10th, PUC ಯಾದ Trainee ಗಳಾಗಿ Earn (9600/-ರಿಂದ 18600/-pm *No Fee* ವಿವರಗಳೊಂದಿಗೆ ನೇರ ಸಂಪರ್ಕಿಸಿ, ಮೈಸೂರು Call ಕಾವ್ಯ
9342827788

WANTED
Field Technician
ITI. PUC,SSLC fresher,
For Tata Play authorised service centre
Salary 13000-16000
9845110140
9980350806

ಯುವಕರಿಗಾಗಿ ಸ್ವಯಂ ಉದ್ಯೋಗಕ್ಕಾಗಿ
K.K.MULTI TALENTED GROUP
9844505280
7760810381

GODOWN FOR RENT
1,500 sqft
27HP power
Near B.B.Mill
Bannimantap, Mysore
8904134763

ಒಂದು ಲಕ್ಷ ಐವತ್ತು ಸಾವಿರದಲ್ಲಿ ಸರಳ ಮದುವೆ ಮಾಡಿಸಿ ಕೊಡಲಾಗುವುದು
* ಮಿನಿ ಫಂಕ್ಷನ್ ಹಾಲ್, * ಮದುವೆ ತಿಂಡಿ, ಊಟ, * ಫ್ಲವರ್ ಡೆಕೊರೇಷನ್, * ಫೋಟೋ ಮತ್ತು ವೀಡಿಯೋ, * ವಾದ್ಯವೃಂದ * ಪುರೋಹಿತರು ಎಲ್ಲವೂ ಸೇರಿ ಕೇವಲ 1,50,000/–ದಲ್ಲಿ ಮದುವೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಮೈಸೂರು ಮನೀಶ್
9342183867

SPACE FOR RENT
A shop measuring (east face) 1st floor 500 sft & 2nd floor 490 sft available for rent at Vishwamanava double road, Kuvempunagar near Airtel office
Madhu H
9900948665

ಸೈಟು ಬೇಕಾಗಿದೆ
30x40, 30x50, 40x60, 50x80
ಸುವರ್ಣ ನಗರ ಮರಟಿಕ್ಯಾತನಹಳ್ಳಿ ಹತ್ತಿರ, ಮೈಸೂರು
7338250763
9980616608

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ. ಸಂಬಳ 15,000 ರಿಂದ 20,000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9591547239
9632039123

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು
9916908454

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ 50 ವರ್ಷದೊಳಗೆ ಸಂಬಳ: 17500 (8 hours) 26 days ESI, PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ಉದ್ಯೋಗವಕಾಶ
ಮೈಸೂರಿನ AWG ಕಂಪನಿಯಲ್ಲಿರುವ 226 ಪರ್ಮನೆಂಟ್ ಹುದ್ದೆಗಳಿಗೆ SSLC, PUC, Dip, ITI, Any Degree ಆಗಿರುವ ಅಭ್ಯರ್ಥಿಗಳನ್ನು Direct Oppointment ಮಾಡಿಕೊಳ್ಳುತ್ತಿದ್ದೇವೆ. ವಯೋಮಿತಿ: 18 to 32 Years ತಿಂಗಳಿಗೆ : 22000–26500 (ಉಚಿತ ಊಟ+ವಸತಿ+ಮೆಡಿಕಲ್ ಸೌಲಭ್ಯವಿದೆ.)
ಶ್ರೀವಿದ್ಯಾ: 7406821955, 7349699460

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ GRS ಫ್ಯಾಂಟಸಿ ಪಾರ್ಕ್ ಹತ್ತಿರವಿರುವ ಕಾರ್ಖಾನೆಗೆ ಪುರುಷ 8 ಗಂಟೆ ಪಾಳಿಯಲ್ಲಿ (Shift) ಕೆಲಸ ಮಾಡುವ SSLC ಪಾಸಾಗಿರುವ ಸೆಕ್ಯೂರಿಟಿ ಗಾರ್ಡ್ ಅನುಭವವಿರುವ 45 ವರ್ಷ ವಯಸ್ಸು ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ 17500 ರೂ.ಗಳು ESI & PF ವಾರದ ರಜೆ ಕ್ಯಾಂಟೀನ್ ಸೌಲಭ್ಯವಿರುತ್ತದೆ.
9731976148

JOB OPPORTUNITY ONLY FOR RETIRED PERSONS
9902508150

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ – 10 ನಂ.
2) ಹೌಸ್ ಕಿಪೀಂಗ್ ಹುಡುಗರು– 10 ನಂ.
3) ಕಂಪ್ಯೂಟರ್ ಆಪ್‌ರೇಟರ್– 2 ನಂ. (MS EXCEL / MS OFFICE/EPERIENCE)
3) ಡ್ರೈವರ್ (ಎಲ್.ಎಮ್.ವಿ– 2 ನಂ.
ಆಕರ್ಷಕ ಸಂಬಳವಿರುತ್ತದೆ.
9900749104
9036745292

ಬೇಕಾಗಿದ್ದಾರೆ
ಮೆಡಿಕಲ್‌ಶಾಪ್ ಒಂದಕ್ಕೆ ಅನುಭವವಿರುವ ಸಹಾಯಕರು, ಹುಡುಗ ಅಥವಾ ಹುಡುಗಿ ಮತ್ತು ಬಿ ಫಾರ್ಮಸಿ (B.Farma) ಮಾಡಿರುವವರು (ಒಬ್ಬರು) ಬೇಕಾಗಿದ್ದಾರೆ. ಶ್ರೀರಾಂಪುರ, ಮೈಸೂರು
9844414047
7483484535

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಗೆ ಡೆಲಿವರಿ ಬಾಯ್ಸ್ ವಿ.ವಿ. ಮೊಹಲ್ಲಾ, ಎನ್.ಆರ್. ಮೊಹಲ್ಲಾ ಹಾಗೂ ಯಾದವಗಿರಿ, ಹೂಟಗಳ್ಳಿ ಶಾಖೆಗೆ ಬೇಕಾಗಿದ್ದಾರೆ. ಮತ್ತು ಕೆ.ಆರ್. ಮೊಹಲ್ಲಾ ಶಾಖೆಗೆ ಬೆಳಿಗ್ಗೆ ಮತ್ತು ಸಂಜೆ Part timeಗೆ ಬೇಕಾಗಿದ್ದಾರೆ. (ಹತ್ತಿರದಲ್ಲಿದ್ದವರಿಗೆ ಮೊದಲ ಆದ್ಯತೆ)
9449871790

ನಿವೇಶನ ಮಾರಾಟಕ್ಕಿದೆ
40x60 S/F
ದಟ್ಟಗಳ್ಳಿ 3ನೇ ಹಂತ
9008180006

ಬೇಕಾಗಿದ್ದಾರೆ
ಕಾರ್ಖಾನೆಯ ಕ್ಯಾಂಟಿನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ವಯೋಮಿತಿ: 18-40 ವರ್ಷ
8296818881
7760926164
ವಿಳಾಸ: ಮೇಟಗಳ್ಳಿ, ಮೈಸೂರು

ಫ್ಯಾಷನ್ ಡಿಸೈನಿಂಗ್ ತರಬೇತಿ
Basic & Advanced Aari Work, Basic Tailoring Class, Machine Embroidery, Crochet & Tassels Class
ಶ್ರೀ ಗಾನವಿ ಟ್ರೈನಿಂಗ್ ಸೆಂಟರ್
ನೆಕ್ಸಸ್ ಸಿಟಿ ಮಾಲ್ ಹತ್ತಿರ, ಉದಯಗಿರಿ, ಮೈಸೂರು
9901084528
7975769270

EAST FACING HOUSE FOR SALE
Ground 3bhk, 1st 2bhk, 2nd floor, independent 3 Rooms, 3rd floor 1pent house 60X40, 2.85cr negotiable Ramkrishna Nagar K Block
9449759471

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ವರುಣಾ, ಟೆರಿಷನ್ ಕಾಲೇಜು ಸುತ್ತಮುತ್ತ ಮತ್ತು ಬೋಗಾದಿ, ಮೈಸೂರಿನ ಸುತ್ತಮುತ್ತ
ವಿದ್ಯಾರ್ಹತೆ : SSLC PASS or Fail
9538886328

ತಕ್ಷಣ ಬೇಕಾಗಿದ್ದಾರೆ
ವೃದ್ಧಾಶ್ರಮದಲ್ಲಿ ಉಳಿದುಕೊಂಡು ವೃದ್ಧರನ್ನು ಆರೈಕೆ ಮಾಡಲು ಅನುಭವವುಳ್ಳ ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಸಂಬಳ: 18,000/–ದಿಂದ ಪ್ರಾರಂಭ. ಸ್ಥಳ: ಮೈಸೂರು
9916905188

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ ಹತ್ತಿರ ಹಾಗೂ ಸಬರ್ಬನ್ ಬಸ್ ನಿಲ್ದಾಣ ಹತ್ತಿರ, ಅಶೋಕಪುರಂ ರಸ್ತೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI & PF ಸೌಲಭ್ಯವಿರುತ್ತದೆ.
8971367078

ಕೆಲಸಕ್ಕೆ ಬೇಕಾಗಿದ್ದಾರೆ
ನಮ್ಮಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ವರ್ಷ ವಿದ್ಯಾರ್ಹತೆ PUC-Degree ಸಂಬಳ: 8,000/– ದಿಂದ 12,000/–
ಗಾನವಿ ಇಂಟರ್‌ನ್ಯಾಷನಲ್
01 ಓಲ್ಡ್ ಮಹದೇವಪುರ ಮೇನ್ ರೋಡ್, ನೆಕ್ಸಸ್ ಸಿಟಿ ಮಾಲ್ ಹತ್ತಿರ, ಉದಯಗಿರಿ ಮೈಸೂರು
9900283883, 9620446665
9620546665

ಸೈಟು ಮಾರಾಟಕ್ಕಿದೆ
30x40 S/F, 40 ಅಡಿ ರಸ್ತೆ, ಪಾರ್ಕ್ ಎದುರು, ಬಸವಸಾಗರ ಬಡಾವಣೆ, ಚಿಕ್ಕನಹಳ್ಳಿ ರಸ್ತೆ, ಇಲವಾಲ.
Mob: 7338445412

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ದೋಷ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮಂಡ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮೊಬೈಲ್ ಕ್ಲಿನಿಕ್‌ಗಳ ಆರಂಭ

ದಂತ ತಪಾಸಣೆ, ಶುಗರ್, ಬಿಪಿ ಸೇರಿದಂತೆ ನಾನಾ ಖಾಯಿಲೆಗಳಿಗೆ ತಪಾಸಣೆ: ಕೇಂದ್ರ ಸಚಿವ ಕುಮಾರಸ್ವಾಮಿ

ಹಲಗೂರು: ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ ಒಂದು ಉತ್ತಮ ಕಾರ್ಯಕ್ರಮ, ಇಂತಹ ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಂಡ್ಯ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಮೊಬೈಲ್ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು ಎಂದರು.

ಹಲಗೂರು ಪ್ರೌಢಶಾಲಾ ಆವರಣದಲ್ಲಿ ಹಲಗೂರು ವಿದ್ಯಾ ಸಂಸ್ಥೆ, ಕ್ರಿಯಾಶೀಲ ಆಸ್ಪತ್ರೆ, ಬೆಂಗಳೂರು, ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು, ವಿಕ್ಟೋರಿಯಾ ಆಸ್ಪತ್ರೆ ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಮೊಬೈಲ್ ಕ್ಲಿನಿಕ್‌ಗಳನ್ನು ಆರಂಭಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಅದರಲ್ಲೂ ಸಂಚಾರಿ ದಂತ ಮತ್ತು ರಕ್ತ ಪರೀಕ್ಷಾಲಯಗಳನ್ನು ಮಧುಮೇಹ, ಬಿಪಿ, ಇತರೆ ಪರೀಕ್ಷೆ ಮಾಡಲು ಗ್ರಾಮೀಣ ಪ್ರದೇಶಗಳಲ್ಲಿನ ಜನರಿಗಾಗಿ ಉಪಯೋಗಕ್ಕಾಗಿ ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಸೇವೆ ನೀಡಲಿದೆ ಎಂದು ಭರವಸೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿನ ಜನರ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರದ ವತಿಯಿಂದ ಎಷ್ಟೇ ಆಸ್ಪತ್ರೆಗಳನ್ನು ಆರಂಭಿಸಿದರೂ ಒಂದಲ್ಲ ಒಂದು ಸಮಸ್ಯೆಗಳಿಂದ ಬಳಲುತ್ತಿವೆ. ಕಳೆದ ಹಲವು ದಿನಗಳಿಂದ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಇತರೆ ಸ್ಥಳಗಳಲ್ಲಿ ಆರು ನೂರಕ್ಕೂ ಹೆಚ್ಚು ಗರ್ಭಿಣಿಯರು, ಬಾಣಂತಿಯರು ಸರಿಯಾದ ಚಿಕಿತ್ಸೆ ಸಿಗದೆ ಮತ್ತು ಕಳಪೆ ಗುಣಮಟ್ಟದ ಔಷಧಿಯಿಂದಾಗಿ ಮೃತಪಟ್ಟಿರುವುದು ಹಲವು ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇದು ಆಡಳಿತ ಸರ್ಕಾರದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.



ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ.

ಉತ್ತರ ಭಾರತದಿಂದ, ದೇಶದ ಮೂಲೆ ಮೂಲೆಯಿಂದಲೂ ಬೆಂಗಳೂರಿಗೆ ಉದ್ಯೋಗ ಅರಸಿ ಬಂದು ನೆಲೆಸಿದ್ದಾರೆ. ಆದರೆ ನಮ್ಮ ಮಕ್ಕಳ ವ್ಯಾಮೋಹದಿಂದ ಉದ್ಯೋಗಕ್ಕೆ ಮನೆಯಿಂದ ಹೊರ ಹೋಗದಂತೆ ಸ್ಥಳೀಯವಾಗಿ ಉದ್ಯೋಗಕ್ಕಾಗಿ ಕಾಯುವಂತಾಗಿದೆ ಮನೆ, ಊರು ಬಿಟ್ಟು ಹೊರ ಬಂದು ಖಾಸಗಿ ಕೈಗಾರಿಕೋದ್ಯಮ ಮತ್ತು ಐಟಿ ಬಿಟಿ ಕ್ಷೇತ್ರದಲ್ಲಿ ಉದ್ಯೋಗ ಹೊಂದಬೇಕು ಎಂದು ಅವರು ಹೇಳಿದರು.

ಪ್ರಸ್ತುತ ಭಾರತ ವಿಶ್ವದಲ್ಲೇ ಆರ್ಥಿಕವಾಗಿ ಐದನೇ ಸ್ಥಾನದಲ್ಲಿದೆ. ಆರ್ಥಿಕವಾಗಿ ಅಭಿವೃದ್ಧಿಯಲ್ಲಿ ಮುಂಬರುವ ದಿನಗಳಲ್ಲಿ ಮೂರನೇ ಸ್ಥಾನ ಪಡೆಯಲಿದೆ. ರಾಜ್ಯದಲ್ಲಿ ದುಡ್ಡಿನ ಸಮಸ್ಯೆ ಇಲ್ಲ, ಅದನ್ನು ಸರಿಯಾಗಿ ವಿನಿಯೋಗ ಮಾಡುವ ಜನಪರ ಸರ್ಕಾರ ಬರಬೇಕಿದೆ ಹಾಗೂ ರಾಜ್ಯ ಸರ್ಕಾರದ ಸಹಕಾರ ದೊರಕಿದರೆ ಕೈಗಾರಿಕೆಗಳನ್ನ ಸ್ಥಾಪಿಸಲು ಸಿದ್ಧನಿದ್ದು, ನಿಮ್ಮ ನಿರೀಕ್ಷೆಗಳನ್ನ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ತಿಳಿಸಿದರು.

ಇದೇ ವೇಳೆ ಶಿಬಿರದಲ್ಲಿ ಕಣ್ಣಿನ ತಪಾಸಣೆ ಮಾಡಿಸಿದ ಮುನ್ನೂರಕ್ಕು ಶಿಬಿರಾರ್ಥಿಗಳಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಣೆ ಮಾಡಲಾಯಿತು ಹಾಗೂ ರಾಷ್ಟ್ರೀಯ ಸಾಕ್ಷರತಾ ಮಿಷನ್ ಅಡಿಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಾ.ಕೆ ಅನ್ನದಾನಿ, ಮಾಜಿ ಸಂಸದ ಸಿ.ಎಸ್. ಪುಟ್ಟರಾಜು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ರಮೇಶ, ಹೆಚ್.ಎಂ.ಆನಂದ ಕುಮಾರ್, ಕಿಮ್ಸ್ ಉಮೇಶ್, ಪುರಸಭೆ ಅಧ್ಯಕ್ಷ ಪುಟ್ಟಸ್ವಾಮಿ, ಉಪಾಧ್ಯಕ್ಷ ಜಯಸಿಂಹ, ಹಲಗೂರು ವಿದ್ಯಾ ಸಂಸ್ಥೆಯ ಮಲ್ಲಿಕಾರ್ಜುನ ಸ್ವಾಮಿ, ಸುಂದರರಾಜು, ಕಂಸಾಗಾರ ರವಿ, ವಿಶ್ವನಾಥ್, ಪುಟ್ಟರಾಮು, ಹೆಚ್.ಎಂ.ಆನಂದ ಕುಮಾರ್, ಜಯರಾಮು, ಡಾ.ನಿತ್ಯಾನಂದ, ನಂದಕುಮಾರ್, ಮಲ್ಲೇಗೌಡ, ರಾಮಚಂದ್ರ ಮನೋಹರ, ಉಮೇಶ್, ಗುಣೇಶ್, ಶ್ರೀನಿವಾಸಚಾರ್, ನಾಗೇಶ್, ಇತರರು ಇದ್ದರು.

ಬಾಯಿ ಚಪಲಕ್ಕೆ ಮಾತನಾಡುವ ಕುಮಾರಸ್ವಾಮಿ

ಕೇಂದ್ರ ಮಂತ್ರಿಯಾಗಿ ಅವರ ಗೌರವಕ್ಕೆ ತಕ್ಕಂತೆ ಮಾತನಾಡಲಿ: ಸಚಿವ ಚಲುವರಾಯಸ್ವಾಮಿ

ಮಂಡ್ಯ: ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದವರು ಮಾತನಾಡಿದರೆ ನಾವುಗಳು ತಡಕಾಡುವಂತಾದಾಗ ನಮಗೆ ಸಂತೋಷವಾಗುತ್ತದೆ. ಆದರೆ, ಕುಮಾರಸ್ವಾಮಿ ಅವರು ಬಾಯಿ ಚಪಲಕ್ಕೆ ಮಾತನಾಡುತ್ತಾರೆ ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವ್ಯಂಗ್ಯವಾಡಿದರು.



ಕೆರಗೋಡು ಗ್ರಾಮದಲ್ಲಿ ವೃತ್ತ ನಿರೀಕ್ಷಕರ ನೂತನ ಕಚೇರಿ ಉದ್ಘಾಟಿಸುತ್ತಿರುವ ಸಚಿವ ಚಲುವರಾಯಸ್ವಾಮಿ.

ತಾಲೂಕಿನ ಕೆರಗೋಡು ಗ್ರಾಮದಲ್ಲಿ ವೃತ್ತ ನಿರೀಕ್ಷಕರ ನೂತನ ಕಚೇರಿ ಉದ್ಘಾಟನೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ 60 ಪರ್ಸೆಂಟ್ ಲಂಚದ ಸರ್ಕಾರವಿದೆ ಎಂಬ ಕುಮಾರಸ್ವಾಮಿ ಅವರ ಟೀಕೆಗೆ ಪ್ರತಿಕ್ರಿಯಿಸಿದರು. ಉನ್ನತ ಹುದ್ದೆಗಳನ್ನು ಅಲಂಕರಿಸಿದ ಅವರು ಮಾತನಾಡಿದರೆ ಅವರಿಗೆ ಉತ್ತರ ನೀಡಲು ತಿಳಿದವರ ಸಲಹೆ ಪಡೆಯುವಂತಿರಬೇಕು. ಬಾಯಿ ಚಪಲಕ್ಕೆ ಮಾತನಾಡುವವರಿಗೆ ಉತ್ತರ ನೀಡಬೇಕು ಎಂದೆನಿಸುವುದಿಲ್ಲ ಎಂದರು.

ಅಂಬೇಡ್ಕರ್ ನೀಡಿದ ಸಂವಿಧಾನದಡಿಯಲ್ಲಿ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸರ್ಕಾರ ನಡೆಸಲು ಜನರ ತೀರ್ಮಾನವೇ ಅಂತಿಮ. ಕಳೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವು ಸರ್ಕಾರದ ಮೇಲಿನ ಅವಿಶ್ವಾಸವೋ, ಅಥವಾ ಅವರ ಬಾಯಿ ಚಪಲವೋ ತಿಳಿಸಬೇಕು ಎಂದು ಚಿವುಟಿದರು.

ಗೌರವಕ್ಕೆ ತಕ್ಕಂತೆ ಮಾತನಾಡಲಿ: ಜಿಲ್ಲೆಯ ಲೋಕಸಭಾ ಸದಸ್ಯರಾಗಿ, ಕೇಂದ್ರ ಮಂತ್ರಿಯಾಗಿ ಅವರ ಗೌರವಕ್ಕೆ ತಕ್ಕಂತೆ ಮಾತನಾಡಬೇಕು. ಆಗ ಅವರ ಮಾತುಗಳಿಗೆ ಪ್ರತಿಕ್ರಿಯೆ ನೀಡಲು ಹೆಮ್ಮೆ ಎನಿಸುವುದು. ಉದಾಸೀನದ ಹೇಳಿಕೆಗಳ ಮೂಲಕ ಸರ್ಕಾರವನ್ನು ಹಾಗೂ ಇತರರನ್ನು ಟೀಕಿಸುವುದೇ ನಾಯಕತ್ವ ಎನಿಸಿಕೊಳ್ಳುವಂತೆ ಮಾತನಾಡುತ್ತಾರೆ ಎಂದು ಸಚಿವರು ಕುಟುಕಿದರು.

ಕಾರಣ ಗೊತ್ತಿಲ್ಲ: ತಮಗೆ ಕಾರು ನೀಡಿಲ್ಲವೆಂದು ಕುಮಾರಸ್ವಾಮಿ ಹೇಳಿಕೆ ನೀಡಿದ್ದು, ನಾನು ಲೋಕಸಭಾ ಸದಸ್ಯನಾಗಿದ್ದ ವೇಳೆ ಹಿಂದೆ ಲೋಕಸಭಾ ಸದಸ್ಯರು ಬಳಸುತ್ತಿದ್ದ ಕಾರನ್ನು ಬಳಸಿದ್ದೆ, ರಾಜ್ಯ ಸರ್ಕಾರದಲ್ಲಿ ಹಿಂದಿನ ಸರ್ಕಾರದ ಮಂತ್ರಿಗಳು ಬಳಸುತ್ತಿದ್ದ ಕಾರುಗಳನ್ನೇ ಬಳಸುತ್ತಿದ್ದೇವೆ. ಹೊಸ ಕಾರು ಬರುವವರೆಗೂ ಸುಮಲತ ಅವರಿಗೆ ನೀಡಿದ್ದ ಕಾರನ್ನು ಬಳಸಬಹುದಿತ್ತು. ಮಾಜಿ ಸಂಸದೆ ಸುಮಲತ ಬಳಸುವ ಕಾರು ಬಳಸೊಲ್ಲ ಎಂದು ಕುಮಾರಸ್ವಾಮಿ ತಿಳಿಸಿರುವುದಕ್ಕೆ ಕಾರಣ ತಿಳಿದಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

ಸನ್ಮಾನಿಸುವೆ: ಶ್ರೀರಂಗಪಟ್ಟಣದಿಂದ ಹುಣಸೂರು, ಶ್ರೀರಂಗಪಟ್ಟಣದಿಂದ ಬೀದರ್ ರಾಷ್ಟ್ರೀಯ ಹೆದ್ದಾರಿ ರಸ್ತೆಯೂ ರಾಜ್ಯ ಸರ್ಕಾರದಿಂದ ಮಂಜೂರಾಗಿದೆ. ಅಂತೆಯೇ ಕೇಂದ್ರ ಪರಿಷ್ಕೃತ ಯೋಜನೆಯಡಿ ಯಾರದೇ ರಾಜ್ಯದ ಎಲ್ಲಾ ರಸ್ತೆ ಅಭಿವೃದ್ಧಿ ಮಾಡುವಂತೆ ನಮ್ಮ ರಾಜ್ಯಕ್ಕೆ ಬರಬೇಕಾದ ಯೋಜನೆಗೆ ಅವರು ತಮ್ಮದೇ ಕೊಡುಗೆ ಎಂದರೆ ಹೇಗೆ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಕುಮಾರಸ್ವಾಮಿ ಅವರಿಗೆ ಸಾಧ್ಯವಾದಲ್ಲಿ ಜಿಲ್ಲೆಯ ಪಾಂಡವಪುರದಿಂದ ಚನ್ನರಾಯಪಟ್ಟಣ ರಸ್ತೆ, ಮಂಡ್ಯದಿಂದ ಪ್ರವಾಸಿತಾಣ ಮೇಲುಕೋಟೆ ರಸ್ತೆ, ಮಂಡ್ಯದಿಂದ ನಾಗಮಂಗಲ ಮೂಲಕ ಕದಬಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ ಸೇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಗೆ ಬದಲಿಸುವರೋ, ವಿಶೇಷ ಅನುದಾನ ತರುವರೋ ಗೊತ್ತಿಲ್ಲ. ಅದನ್ನು ಅಭಿವೃದ್ಧಿ ಮಾಡಿದರೆ ಕುಮಾರಸ್ವಾಮಿ ಅವರನ್ನು ಹೊಗಳಿ, ಸನ್ಮಾನ ಮಾಡುತ್ತೇನೆ ಎಂದು ವಾಗ್ದಾಳಿ ನಡೆಸಿದರು.

ಈ ವೇಳೆ ಶಾಸಕ ರವಿಕುಮಾರ್‌ಗೌಡ ಇದ್ದರು.

ಮತದಾರರ ಪಟ್ಟಿ ಪ್ರಕಟ

ಮಂಡ್ಯ, ಜ.5– ಚುನಾವಣಾ ಆಯೋಗದ ನಿರ್ದೇಶನದಂತೆ 1–1–2025 ಕ್ಕೆ ಕೈಗೊಂಡಿದ್ದ ಮತದಾರರ ಪಟ್ಟಿ ಪರಿಷ್ಕರಣೆಯ ಅಂತಿಮ ಮತದಾರರ ಪಟ್ಟಿಯನ್ನು ಜನವರಿ 6 ರಂದು ಪ್ರಕಟಿಸಲಾಗುವುದು ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿಲ್ಲಾ ಮತದಾರರ ಪಟ್ಟಿ ವೀಕ್ಷಕರು ವಿ.ಅನ್ಬು ಕುಮಾರ್ ಅವರು ತಿಳಿಸಿದರು.

ಸಾವಿನಲ್ಲೂ ಒಂದಾದ ದಂಪತಿ

ಪತಿ ಸಾವನ್ನಪ್ಪಿದ 11ನೇ ದಿನದ ನಂತರ ಪತ್ನಿಯೂ ಸಾವು

ಚಿನಕುರಳಿ: ಹಲವಾರು ವರ್ಷಗಳ ಕಾಲ ಕಷ್ಟ–ಸುಖ ಅನುಭವಿಸಿ ಬಾಳಿ ಬದುಕಿದ ದಂಪತಿ ಸಾವಿನಲ್ಲೂ ಒಂದಾಗಿದ್ದಾರೆ. ಪತಿ ನಿಧನ ಹೊಂದಿ ಹನ್ನೊಂದನೆ ದಿನದ ಕಾರ್ಯ ಮುಗಿದ ಮರುದಿನವೇ ಪತ್ನಿಯೂ ನಿಧನ ಹೊಂದಿರುವ ಘಟನೆ ಚಿನಕುರಳಿಯಲ್ಲಿ ಭಾನುವಾರ ನಡೆದಿದೆ.



ಚಿನಕುರಳಿ ಗ್ರಾಮದ ದಿವಂಗತ ಗಿರೀಗೌಡರ ಧರ್ಮಪತ್ನಿ ಶಾರದಮ್ಮ(75) ನಿಧನ ಹೊಂದುವ ಮೂಲಕ ಸಾವಿನಲ್ಲೂ ಪತಿಯ ಜತೆ ಸೇರಿದ್ದಾರೆ.

ಚಿನಕುರಳಿ ಗ್ರಾಮದ ಗಿರೀಗೌಡರು ಕಳೆದ ಡಿ.25ರಂದು ಅನಾರೋಗ್ಯದಿಂದ ನಿಧನ ಹೊಂದಿದ್ದರು. ಪತಿಯ ಸಾವಿನ ಬಳಿಕ ಪತ್ನಿ ಶಾರದಮ್ಮ ಸಾಕಷ್ಟು ಖಿನ್ನತೆಗೊಳಗಾಗಿ ಅನಾರೋಗ್ಯಕ್ಕೆ ತುತ್ತಾಗಿದ್ದರು. ಶನಿವಾರ ಪತಿ ಗಿರೀಗೌಡರ 11ನೇ ದಿನದ ಉತ್ತರ ಕ್ರಿಯಾದಿ ಕಾರ್ಯಕ್ರಮ ನಡೆದಿದೆ. ಅದಾದ ಮಾರನೆಯ ದಿನ ಭಾನುವಾರ ಪತ್ನಿ ಶಾರದಮ್ಮ ಅವರು ಸಹ ನಿಧನ ಹೊಂದಿದ್ದಾರೆ. ಆ ಮೂಲಕ ಗಿರೀಗೌಡ ಮತ್ತು ಶಾರದಮ್ಮ ಸಾವಿನಲ್ಲೂ ಜತೆಯಾಗಿದ್ದಾರೆ.

ಮೃತರಿಗೆ ಕುಮಾರ್, ಯೋಗೇಶ್ ಇಬ್ಬರು ಗಂಡು ಮಕ್ಕಳು ಹಾಗೂ ಭಾಗ್ಯಮ್ಮ, ಪ್ರಮೀಳ, ಮಂಜುಳ ಹೆಣ್ಣುಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅನೇಕ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಭಾನುವಾರ ಗ್ರಾಮದ ಹೊರವಲಯದಲ್ಲಿ ನಡೆಯಿತು.

ಜ.8 ರಂದು ಸಾರ್ವಜನಿಕ ಕುಂದು ಕೊರತೆ ಸಭೆ

ಮಂಡ್ಯ, ಜ.5–ಮಂಡ್ಯ ಲೋಕಾಯುಕ್ತ ವಿಭಾಗದ ಪೊಲೀಸ್ ಅಧಿಕಾರಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಸಾರ್ವಜನಿಕರಿಂದ ದೂರು/ಅಹವಾಲು ಸ್ವೀಕಾರ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆ ಸಭೆಯನ್ನು ಜ.8ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಶ್ರೀರಂಗಪಟ್ಟಣ ತಾಲೂಕು ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯಲ್ಲಿ ಮಂಡ್ಯ ಕರ್ನಾಟಕ ಲೋಕಾಯುಕ್ತ ಡಿವೈಎಸ್‌ಪಿ ಸುನಿಲ್ ಕುಮಾರ್ ಹೆಚ್.ಟಿ, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಮೋಹನ್‌ರೆಡ್ಡಿ ಆರ್.ಎಂ, ಎಂ.ಜಯರತ್ನ, ಬ್ಯಾಟರಾಯಗೌಡ ಬಿ.ಪಿ ಅವರುಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಶ್ರೀರಂಗಪಟ್ಟಣ ತಾಲೂಕಿನ ಸಾರ್ವಜನಿಕರು ಲೋಕಾಯುಕ್ತ ಅಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳು ಸರ್ಕಾರಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಬ ಮಾಡಿದ ಬಗ್ಗೆ ಹಾಗೂ ಭ್ರಷ್ಟಾಚಾರದ ಬಗ್ಗೆ ದೂರು/ಅಹವಾಲುಗಳನ್ನು ಸಲ್ಲಿಸಬಹುದು ಎಂದು ಮಂಡ್ಯ ಲೋಕಾಯುಕ್ತ ಎಸ್ಪಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ...



ಕೃಷ್ಣರಾಜ ಪೇಟೆ ತಾಲೂಕು, ಮೈಸೂರು ನಿವಾಸಿಗಳ ಸಂಘದ ವತಿಯಿಂದ ಹೊರತರಲಾಗಿರುವ 2025ರ ಸಾಲಿನ ಕ್ಯಾಲೆಂಡರ್‌ನ್ನು ಸಂಘದ ಕಛೇರಿಯಲ್ಲಿ ಉದ್ಯಮಿ ಹಾಗೂ ಬಿಜೆಪಿ ಮುಖಂಡ ಬೂಕಳ್ಳಿ ಮಂಜು ಬಿಡುಗಡೆ ಮಾಡಿದರು, ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಚಂದ್ರೇಗೌಡ, ಗೌರವಾಧ್ಯಕ್ಷ ಹೆಚ್.ವಿ.ಗಣೇಶ್, ಕಾರ್ಯದರ್ಶಿ, ರಾಮಚಂದ್ರ ಮತ್ತು ಸಂಘಟನಾ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಸೇರಿದಂತೆ ಎಲ್ಲ ಪದಾಧಿಕಾರಿಗಳು ಹಾಜರಿದ್ದರು.

ಮಕ್ಕಳಿಗೆ ರಕ್ಷಣಾತ್ಮಕ ಕ್ರೀಡೆ ಕರಾಟೆ ಕಲಿಸುವುದು ಒಳಿತು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ



ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ 19ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ಜ.5(ಎಸ್‌ಬಿಡಿ)– ಮಕ್ಕಳಿಗೆ ರಕ್ಷಣಾತ್ಮಕ ಕ್ರೀಡೆಯಾದ ಕರಾಟೆ ಕಲಿಯುವುದು ಒಳ್ಳೆಯದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರಿನ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 19ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಉದ್ಘಾಟಿಸಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಕ್ರೀಡೆಯಾಗಿರುವ ಕರಾಟೆ, ಅತ್ಯಂತ ಧೈರ್ಯ ಮತ್ತು ಚಾಕಚಕ್ಯತೆ ಬೆಳೆಸುವ ಅತ್ಯುತ್ತಮ ಕ್ರೀಡೆ ಎಂದರು.

ಚಿಕ್ಕ ವಯಸ್ಸಿನಿಂದಲೇ ಕರಾಟೆ ಕಲಿಸಬೇಕು. ಅದರಲ್ಲೂ ಕರಾಟೆ ಕಲಿಕೆ ಹೆಣ್ಣು ಮಕ್ಕಳ ಆತ್ಮ ರಕ್ಷಣೆಗೆ ಉಪಯೋಗವಾಗಲಿದೆ. ಕರಾಟೆಯಂತಹ ಸಮರ ಕಲೆಗಳು ಸ್ವಾಭಿಮಾನದಿಂದ ಜೀವನ ನಡೆಸುವುದನ್ನು ಕಲಿಸುವ ಜೊತೆಗೆ ಅಗತ್ಯ ಕೌಶಲ್ಯಗಳನ್ನು ವೃದ್ಧಿಸುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರತಿಯೊಬ್ಬರೂ ಕ್ರೀಡಾ ಭಾವನೆಯಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಮಹಮ್ಮದ್ ಅಲಿ ಖ್ಯಾತ ಬಾಕ್ಸಿಂಗ್ ಪಟು. ಮೂರು ಬಾರಿ ವಿಶ್ವ ಹೆವಿವೇಯ್ಟ್ ಚಾಂಪಿಯನ್ ಆಗಿದ್ದರು. ಆದ್ದರಿಂದ ಅವರನ್ನು ಸಾರ್ವ ಕಾಲಿಕ ಶ್ರೇಷ್ಠ ಬಾಕ್ಸಿಂಗ್ ಪಟು ಎಂದು ಪರಿಗಣಿಸಲಾಗುತ್ತದೆ. ಅಂತಹ ಕ್ರೀಡಾ ಸಾಧಕರನ್ನು ಸ್ಫೂರ್ತಿಯಾಗಿಸಿಕೊಂಡು ನೀವೂ ಅತ್ಯುತ್ತಮ ಸಾಧನೆ ಮಾಡಬೇಕು ಎಂದು ನೆರೆದಿದ್ದ ಕರಾಟೆ ಪಟುಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಿ, ನೂತನ ವರ್ಷದ ಅಕಾಡೆಮಿಯ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಇತಿಹಾಸ ತಜ್ಞರಾದ ಪಿ.ವಿ.ನಂಜರಾಜ ಅರಸ್, ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ಸೋಸಲೆ ಸಿದ್ದರಾಜು, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಬಾಸ್ಕರ್ ನಾಯಕ್, ಅಕಾಡೆಮಿ ಕಾರ್ಯದರ್ಶಿ ದೀಪಕ್ ಕುಮಾರ್, ಟಿ.ಪಿ.ಬಸವಣ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆಹ್ವಾನ ಪತ್ರಿಕೆ ಬಿಡುಗಡೆ



ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆ ವತಿಯಿಂದ ಆಯೋಜಿಸಿರುವ ಅಮರಶಿಲ್ಪಿ ಜಕಣಾಚಾರಿಯವರ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಮತ್ತು ಕ್ಯಾಲೆಂಡರ್ ಅನ್ನು ಕಾಂಗ್ರೆಸ್ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಬಿಡುಗಡೆ ಮಾಡಿದರು. ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಯರಾಮಚಾರ್, ಮಹೇಶ ಆಚಾರ್ ಹಾಗೂ ವಿಶ್ವಕರ್ಮ ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು,ಜ.5– ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ "Legal Aid Defense Counsel System" (LADCS) ಕಚೇರಿಯಲ್ಲಿ ಖಾಲಿ ಇರುವ ಮುಖ್ಯ ಕಾನೂನು ಸಹಾಯ ರಕ್ಷಣಾ ಸಲಹೆಗಾರ (1) ಉಪ ಕಾನೂನು ನೆರವು ರಕ್ಷಣಾ ಸಲಹೆಗಾರ (2) ಮತ್ತು ಸಹಾಯಕ ಕಾನೂನು ನೆರವು ರಕ್ಷಣಾ ಸಲಹೆಗಾರರ (2) ಹುದ್ದೆಗಳ ನೇಮಕಾತಿಗೆ ಅರ್ಹ ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಎರಡು ವರ್ಷದ ಅವಧಿಗೆ ಮಾಸಿಕ ವೇತನವನ್ನು ನೀಡಿ, ಗುತ್ತಿಗೆ ಆಧಾರದ ಮೇಲೆ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಅರ್ಜಿಯನ್ನು ಪಡೆದು, ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಜ.10ರೊಳಗೆ ಜಯನಗರ, 5ನೇ ಕ್ರಾಸ್‌ನಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 6 ಜನವರಿ 2025

● ಮೃತ್ಯುಂಜಯ ದೇವಸ್ಥಾನದಲ್ಲಿ ಉಂಟಾದ ವಸ್ತ್ರಸಂಹಿತೆ ವಿವಾದ ಬಗೆಹರಿಸಲು ಸಭೆಯಲ್ಲಿ ಒಮ್ಮತ ಮೂಡದ ಹಿನ್ನೆಲೆ

ಜಿಲ್ಲಾಡಳಿತ ಸೂಚನೆ ಪಾಲಿಸಲು ನಿರ್ಧಾರ

ಮಡಿಕೇರಿ, ಜ.5–ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಸ್ಥಾನದಲ್ಲಿ ಉಂಟಾದ ವಸ್ತ್ರ ಸಂಹಿತೆ ವಿವಾದ ಬಗೆಹರಿಸಲು ಜಿಲ್ಲಾಡಳಿತ ಸೂಚನೆ ಮೇರೆಗೆ ಮರಗೋಡು ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ದೇವಾಲಯ ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಪ್ರಮುಖರು ಸಭೆ ನಡೆಸಿದರು.

ದೇವಾಲಯ ಆಡಳಿತ ಮಂಡಳಿ 13 ಸದಸ್ಯರು ಸಹಿತ 43 ಮಂದಿ ಒಳಗೊಂಡ ಉಪಸಮಿತಿ ಸದಸ್ಯರ ಪೈಕಿ ಸಭೆಗೆ 40 ಮಂದಿ ಹಾಜರಾಗಿದ್ದರು. ಇದು ಸೂಕ್ಷ್ಮ ವಿಚಾರವಾಗಿದ್ದ ಹಿನ್ನೆಲೆಯಲ್ಲಿ ದೇವಾಲಯ ಸಮಿತಿ ಹೊರತುಪಡಿಸಿದಂತೆ ಬೇರೆ ವ್ಯಕ್ತಿಗಳಿಗೆ ಸಭೆ ಪ್ರವೇಶಿಸಲು ಅನುಮತಿ ನಿರಾಕರಿಸ ಲಾಗಿತ್ತು. ಸಭೆಯಲ್ಲಿ ವಸ್ತ್ರಸಂಹಿತೆ ಕುರಿತು ಒಮ್ಮತ ಮೂಡದಿರುವ ಕಾರಣ ಸಭೆ ವರದಿಯನ್ನು ಜಿಲ್ಲಾ ಡಳಿತಕ್ಕೆ ಸಲ್ಲಿಸಿ, ಜಿಲ್ಲಾಧಿಕಾರಿಗಳು ನೀಡುವ ಸೂಚನೆ ಪಾಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಮೂಡದ ಒಮ್ಮತ: ಕಟ್ಟೆಮಾಡು, ಪರಂಬು ಪೈಸಾರಿ, ಚುಂಡೆಕಾಡು ಪೈಸಾರಿ, ನಾರಾಯಣ ಬಡಾವಣೆಗಳ ದೇವಾಲಯ ಸಮಿತಿ ಪ್ರಮುಖರು ಸಭೆ ನಡೆಸಿ, ವಸ್ತ್ರಸಂಹಿತೆ, ದೇವಾಲಯ ಅಭಿವೃದ್ಧಿ, ಪೂಜೆ ಕಾರ್ಯಗಳ ಕುರಿತು ಚರ್ಚಿಸಿದರು. ಈ ವೇಳೆ ಕಟ್ಟೆಮಾಡು ಗ್ರಾಮದ ಕೊಡವ ಸಮುದಾಯದವರಿಗೆ ಹಬ್ಬದ ಕೊನೆ ದಿನ ಕುಪ್ಯ ಚೇಲೆ ತೊಡಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇದಕ್ಕೆ ಸಭೆಯಲ್ಲಿದ್ದ ದೇವಾಲಯ ಸಮಿತಿಯಲ್ಲಿರುವ ಕೊಡವ ಸಮುದಾಯದವರು ಆಕ್ಷೇಪ ವ್ಯಕ್ತಪಡಿಸಿದರು. ಕೇವಲ ಗ್ರಾಮದವರಿಗೆ ಮಾತ್ರವಲ್ಲದೇ ಎಲ್ಲಾ ಕೊಡವ ಸಮುದಾಯದವರಿಗೂ ಹಬ್ಬದ ಸಂದರ್ಭ ಕುಪ್ಯ ಚೇಲೆ ತೊಟ್ಟು ಮಹಾಮೃತ್ಯುಂಜಯ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಬೇಕೆನ್ನುವ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಇದಕ್ಕೆ ದೇವಾಲಯ ಸಮಿತಿ ಮತ್ತು ಇತರ ಉಪಸಮಿತಿ ಸದಸ್ಯರು ಒಪ್ಪಿಗೆ ಸೂಚಿಸಿಲ್ಲ ಎಂದು ತಿಳಿದು ಬಂದಿದೆ.

ಜಿಲ್ಲಾಡಳಿತ ನಿರ್ಧರಿಸಲಿ: ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಹಾಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಕಟ್ಟೆಮನೆ ಶಶಿ ಜನಾರ್ಧನ, ಸಭೆಯಲ್ಲಿ ವಸ್ತ್ರಸಂಹಿತೆ ವಿಚಾರದ ಕುರಿತು ಒಮ್ಮತ ಮೂಡಲಿಲ್ಲ. ಇತರೆ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಿ ನಿರ್ಣಯ ಮಾಡಲಾಗಿದೆ. ಈ ಕುರಿತು ಸೋಮವಾರ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದರು.

ಜಿಲ್ಲಾಧಿಕಾರಿಗಳು ನೀಡುವ ಸೂಚನೆ ಆಧರಿಸಿ ಮಹಾಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ ಮುಂದಿನ ಕ್ರಮ ಕೈಗೊಳ್ಳುತ್ತದೆ. ಕಟ್ಟೆಮಾಡು ದೇವಾಲಯದ ಎಲ್ಲಾ ಕೆಲಸ ಕಾರ್ಯಗಳನ್ನು ಇಲ್ಲಿರುವ 4 ಪೈಸಾರಿಗಳ ಜನರೇ ನಿರ್ವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸಮುದಾಯದವರನ್ನು ಸಮಿತಿಗೆ ಸೇರ್ಪಡೆ ಮಾಡಲಾಗಿದೆ. ಹೀಗಾಗಿ ದೇವಾಲಯದ ಬೈಲಾದಲ್ಲೇ ಸಾಂಪ್ರದಾಯಿಕ ಉಡುಗೆ ತೊಡುಗೆಗಳಿಗೆ ಅವಕಾಶ ನೀಡಲಾಗಿಲ್ಲ ಎಂದು ಹೇಳಿದರು.



ಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ, ಉಪಸಮಿತಿ ಸಭೆ ಹಿನ್ನೆಲೆಯಲ್ಲಿ ಮರಗೋಡು ವಿಎಸ್‌ಎಸ್‌ಎನ್ ಸಭಾಂಗಣ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬಿಗಿ ಬಂದೋಬಸ್ತ್

ಕಟ್ಟೆಮಾಡು ಗ್ರಾಮ ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಅನುಮತಿ ಪಡೆದು ಮರಗೋಡು ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿತ್ತು. ಸಭೆಯಲ್ಲಿ ಎಲ್ಲಿಯೂ ಗೊಂದಲ ಗದ್ದಲಗಳಿಗೆ ಅವಕಾಶ ಇಲ್ಲದಂತೆ ಶಾಂತಿಯುತವಾಗಿ ಚರ್ಚೆ ನಡೆಸಲಾಗಿದೆ. ಕಟ್ಟೆಮಾಡು ಮಹಾಮೃತ್ಯುಂಜಯ ದೇವಾಲಯ ಹಾಗೂ ಮರಗೋಡು ವಿಎಸ್‌ಎಸ್‌ಎನ್ ಸಭಾಂಗಣ ಆವರಣದಲ್ಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ, ಗುಪ್ತಚರ ಇಲಾಖೆ, ಕೆಎಸ್‌ಆರ್‌ಪಿ ಸಿಬ್ಬಂದಿ ಉಪಸ್ಥಿತರಿದ್ದರು.

ಕೋವಿ ಹಕ್ಕು ಉಳಿವಿಗೆ ಸಂವಿಧಾನ ಬದ್ಧತೆ ರೂಪಿಸಲಿ



ಮಾಯಮುಡಿಯಲ್ಲಿ ನಡೆದ ತೋಕ್ ನಮ್ಮೆ ಕಾರ್ಯಕ್ರಮದಲ್ಲಿ ಕೋವಿ ಪ್ರದರ್ಶಿಸಲಯಿತು.

ಮಡಿಕೇರಿ, ಜ.5–'ಕೂರ್ಗ್ ಬೈ ರೇಸ್' ಮತ್ತು 'ಜಮ್ಮ' ಹಿಡುವಳಿಯ ಆಧಾರದಲ್ಲಿ ಬಂದಿರುವ ಕೋವಿಯ ವಿಶೇಷ ಹಕ್ಕುದಾರಿಕೆಯನ್ನು ಕೊಡವರು ಶಾಶ್ವತವಾಗಿ ಉಳಿಸಿಕೊಳ್ಳುವತ್ತ ಸಂವಿಧಾನ ಬದ್ಧತೆ ರೂಪಿಸಿಕೊಳ್ಳಬೇಕಾದದ್ದು ಜವಾಬ್ದಾರಿಯಾಗಿದೆ ಎಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಹೇಳಿದರು.

ಮಾಯಮುಡಿ ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಜೆಸಿಐ ಪೊನ್ನಂಪೇಟೆ ಸಂಸ್ಥೆ ಸಹಯೋಗದಲ್ಲಿ ನಡೆದ ಅಕಾಡೆಮಿಯ ಪ್ರಥಮ ಬಾರಿಯ 'ತೋಕ್ ನಮ್ಮೆ' ಉದ್ಘಾಟಿಸಿ ಮಾತನಾಡಿದ ಅವರು, ಕೋವಿ ಬಳಕೆ ಹಾಗೂ ಪಾವಿತ್ರ್ಯತೆ ಬಗ್ಗೆ ತಿಳಿದುಕೊಳ್ಳುವುದು ಮತ್ತು ಮುಂದಿನ ಪೀಳಿಗೆಗೆ ತಿಳಿ ಹೇಳುವುದು ನಮ್ಮ ಕರ್ತವ್ಯ ಎಂದರು.

ಜಬ್ಬೂಮಿ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಚೊಟ್ಟೆಯ ಮಾಡ ರಾಜೀವ್ ಬೋಪಯ್ಯ ಮಾತನಾಡಿ, ಅನಾದಿ ಕಾಲದಿಂದ ಬಂದಿರುವ ಸಂಪ್ರದಾಯ ಹಾಗೂ ಜೀವನ ಕ್ರಮವನ್ನು ಬದ್ಧತೆಯಿಂದ ಪರಿಪಾಲಿಸುತ್ತಿರುವ ಕೊಡವ ಭಾಷಿಕ ಜನಾಂಗಗಳು ಒಗ್ಗಟ್ಟಿನಿಂದ ಬಂದೂಕು ಹಕ್ಕುದಾರಿಕೆ ರಕ್ಷಣೆ ಮಾಡಿಕೊಳ್ಳಬೇಕು ಎಂದರು.

ವಕೀಲ ಬಲ್ಯಮಾಡ ಬಿ.ಮಾದಪ್ಪ 'ಕೊಡವಡ ತೋಕ್‌ರ ಹಕ್ಕ್‌ದಾರಿಕೆ ಪಿಂಞ ರಕ್ಷಣೆ' ಕುರಿತು ವಿಚಾರ ಮಂಡಿಸಿ ಮಾತನಾಡಿ, ಕೊಡವ ಸೇರಿದಂತೆ ಮೂಲ ನಿವಾಸಿ ಕೊಡವ ಭಾಷಿಕರಿಗೆ ತಮ್ಮ ತಾಯ್ನೆಲದಲ್ಲಿ ಇರುವ ಹಕ್ಕುದಾರಿಕೆ, ಸಂಪ್ರದಾಯ ಮತ್ತು ಉಡುಗೆ ತೊಡುಗೆಗಳನ್ನು ಕಾನೂನಾತ್ಮಕವಾಗಿ ರಕ್ಷಿಸಿಕೊಳ್ಳಬೇಕಾಗಿದೆ ಎಂದರು. ಕೊಡವರಿಗೆ ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯಗಳಿವೆ ಎಂದು ತಿಳಿಸಿದರು.

ಕೊಡವರಿಗೆ ಕೋವಿ ಹಕ್ಕುದಾರಿಕೆ ಅನಾದಿ ಕಾಲದಿಂದಲೂ ಬಂದಿದೆ. ಕೊಡವರ ಧೈರ್ಯ–ಸ್ಥೈರ್ಯದೊಂದಿಗೆ ಶಿಸ್ತು, ಶಿಷ್ಟಾಚಾರದ ಭಾಗವಾಗಿ ಕೋವಿ ಹಕ್ಕುದಾರಿಕೆ ಸಂಸ್ಕೃತಿಯಾಗಿದೆ. ಇದನ್ನು ಶಾಸನ ಬದ್ಧಗೊಳಿಸುವ ಮೂಲಕ ರಕ್ಷಿಸಿಕೊಳ್ಳಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಸಿಐ ಪೊನ್ನಂಪೇಟೆ ಅಧ್ಯಕ್ಷ ಪೆಮ್ಮಂಡ ಮಂಜು ಬೋಪಣ್ಣ, ಕಾವೇರಿ ಅಸೋಸಿಯೇಷನ್ ಅಧ್ಯಕ್ಷ ಕಾಳಪಂಡ ಟಿಪ್ಪು ಬಿದ್ದಪ್ಪ, ಅಖಿಲ ಅಮ್ಮ ಕೊಡವ ಸಮಾಜದ ಬಾನಂಡ ಪ್ರಥ್ಯು, ಕಾಳಪಂಡ ಸಿ.ಸುಧೀರ್, ಜೆಸಿಐ ವಲಯ ನಿರ್ದೇಶಕ ಪಾರುವಂಗಡ ದಿಲನ್ ಚಂಗಪ್ಪ, ಯೋಜನಾ ನಿರ್ದೇಶಕ ಚೋನಿರ ಬಿ.ಸೋಮಣ್ಣ, ಜೆಸಿಐ ನಿರ್ದೇಶಕ ವಲಯ–14ರ ಅಪ್ಪಡೇರಂಡ ದಿನು, ಮಾಯಮುಡಿ ಗ್ರಾಪಂ ಅಧ್ಯಕ್ಷ ಆಪಟ್ಟಿರ ಟಾಟು ಮೊಣ್ಣಪ್ಪ, ಅಕಾಡೆಮಿ ಸದಸ್ಯರಾದ ಕೊಂಡಿಜಮ್ಮನ ಬಾಲಕೃಷ್ಣ, ಚೊಟ್ಟೆಯಂಡ ಸಂಜು ಕಾವೇರಪ್ಪ, ನಾಯಂದಿರ ಶಿವಾಜಿ, ಮೊಳ್ಳೆಕುಟ್ಟಡ ದಿನು ಬೋಜಪ್ಪ, ನಾಯಕಂಡ ಬೇಬಿ ಚಿಣ್ಣಪ್ಪ, ಕಂಬೆಯಂಡ ಡೀನ ಭೋಜಣ್ಣ ಹಾಗೂ ಜೆಸಿಐ ಸದಸ್ಯರು ಹಾಜರಿದ್ದರು.

ಕೊಡ್ಲಿಪೇಟೆಯಲ್ಲಿ ಸಾವಿತ್ರಿ ಬಾಯಿಪುಲೆ ಜನ್ಮದಿನ ಆಚರಣೆ

ಮಡಿಕೇರಿ, ಜ.5– ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಮಾನವ ಬಂಧುತ್ವ ವೇದಿಕೆ ಕೊಡಗು ಜಿಲ್ಲಾ ಶಾಖೆ ವತಿಯಿಂದ ಸಾವಿತ್ರಿ ಬಾಯಿಪುಲೆ ಜನ್ಮದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಜೆ.ಎಲ್.ಜನಾರ್ಧನ್, ಸಾಮಾಜಿಕ ಅನಿಷ್ಟ ಹಾಗೂ ಗೊಡ್ಡು ಸಂಪ್ರದಾಯಗಳ ನಡುವೆ, ಪುರುಷರಂತೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಸಿಗಬೇಕು ಎಂದು ಸಾವಿತ್ರಿ ಬಾಯಿಪುಲೆ ಹೋರಾಟ ಮಾಡಿದ್ದಾರೆ ಎಂದರು.

ಮಲ್ಲಿಪಟ್ಟಣ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಚಂದ್ರಕಲಾ ಮಾತನಾಡಿ, ಸಾವಿತ್ರಿ ಬಾಯಿಫುಲೆ ಮಹಿಳೆಯರು ಮುಖ್ಯವಾಹಿನಿಗೆ ಬರಬೇಕು. ಹೆಣ್ಣು ಅಬಲೆ ಅಲ್ಲ ಸಬಲೆ ಎಂದು ಸ್ಮರಿಸಿದರು.

ಸೋಮವಾರಪೇಟೆ ತಾಲೂಕಿನ ಸಂಚಾಲಕ ಎಂ.ಎಸ್.ವೀರೇಂದ್ರ ಸಾವಿತ್ರಿ ಬಾಯಿಪುಲೆ ಅವರ ಜೀವನ ಚರಿತ್ರೆ, ಸಾಧನೆ ಬಗ್ಗೆ ವಿವರಿಸಿದರು. ಸಾವಿತ್ರಿ ಬಾಯಿಪುಲೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಮಹೇಶ್, ಮಾನವ ಬಂಧುತ್ವ ವೇದಿಕೆ ಸದಸ್ಯ ಎಂ.ಪಿ.ವಿಶ್ವ, ವೀರಭದ್ರ ದೊಡ್ಡಕೊಡ್ಲಿ, ಶಿಕ್ಷಕರು ಹಾಜರಿದ್ದರು.



ಕೊಡ್ಲಿಪೇಟೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿತ್ರಿ ಬಾಯಿಪುಲೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ನಾಗ ದೇವರಿಗೆ ಹಾಲಿನ ಅಭಿಷೇಕ



ವಿರಾಜಪೇಟೆಯ ಶಿವಕೇರಿ ದುರ್ಗಿವಿಷ್ಣುಮೂರ್ತಿ ನಾಗ ದೇವಸ್ಥಾನದಲ್ಲಿ ಉತ್ಸವ ನಡೆಸಲಾಯಿತು.

ವಿರಾಜಪೇಟೆ, ಜ.5–ಪಟ್ಟಣದ ಶಿವಕೇರಿಯಲ್ಲಿರುವ ಶ್ರೀ ದುರ್ಗಿವಿಷ್ಣುಮೂರ್ತಿ ನಾಗ ದೇವಸ್ಥಾನದಲ್ಲಿ ಕಿರುಷಷ್ಠಿ ಅಂಗವಾಗಿ ದೇವರಿಗೆ ಹಾಲು ಎರೆದು ಪೂಜಿಸಲಾಯಿತು.

ಬೆಳಗ್ಗೆಯಿಂದಲೇ ದೇವಾಲಯದಲ್ಲಿ ಕಿರುಷಷ್ಠಿ ಪ್ರಯುಕ್ತ ವಿಶೇಷ ಪೂಜೆ ನೆರವೇರಿಸಲಾಯಿತು. ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಬಳಿಕ ದುರ್ಗಿ ವಿಷ್ಣುಮೂರ್ತಿ ಉತ್ಸವ ಮೂರ್ತಿ ದೇವಸ್ಥಾನದ ಆವರಣದಲ್ಲಿ ಮೂರು ಸುತ್ತು ಪ್ರದಕ್ಷಿಣೆ ನಡೆಯಿತು. ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಮತ್ತು ಸದಸ್ಯರು ಹಾಜರಿದ್ದರು.

ಜ.8, ಲೋಕಾಯುಕ್ತರಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಜ.5–ಲೋಕಾಯುಕ್ತ ಅಧಿಕಾರಿಗಳು ಜ.8ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ವರೆಗೆ ನಗರಸಭೆ ಕಾವೇರಿ ಕಲಾಕ್ಷೇತ್ರದಲ್ಲಿ ಸಾರ್ವಜನಿಕರ ದೂರು ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಕೆಲಸ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರು ನೀಡಬಹುದು. ಮಾಹಿತಿಗೆ ಮಡಿಕೇರಿಯ ಗೌಳಿಬೀದಿ ಲೋಕಾಯುಕ್ತ ಪೊಲೀಸ್ ಕಚೇರಿ ಅಥವಾ ದೂ.ಸಂ:08272–295297 ಅನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.


ಗಾಂಜಾ ಮಾರಾಟ : ಐವರ ಬಂಧನ

ಮಡಿಕೇರಿ, ಜ.5– ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಮೇಕೂರು ಹೊಸ್ಕೆರಿ ಬಸ್ ನಿಲ್ದಾಣ ಹಾಗೂ ಮಾರ್ಕೆಟ್‌ನಲ್ಲಿ ಗಾಂಜಾ ಮಾರುತ್ತಿದ್ದ 5 ಆರೋಪಿಗಳನ್ನು ಸಿದ್ದಾಪುರ ಪೊಲೀಸರು ಯಶಸ್ವಿಯಾಗಿದ್ದಾರೆ.

ಅಸ್ಸಾಂ ಮೂಲದ ಮೆಕೂರು ಹೊಸ್ಕೇರಿ ಗ್ರಾಮದ ನಿವಾಸಿಗಳಾದ ಸೋಫಿಕುಲ್ ಇಸ್ಲಾಂ (24), ಇಮ್ಮಿಯಾಜ್ ಆಲಿ(20), ರೋಹಿಥಾನ್(50), ಜಾನ್‌ಮಿಯಾ ಆಲಿ(22) ಮತ್ತು ಕೋಣನಕಟ್ಟೆ–ಸುಳುಗೋಡು ಗ್ರಾಮದ ಯೂಸೂಫ್ ಆಲಿ (32) ಬಂಧಿತರು.

ಬಂಧಿತರಿಂದ 2 ಕೆಜಿ 481 ಗ್ರಾಂ ಗಾಂಜಾ ವಶ ಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಲಯ ವಶಕ್ಕೆ ಒಪ್ಪಿಸಲಾಗಿದೆ.

ಪಂಜೇರಿರ ಬೆಳ್ಯಪ್ಪ ನಿಧನ



ಮಡಿಕೇರಿ, ಜ.5–ನಿವೃತ್ತ ಡೆಪ್ಯುಟಿ ರೇಂಜ್ ಫಾರೆಸ್ಟರ್, ಕೊಡವ ಜಾನಪದ ಪದ್ಧತಿ ಪರಂಪರೆಗಳ ಕುರಿತು ಮೂರು ಪುಸ್ತಕ ಬರೆದಿರುವ ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಡಿಕೇರಿಯ ಪುಟಾಣಿ ನಗರ ನಿವಾಸಿ ಪಂಜೇರಿರ ಬೆಳ್ಯಪ್ಪ (78) ಭಾನುವಾರ ಸಂಜೆ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ ಕಾಮವ್ವ, ಪುತ್ರ ಟಿವಿ9ನ ಜಗದೀಶ್ ಬೆಳ್ಯಪ್ಪ, ರಾಜೇಶ್, ಪುತ್ರಿ ಜರಿತಾ ಅವರನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಮಡಿಕೇರಿಯ ಕೊಡವ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಹಿಷ್ಕಾರ ಪ್ರಕರಣ: ಅಗರ ಗ್ರಾಮಕ್ಕೆ ತಹಸೀಲ್ದಾರ್ ಭೇಟಿ



ಅಗರ ಗ್ರಾಮದಲ್ಲಿ ತಹಸೀಲ್ದಾರ್ ಜಯಪ್ರಕಾಶ್ ನೇತೃತ್ವದಲ್ಲಿ ಸಭೆ ನಡೆಸಲಾಯಿತು.

ಯಳಂದೂರು, ಜ.5–ಕುಟುಂಬವೊಂದಕ್ಕೆ ಹಾಕಿರುವ ಬಹಿಷ್ಕಾರ ಹಿನ್ನೆಲೆಯಲ್ಲಿ ತಹಸೀಲ್ದಾರ್ ಜಯಪ್ರಕಾಶ್, ಪಿಎಸ್‌ಐ ಕರಿಬಸಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೇಶವಮೂರ್ತಿ ಅಗರ ಗ್ರಾಮಕ್ಕೆ ಭೇಟಿ ನೀಡಿ, ಸಭೆ ನಡೆಸಿದರು.

ಗ್ರಾಮದ ಲಿಂಗಾಯತ ಬಡಾವಣೆಯ ಮಠದ ಬೀದಿಯ ನಿವಾಸಿ ವೀರಣ್ಣ ಗೌರಮ್ಮ ಹಾಗೂ ಇವರ ಮಗ ವಿ.ಸುರೇಶ ಅವರ ಕುಟುಂಬಕ್ಕೆ ಹಾಕಿರುವ ಬಹಿಷ್ಕಾರ ಹಿನ್ನೆಲೆಯಲ್ಲಿ ಅಧಿಕಾರಿಗಳು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ವೀರಣ್ಣ ಹಾಗೂ ಗೌರಮ್ಮ ಕುಟುಂಬ ಲಿಂಗಾಯತ ಬಡಾವಣೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಮನೆ ಬಾಡಿಗೆಗೆ ನೀಡಿದ್ದಾರೆ ಎಂದು ಯಾವುದೇ ಧಾರ್ಮಿಕ ಸಭೆ, ಸಮಾರಂಭ ಹಾಗೂ ದೇಗುಲಕ್ಕೆ ಬಾರದಂತೆ ನಮಗೆ ಬಹಿಷ್ಕಾರ ಹಾಕಲಾಗಿದೆ ಎಂದು ಕುಟುಂಬದ ಸದಸ್ಯ ವಿ.ಸುರೇಶ್ ಆರೋಪಿಸಿದ್ದರು.

ನಾವು ಯಾವುದೇ ಬಹಿಷ್ಕಾರ ಹಾಕಿಲ್ಲ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಜನಾಂಗದ ಕೆಲ ಮುಖಂಡರ ವಿರುದ್ಧ ದೂರು ನೀಡಿದ್ದಾರೆ ಎಂದು ಲಿಂಗಾಯತ ಮುಖಂಡರು ಸಭೆಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ಎಸ್‌ಪಿ ಅವರಿಗೆ ವರದಿ ನೀಡಲಾಗುವುದು ಎಂದು ತಹಸೀಲ್ದಾರ್ ಜಯಪ್ರಕಾಶ್ ಮಾಹಿತಿ ನೀಡಿದರು.

ಮಾಜಿ ಶಾಸಕ ನರೇಂದ್ರರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ

ಕ್ಷೇತ್ರದ ಸಮಸ್ಯೆಗಳ ಅಹವಾಲು ಸ್ವೀಕಾರ ಸಭೆಯಲ್ಲಿ ಮುಖಂಡರಿಗೆ ಸಚಿವ ಹೆಚ್.ಸಿಮಹದೇವಪ್ಪ ಭರವಸೆ

ಒಬ್ಬ ಶಾಸಕನಿಂದ ಸಚಿವ ಸಂಪುಟ ಸಭೆ ಆಯೋಜನೆ ಅಸಾಧ್ಯ

ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಈಗಾಗಲೇ ಜಿಲ್ಲೆಯ ಹಲವಾರು ಸಮಸ್ಯೆಗಳ ಬಗ್ಗೆ ಹಿರಿಯ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪಟ್ಟಿ ಮಾಡಿಸಲಾಗಿದೆ. ಮುಖ್ಯಮಂತ್ರಿಗಳ ಜೊತೆ ಸುದೀರ್ಘವಾಗಿ ಚರ್ಚೆ ನಡೆಸಿ, ಈ ಭಾಗದಲ್ಲಿ ಸಚಿವ ಸಂಪುಟ ಸಭೆ ನಿಗದಿ ಮಾಡಿರುವುದು ನಾನು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಅವರು. ಒಬ್ಬ ಶಾಸಕನಿಂದ ಸಚಿವ ಸಂಪುಟ ಸಭೆ ಅಸಾಧ್ಯ ಎಂದು ಶಾಸಕ ಎಂ.ಆರ್. ಮಂಜುನಾಥ ಹೆಸರು ಹೇಳದೆ ಸಚಿವ ಹೆಚ್.ಸಿ. ಮಹದೇವಪ್ಪ ಟಾಂಗ್ ನೀಡಿದರು. ಆರ್.ನರೇಂದ್ರ, ನಾನು ಒಂದೇ ಕುಟುಂಬದ ಅಣ್ಣ–ತಮ್ಮಂದಿರಂತೆ ಅವರನ್ನು ಯಾವುದೇ ಕಾರಣಕ್ಕೂ ಕಡೆಗಣಿಸುವ ಪ್ರಶ್ನೆ ಇಲ್ಲ. ಹನೂರು ಕ್ಷೇತ್ರದಲ್ಲಿ ಇದುವರೆಗೂ ಅಭಿವೃದ್ಧಿಗಳು ಅವರ ನೇತೃತ್ವದಲ್ಲೇ ಆಗಿದೆ. ಮುಂದೆಯೂ ಆಗುತ್ತದೆ. ಆರ್.ನರೇಂದ್ರಗೆ ಶಕ್ತಿ ನೀಡಲು ಮುಂದಿನ ದಿನಗಳಲ್ಲಿ ಉನ್ನತ ಹುದ್ದೆ ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಭರವಸೆ ನೀಡಿದರು.



ಮೈಸೂರಿನಲ್ಲಿ ನಡೆದ ಹನೂರು ಕ್ಷೇತ್ರದ ಮುಖಂಡರ ಸಭೆಯಲ್ಲಿ ಸಚಿವ ಹೆಚ್.ಸಿಮಹದೇವಪ್ಪ ಮಾತನಾಡಿದರು.

ಹನೂರು, ಜ.5– ಮಾಜಿ ಶಾಸಕ ಆರ್.ನರೇಂದ್ರ ಅವರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಆರ್.ನರೇಂದ್ರ ಅವರೊಂದಿಗೆ ಚರ್ಚಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿಮಹದೇವಪ್ಪ ತಿಳಿಸಿದರು.

ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಅತಿಥಿಗೃಹದಲ್ಲಿ ನಡೆದ ಹನೂರು ಕ್ಷೇತ್ರದ ಮುಖಂಡರ ಸಮಸ್ಯೆಗಳ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನಾನು ಕ್ಷೇತ್ರಕ್ಕೆ ಮತಯಾಚನೆಗೆ ತೆರಳಿದ್ದಾಗ ಅಲ್ಲಿನ ಸಮಸ್ಯೆಗಳ ಬಗ್ಗೆ ಖುದ್ದು ತಿಳಿದುಕೊಂಡಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಬಗೆಹರಿಸುವುದಾಗಿ ಭರವಸೆ ನೀಡಿದ್ದೇನೆ ಅದರಂತೆ ಕ್ಷೇತ್ರದ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮಾಜಿ ಶಾಸಕ ನರೇಂದ್ರ ಅವರೊಂದಿಗೆ ಚರ್ಚೆ ನಡೆಸಿ, ಸಮಗ್ರ ಮಾಹಿತಿ ಪಡೆದು ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗುವುದು ಎಂದರು.

ಜಿಲ್ಲಾಧಿಕಾರಿಗಳ ಜೊತೆ ಚರ್ಚೆ: ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಜೊತೆ ಈಗಾಗಲೇ ಎರಡು ಸುತ್ತಿನ ಸಭೆ ನಡೆಸಿ, ಜಿಲ್ಲೆಯಲ್ಲಿ ಪ್ರಮುಖವಾಗಿ ಆಗಬೇಕಾಗಿರುವ ಕಾಮಗಾರಿಗಳ ಪಟ್ಟಿ ಮಾಡಿಸಿ ವರದಿ ಪಡೆದುಕೊಂಡಿದ್ದೇನೆ. ಮಹದೇಶ್ವರಸ್ವಾಮಿ, ಮಂಟೇಸ್ವಾಮಿ, ಸಿದ್ದಪ್ಪಾಜಿ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಪಪಂ ಸದಸ್ಯ ಗಿರೀಶ್ ಮಾತನಾಡಿ, ಆರ್.ನರೇಂದ್ರ ಅವರನ್ನು ಕಡೆಗಣಿಸಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಹನೂರು ಕ್ಷೇತ್ರದಿಂದ ಹೆಚ್ಚಿನ ಲೀಡ್ ಕೊಡಿಸಿದ್ದೇವೆ. ನೀವು ಚುನಾವಣೆ ಸಂದರ್ಭದಲ್ಲಿ ನೀಡಿರುವ ಭರವಸೆಯನ್ನು ಈಡೇರಿಸಬೇಕು. ನಮ್ಮ ನಾಯಕರಿಗೆ ಅಧಿಕಾರ ನೀಡಿದರೆ, ನಮಗೂ ಶಕ್ತಿ ಬರುತ್ತದೆ ಎಂದು ಹೇಳಿದರು.

ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್ ಮಾತನಾಡಿ, 50 ವರ್ಷಗಳಿಂದ ದಿ.ರಾಜುಗೌಡ ಕುಟುಂಬ ಹನೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದೆ. ಕಳೆದ ಚುನಾವಣೆಯಲ್ಲಿ ಸೋಲಾಗಿದೆ. ಆರ್.ನರೇಂದ್ರ ಅವರು ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರ ಕಷ್ಟ–ಸುಖದಲ್ಲಿ ಭಾಗಿಯಾಗುತ್ತಿದ್ದಾರೆ. ಅವರಿಗೆ ಸರ್ಕಾರ ಮಟ್ಟದಲ್ಲಿ ಉನ್ನತ ಸ್ಥಾನ ನೀಡುವ ಮೂಲಕ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ರಾಮಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ್, ಹನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಕುಂದವರ್ಮ, ಜಿಪಂ ಮಾಜಿ ಅಧ್ಯಕ್ಷೆ ಶಿವಮ್ಮ, ಮಾಜಿ ಸದಸ್ಯರಾದ ಬಸವರಾಜು, ಕೊಪ್ಪಳಿ ಮಹದೇವ ನಾಯಕ್, ತಾಪಂ ಮಾಜಿ ಸದಸ್ಯ ಜವಾದ ಅಹಮದ್, ಚಾಮುಲ್ ನಿರ್ದೇಶಕರಾದ ನಂಜುಂಡಸ್ವಾಮಿ, ಶಾಹುಲ್ ಅಹಮದ್, ಪಪಂ ಸದಸ್ಯರಾದ ಹರೀಶ್ ಸುದೇಶ್, ಬಸವರಾಜು, ನವೀನ್, ಗ್ರಾಪಂ ಸದಸ್ಯ ಕೃಷ್ಣ, ಮುಖಂಡರಾದ ಮಹದೇವ ಪ್ರಸಾದ್, ಸೋಮಣ್ಣ ನಾಗೇಂದ್ರ ಮಾದೇಶ್ ಹಾಗೂ ಹನೂರು ಕ್ಷೇತ್ರದ ವಿವಿಧ ಗ್ರಾಮಗಳ ಮುಖಂಡರು ಹಾಜರಿದ್ದರು.

ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ವಿಶೇಷಚೇತನ ಎಂ.ವಜ್ರಮಣಿ ಅವರಿಗೆ ತ್ರಿಚಕ್ರ ವಾಹನ ನೀಡಲಾಯಿತು.

ಚಾಮರಾಜನಗರ: ಮೈಸೂರಿನ ರೋಟರಿ ಪಂಚಶೀಲ ಹಾಗೂ ಸಾಯಿ ಫೌಂಡೇಶನ್ ವತಿಯಿಂದ ನೀಡಿರುವ ತ್ರಿಚಕ್ರ ವಾಹನವನ್ನು ವಿಶೇಷಚೇತನ ಎಂ.ವಜ್ರಮಣಿ ಅವರಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ವಿತರಿಸಿದರು.

ರೋಟರಿ ಪಂಚಶೀಲ ಹಾಗೂ ಸಾಯಿ ಫೌಂಡೇಶನ್ ಸದಸ್ಯ ಡಾ.ಎಂ.ಅನಿಲ್ ಕುಮಾರ್ ಸ್ವಂತ ಹಣದಿಂದ ಖರೀದಿಸಿರುವ ಟಿವಿಎಸ್ ತ್ರಿಚಕ್ರ ವಾಹನವನ್ನು, ವಿಶೇಷಚೇತನರಾದ ಯಳಂದೂರು ತಾಲೂಕಿನ ಮೆಲ್ಲಹಳ್ಳಿ ಗ್ರಾಮದ ಎಂ.ವಜ್ರಮಣಿ ಅವರಿಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಕೀ ಹಸ್ತಾಂತರಿಸುವ ಮೂಲಕ ನೀಡಲಾಯಿತು.

ವಿಶೇಷಚೇತನರ ಸೌಲಭ್ಯಗಳಿಗೆ ಸೇವೆ ಸಲ್ಲಿಸುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ವಜ್ರಮಣಿ ಅವರು ತ್ರಿಚಕ್ರ ವಾಹನ ನೀಡಬೇಕೆಂದು ಜಿಲ್ಲಾಧಿಕಾರಿಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಿಲ್ಪನಾಗ್ ರೋಟರಿ ಪಂಚಶೀಲ ಮತ್ತು ಸಾಯಿ ಫೌಂಡೇಶನ್ ಅವರಿಗೆ ವಿಶೇಷ ಚೇತನರಿಗೆ ನೆರವಾಗಲು ಪ್ರಸ್ತಾಪಿಸಿದ್ದರು.

ಈ ಹಿನ್ನೆಲೆಯಲ್ಲಿ ರೋಟರಿ ಹಾಗೂ ಪಂಚಶೀಲ ಸಾಯಿ ಫೌಂಡೇಶನ್ ಸದಸ್ಯ ಡಾ.ಅನಿಲ್ ಕುಮಾರ್ ಅವರು ತ್ರಿಚಕ್ರ ವಾಹನ ನೀಡಿದ್ದಾರೆ. ಡಾ.ಅನಿಲ್ ಹಾಗೂ ಅವರ ಕುಟುಂಬದವರು ವಜ್ರಮಣಿ ಅವರಿಗೆ ವಾಹನದ ಕೀ ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಜಿಪಂ ಸಿಇಓ ಮೋನಾ ರೋತ್, ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಮೈಸೂರಿನ ರೋಟರಿ ಜೋನಲ್ ಲೆಫ್ಟಿನೆಂಟ್ ಕಿರಣ್ ರಾಬರ್ಟ್, ರೋಟರಿ ಅಧ್ಯಕ್ಷರಾದ ಅಶ್ವಿನ್ ಪಾಳೆಗಾರ್, ಮಹೇಶ್, ಡಾ.ಪಂಕಜ, ಶೀತಲ್ ಕೊಟ್ಟಾಯನ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮೀನಾಕ್ಷಿ ಇನ್ನಿತರರು ಇದ್ದರು.

ಗಾಂಜಾ ಸಾಗಿಸುತ್ತಿದ್ದವನ ಬಂಧನ



ಗುಂಡ್ಲುಪೇಟೆ : ಕಾರಿನಲ್ಲಿ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹನೂರು ತಾಲೂಕಿನ ರಾಮಾಪುರ ಹೋಬಳಿಯ ಮಂಚಾಪುರ ಗ್ರಾಮದ ಗೋಪಾಲ ಕೃಷ್ಣ ಬಂಧಿತ ಆರೋಪಿ. ಈತ ಕಾರಿನಲ್ಲಿ 3 ಕೆಜಿ, 100 ಗ್ರಾಂ ಒಣ ಗಾಂಜಾವನ್ನು ಸಾಗಿಸುತ್ತಿದ್ದ. ಇದೇ ವೇಳೆ ದಾಳಿ ನಡೆಸಿದ ಪೊಲೀಸರು ಪಟ್ಟಣದ ಹೊರವಲಯದಲ್ಲಿ ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಈತ ಸದ್ಯ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ವಾಸವಿದ್ದು, ಆಗಾಗ ಪಟ್ಟಣದಲ್ಲಿ ಚಿಲ್ಲರೆ ಮಾರಾಟಗಾರರಿಗೆ ಗಾಂಜಾ ಸರಬರಾಜು ಮಾಡುತ್ತಿದ್ದ ಎನ್ನಲಾಗಿದೆ. ಕಾರ್ಯಾಚರಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಸಬ್‌ಇನ್ಸ್‌ಪೆಕ್ಟರ್ ಸಾಹೇಬಗೌಡ, ಮುಖ್ಯ ಪೇದೆಗಳಾದ ಗಂಗಾಧರ, ಚಿನ್ನಸ್ವಾಮಿ, ಮಂಜುನಾಥ, ಪೇದೆಗಳಾದ ಶಶಿಧರ ಮೂರ್ತಿ, ಮಹೇಶ, ಸುಬ್ರಹ್ಮಣ್ಯ, ಲಕ್ಷ್ಮಣ ಗೊಳಸಂಗಿ, ನಾಗರಾಜು ಹಾಗೂ ಜಯಶಂಕರ ಮೂರ್ತಿ ಭಾಗವಹಿಸಿದ್ದರು.

ವಿಶೇಷಚೇತನ ಶಿಬಿರ ವಾಹನಕ್ಕೆ ಶಾಸಕ ಚಾಲನೆ

ಚಾಮರಾಜನಗರ: ಪೋಲಿಯೋ ಪೀಡಿತರಿಗೆ ಉಚಿತ ಕೃತಕ ಕಾಲು ಮತ್ತು ಮುಂಗೈ (ಕ್ಯಾಲಿಪರ್ಸ್) ಜೋಡಣಾ ಶಿಬಿರಕ್ಕೆ ತೆರಳುತ್ತಿರುವ ಜಿಲ್ಲೆಯ ಫಲಾನುಭವಿಗಳ ವಾಹನಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಪೋಲಿಯೋ ಪೀಡಿತರಿಗಾಗಿ ಕೃತಕ ಕಾಲು ಮತ್ತು ಮುಂಗೈಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಇದಕ್ಕಾಗಿ ಜೈಪುರದ ಶ್ರೀಭಗವಾನ್ ಮಹಾವೀರ ವಿಕಲಾಂಗ ಸಹಾಯ ಸಮಿತಿ ಹಾಗೂ ಬೆಂಗಳೂರಿನ ರೋಟರಿ ಸಂಸ್ಥೆ ವತಿಯಿಂದ ಬೆಂಗಳೂರಿನ ಶಿವಾಜಿನಗರದ ಇನ್‌ಫೆಂಟ್ರಿ ರಸ್ತೆಯಲ್ಲಿ ಆಯೋಜಿಸಿರುವ ಬೃಹತ್ ಜೋಡಣಾ ಶಿಬಿರಕ್ಕೆ ಜಿಲ್ಲೆಯ ವಿಶೇಷಚೇತನ ಫಲಾನುಭವಿಗಳನ್ನು ಕರೆದೊಯ್ಯಲಾಗುತ್ತಿರುವ ಬಸ್‌ಗೆ ನಗರದ ರೋಟರಿ ಸಂಸ್ಥೆ ಮುಂಭಾಗ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಸಿರು ನಿಶಾನೆ ತೋರಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನಗರದ ವಿಕಲಚೇತನರ ಪುನರ್ವಸತಿ ಕೇಂದ್ರ, ಗ್ರೀನ್ ಸಂಸ್ಥೆ ಹಾಗೂ ಚಾಮರಾಜನಗರ ರೋಟರಿ ಸಂಸ್ಥೆ ಸಹಯೋಗದಲ್ಲಿ ಶಿಬಿರಕ್ಕೆ ಜಿಲ್ಲೆಯಿಂದ 55 ವಿಶೇಷಚೇತನ ಫಲಾನುಭವಿಗಳು ಹೊರಡಲು ವ್ಯವಸ್ಥೆ ಮಾಡಲಾಗಿದೆ.


ಇದೇ ವೇಳೆ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಪೋಲಿಯೋ, ಅಂಧತ್ವ ನಿರ್ಮೂಲನೆಗಾಗಿ ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಸಮಾಜಮುಖಿ ಕಾರ್ಯವನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿವೆ. ಈ ನಿಟ್ಟಿನಲ್ಲಿ ರೋಟರಿ ಸಂಸ್ಥೆ ಸಮಾಜ ಸೇವಾ ಕಾರ್ಯ ಇತರೆ ಸಂಸ್ಥೆಗಳಿಗೂ ಮಾದರಿಯಾಗಿದೆ. ಕಣ್ಣಿನ ತಪಾಸಣೆ, ರಕ್ತದಾನ, ಉಚಿತ ಡಯಾಲಿಸಿಸ್, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಸೇರಿದಂತೆ ಹಲವು ಶಿಬಿರಗಳನ್ನು ಏರ್ಪಡಿಸುತ್ತಿರುವ ರೋಟರಿ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲ ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ರಮೇಶ್, ಡಿಡಿಆರ್‌ಸಿ ನೋಡಲ್ ಅಧಿಕಾರಿ ವೆಂಕಟೇಶ್, ರೋಟರಿ ಅಧ್ಯಕ್ಷ ರಾಮಸಮುದ್ರ ನಾಗರಾಜು, ಕಾರ್ಯದರ್ಶಿ ಹೆಚ್.ಎಂ.ಗುರುಸ್ವಾಮಿ, ಕಾಗಲವಾಡಿ ಚಂದ್ರು, ಕೆಂಪನಪುರ ಸಿದ್ದರಾಜು, ಕೆ.ಎಂ. ಮಹದೇವಸ್ವಾಮಿ, ಅಬ್ದುಲ್ ಅಜೀಜ್ ದೀನಾ, ಗ್ರೀನ್ ಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ ಇತರರು ಇದ್ದರು.



ಕೃತಕ ಕೈ–ಕಾಲು ಜೋಡಣಾ ಶಿಬಿರಕ್ಕೆ ತೆರಳುತ್ತಿರುವ ಫಲಾನುಭವಿಗಳ ವಾಹನಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಮರಿಸ್ವಾಮಿ ನಿಧನ



ಯಳಂದೂರು, ಜ.5–ತಾಲೂಕಿನ ಅಂಬಳೆ ಗ್ರಾಮದ ನಿವೃತ್ತ ಕೃಷಿ ಸಹಾಯಕ ಮರಿಸ್ವಾಮಿ (79) ಅನಾರೋಗ್ಯದಿಂದ ಶುಕ್ರವಾರ ಸಂಜೆ ನಿಧನರಾದರು.

ಮೃತರು ಪತ್ನಿ, ವಕೀಲ ಜಯಶಂಕರ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಶನಿವಾರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಹುಣಸೂರಿನ 3 ಲಕ್ಷದ ಬೀಜದ ಹೋರಿ

ಗ್ರಾಮೀಣ ಸಂಸ್ಕೃತಿ, ಸೊಗಡು ಬಿಂಬಿಸುವ

ಚುಂಚನಕಟ್ಟೆ ಜಾನುವಾರು ಜಾತ್ರೆ ಆರಂಭ

● ಜಾತ್ರೆಗೆ 8 ರಿಂದ 15 ಸಾವಿರಕ್ಕೂ ಅಧಿಕ ಎತ್ತುಗಳ ಆಗಮನ ● ಲಕ್ಷಾಂತರ ಮೌಲ್ಯದ ಜನಾಕರ್ಷಣೆಯ ಜೋಡೆತ್ತುಗಳು

ಚುಂಚನಕಟ್ಟೆ, ಜ.5(ಮಧು)– ಸುಗ್ಗಿ ನಂತರ ನಡೆಯುವ ದಕ್ಷಿಣ ಭಾರತದ ಮೊದಲ ಜಾತ್ರೆ. ಕೃಷಿ ಯಂತ್ರೋಪಕರಣಗಳು ಲೆಕ್ಕವಿಲ್ಲದಷ್ಟು ಬಂದರೂ ರೈತರ ಅಭಿಮಾನ ಮತ್ತು ಪ್ರೀತಿಗೆ ಸಾಕ್ಷಿಯಾಗಿರುವ ಜೋಡೆತ್ತುಗಳು. ಎಲ್ಲಿ ನೋಡಿದರೂ ದೇಶಿ ತಳಿಯ ಗೋಸಂಪತ್ತಿನ ದರ್ಬಾರ್. ಶ್ರೀಮಂತ ರೈತರ ವೈಭೋಗಕ್ಕೆ ರಾಸುಗಳಿಗೆ ಶೃಂಗಾರಗೊಂಡ ಶಾಮಿಯಾನ ಚಪ್ಪರಗಳು. ಜಾನುವಾರುಗಳನ್ನು ಕೊಳ್ಳುವ ಮಾರಾಟ ಮಾಡುವ ಭರ್ಜರಿ ಭರಾಟೆ. ಜಾತ್ರೆ ನೋಡಲು ಹರಿದು ಬರುತ್ತಿರುವ ಜನಸಾಗರ.

ಇವು ಮೈಸೂರು ಜಿಲ್ಲೆಯ ಭತ್ತದ ಕಣಜ ಎಂದೇ ಹೆಸರು ಪಡೆದಿರುವ ಸಾಲಿಗ್ರಾಮ ತಾಲೂಕು ಚುಂಚನಕಟ್ಟೆಯಲ್ಲಿ ಕಂಡು ಬರುತ್ತಿರುವ ಗ್ರಾಮೀಣ ಸಂಸ್ಕೃತಿ, ಸೊಗಡು ಬಿಂಬಿಸುವ ಜಾನುವಾರು ಜಾತ್ರೆ ದೃಶ್ಯ ವೈಭವಗಳು.

ಈ ಬಾರಿ ಭರ್ಜರಿಯಾಗಿ ಆರಂಭಗೊಂಡಿರುವ ಚುಂಚನಕಟ್ಟೆ ಜಾನುವಾರು ಜಾತ್ರೆಯಲ್ಲಿ ಸಿಂಗಾರಗೊಂಡ ಜಾನುವಾರುಗಳ ಮೇಳ ಕಿಮೀಗಟ್ಟಲೆ ಕಂಡು ಬರುತ್ತಿದ್ದು, ಸುಗ್ಗಿ ದಣಿವನ್ನು ತಣಿಸಿಕೊಳ್ಳಲು ರೈತರು ಜಾನುವಾರು ಜಾತ್ರೆಯತ್ತ ಮುಗಿ ಬೀಳುತ್ತಿದ್ದು, 40 ಸಾವಿರ ರೂ.ಗಳಿಂದ ಆರಂಭಿಸಿ 4 ರಿಂದ 6 ಲಕ್ಷಕ್ಕೂ ಅಧಿಕ ಬೆಲೆ ಬಾಳುವ ದುಬಾರಿ ಎತ್ತುಗಳು ಜಾತ್ರೆಯಲ್ಲಿ ಜನಾಕರ್ಷಣೆ ಕೇಂದ್ರ ಬಿಂದುವಾಗಿವೆ.



ಚುಂಚನಕಟ್ಟೆ ಜಾತ್ರೆಯಲ್ಲಿ ಕಟ್ಟಿರುವ ಜೋಡೆತ್ತುಗಳು.

ಚುಂಚನಕಟ್ಟೆ ಜಾತ್ರೆಯಲ್ಲಿ ಮೈಸೂರು ಜಿಲ್ಲೆ ಮಾತ್ರವಲ್ಲದೇ ಮಂಡ್ಯ, ಹಾಸನ, ಚಾಮರಾಜನಗರ, ರಾಮನಗರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತುಮಕೂರು, ಕೋಲಾರ ಸೇರಿದಂತೆ ಇನ್ನಿತರ ಜಿಲ್ಲೆಗಳ ರೈತರು ಪ್ರತಿಷ್ಠೆಗೆ ಬಿದ್ದವರಂತೆ ಜಾನುವಾರುಗಳನ್ನು ವಾದ್ಯಗೋಷ್ಠಿ ಮೂಲಕ ಕರೆ ತರುತ್ತಿರುವುದು ನೋಡಲು 2 ಕಣ್ಣು ಸಾಲದಾಗಿದೆ. ಜಾತ್ರೆಯಲ್ಲಿ ಪಶುಸಂಗೋಪನೆ ಇಲಾಖೆ ಮಾಹಿತಿಯ ಪ್ರಕಾರ 8 ರಿಂದ 15 ಸಾವಿರಕ್ಕೂ ಅಧಿಕ ಎತ್ತುಗಳು ಬಂದಿದ್ದು, ರೈತರು ತಮ್ಮ ರಾಸುಗಳ ಮೇಲಿರುವ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ತಮ್ಮ ರಾಸುಗಳಿಗೆ ಬೃಹತ್ ಶಾಮಿಯಾನ, ವಿದ್ಯುತ್ ಅಲಂಕಾರಿಕ ಚಪ್ಪರಗಳನ್ನು ಹಾಕಿಸಿ ದೇಶಿ ತಳಿಯ ಗೋಸಂಪತ್ತಿನ ರಾಜ ದರ್ಬಾರ್ ನಡೆಸುತ್ತಿರುವುದು ಆಕರ್ಷಣೀಯವಾಗಿದೆ.

ಸದ್ಯ ಕೃಷಿ ಯಂತ್ರೋಪಕರಣಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತಿದ್ದರೂ ರೈತರಿಗೆ ಮಾತ್ರ ಜೊಡೆತ್ತುಗಳ ಮೇಲಿನ ಪ್ರೀತಿ ಕಮ್ಮಿಯಾಗುತ್ತಿಲ್ಲ. ಇದರಿಂದಲೇ ಚುಂಚನಕಟ್ಟೆ ಜಾತ್ರೆ ರಾಸುಗಳಿಗೆ ರಾಜ್ಯದಲ್ಲಿಯೇ ಉತ್ತಮ ಹೆಸರಿದ್ದು, ಅಲ್ಲದೇ 'ಗಂಡು ದನಗಳ ಜಾತ್ರೆ' ಎಂದೇ ಹೆಸರು ಪಡೆದಿರುವ ಈ ಜಾತ್ರೆಯ ವಿಶೇಷವೆಂದರೆ ಭಾಗಶಃ ಎತ್ತುಗಳೇ ಭಾಗವಹಿಸುವುದು ಮಾತ್ರವಲ್ಲದೇ ಬೀಜದ ಹೋರಿಗಳು ಮತ್ತು ಹೆಚ್ಚು ದುಡಿಮೆಗೆ ಒಗ್ಗುವ ಹಳ್ಳಿಕಾರ್ ತಳಿಯ ಎತ್ತುಗಳು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿವೆ.

ಜಾತ್ರೆಯಲ್ಲಿ ರಾಸುಗಳನ್ನು ಕೊಳ್ಳಲು ಬಳ್ಳಾರಿ, ಗದಗ, ಹುಬ್ಬಳ್ಳಿ, ಧಾರವಾಡ, ಕಲಬುರುಗಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಮತ್ತು ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ಸೇರಿದಂತೆ ಇನ್ನಿತರ ಕಡೆಯಿಂದ ರೈತರು ಬರುತ್ತಿದ್ದು, ರೈತರು ಉತ್ತಮ ವ್ಯವಹಾರದ ನಿರೀಕ್ಷೆಯಲ್ಲಿದ್ದಾರೆ.

> ಜಾತ್ರೆಯಲ್ಲಿ ಭೂಮಿ ಉಳುಮೆ ಮಾಡಲು ಹೆಸರು ಪಡೆದಿರುವ ಹಳ್ಳಿಕಾರ್ ತಳಿಯ ರಾಸುಗಳು ಸಿಗುವುದರಿಂದ ನಾವು 15 ಜನರ ತಂಡ ಬಂದಿದ್ದು, ಈ ಬಾರಿ ದರವೂ ಕೂಡ ಲಕ್ಷದ ಮೇಲೆ ನಡೆಯುತ್ತಿದ್ದು, ಕೊಳ್ಳಲು ಕಷ್ಟವಾಗುತ್ತಿದೆ. ಜೊತೆಗೆ ಈ ಜಾತ್ರೆ ನೋಡಿ ಕಣ್ತುಂಬಿಕೊಳ್ಳುವುದೇ ಒಂದು ಸೌಭಾಗ್ಯವಾಗಿದ್ದು, ಜಾತ್ರೆಯ ಬಗ್ಗೆ ಹೆಚ್ಚು ಪ್ರಚಾರದ ಅವಶ್ಯಕತೆ ಇದೆ.
> – ಬಸಪ್ಪ, ಹುಬ್ಬಳ್ಳಿ ನಿವಾಸಿ.



ಈ ಬಾರಿ ಉತ್ತಮ ಮಳೆ ಆಗಿದ್ದು ಮೇವಿನ ಕೊರತೆ ಇಲ್ಲವಾಗಿದೆ. ರೈತರು ರಾಸುಗಳ ಮೇಲೆ ಇಟ್ಟಿರುವ ಪ್ರೀತಿ ಇಮ್ಮಡಿಯಾಗಲು ಕಾರಣವಾಗಿದೆ. ರಾಸುಗಳನ್ನು ಕೊಳ್ಳುವುದು ಮತ್ತು ಮಾರುವುದರಲ್ಲೂ ಸಾಕಷ್ಟು ಲಾಭ ದೊರೆಯುವುದರಿಂದ ಮತ್ತು ಉತ್ತಮ ರಾಸುಗಳ ಕೊಳ್ಳುವಿಕೆಗೆ ಈ ಚುಂಚನಕಟ್ಟೆ ಜಾನುವಾರು ಜಾತ್ರೆ ಉತ್ತಮ ವೇದಿಕೆಯಾಗಿದ್ದು ಇದರಿಂದಲೇ ರೈತರು ಮತ್ತು ದಲ್ಲಾಳಿಗಳು ಇತ್ತ ಮುಖ ಮಾಡಿ ಭರ್ಜರಿ ಲಾಭ ಗಳಿಸುತ್ತಿದ್ದಾರೆ.

ರೈತರು ತಮ್ಮ ಎತ್ತುಗಳನ್ನು ಜಾತ್ರಾ ಮಾಳಕ್ಕೆ ಕರೆ ತರುವಾಗ ಸಾವಿರಾರು ರೂ. ಖರ್ಚು ಮಾಡಿ ನೂರಾರು ಮಂದಿಗೆ ಔತಣಕೂಟ ಏರ್ಪಡಿಸಿ ವಾದ್ಯಗೋಷ್ಠಿ ಮತ್ತು ಅದ್ಧೂರಿ ಮೆರವಣಿಗೆ ಮೂಲಕ ತಂದಿದ್ದು, ಜತಗೆ ನಿತ್ಯ ಹಾಲು, ರವೆ, ತುಪ್ಪ ಮತ್ತಿತರ ಪೌಷ್ಟಿಕಾಂಶಭರಿತ 'ಮೃಷ್ಟಾನ್ನ ಭೋಜನ ಉಣಬಡಿಸುತ್ತಾ ತಮ್ಮ ರಾಸುಗಳ ಮೇಲಿರುವ ಕಾಳಜಿಯನ್ನು ತೋರುತ್ತಿರುವ ರೈತರ ಕಾಳಜಿ ನಿಜಕ್ಕೂ ರೈತರು ಜಾನುವಾರುಗಳ ಮೇಲಿಟ್ಟಿರುವ ಪ್ರೀತಿಗೆ ಸಾಕ್ಷಿಯಾಗಿದೆ.

ಬೀಡುಬಿಟ್ಟ ಪಶು ಇಲಾಖೆ: ಜಾತ್ರೆಯಲ್ಲಿ ರಾಸುಗಳಿಗೆ ಯಾವುದೇ ರೋಗ ರುಜಿನಗಳು ಬಾರದಂತೆ ಶಾಸಕ ಡಿ.ರವಿಶಂಕರ್ ಸೂಚನೆ ಮೇರೆಗೆ ಕೆ.ಆರ್.ನಗರ ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ನೇತೃತ್ವದಲ್ಲಿ ಪಶು ವೈದ್ಯಾಧಿಕಾರಿಗಳ ತಂಡ ಇಲ್ಲಿನ ಮಂಟಪದ ಬಾರೆಯಲ್ಲಿ ತಾತ್ಕಲಿಕ ಪಶು ಚಿಕಿತ್ಸಾಲಯ ತೆರೆದು ಶ್ರಮಿಸುತ್ತಿರುವುದು ರೈತರ ಮೆಚ್ಚುಗೆಗೆ ಪಾತ್ರವಾಗಿದೆ.

ಜಾತ್ರೆಯಲ್ಲಿ ತೆರೆದಿರುವ ಸಿಹಿ ತಿಂಡಿ, ಜ್ಯೂಸ್, ಪಾನಿಪುರಿ, ಗೋಬಿ, ನೋಗ, ಓನಕೆ, ಸೇರಿದಂತೆ ವಿವಿಧ ಬಗೆಯ ಆಟಿಕೆಗಳ ಅಂಗಡಿ ಮುಗ್ಗಟ್ಟು ಮತ್ತು ಸಸ್ಯಹಾರಿ ಮತ್ತು ಮಾಂಸಹಾರಿ ಹೋಟೆಲ್‌ಗಳಿಗೆ ಭರ್ಜರಿ ವ್ಯಾಪಾರವಾಗುತ್ತಿದೆ.

ಒಟ್ಟಾರೆ ಆಧುನಿಕ ಜೀವನ ಶೈಲಿಯಿಂದ ಮರೆಯಾಗುತ್ತಿರುವ ಗ್ರಾಮೀಣ ಪರಂಪರೆ ನಡುವೆಯೂ ಇಲ್ಲಿನ ಜಾನುವಾರು ಜಾತ್ರೆ ಸೊಬಗನ್ನು ಕಣ್ತುಂಬಿಕೊಳ್ಳಲು ಮತ್ತು ಶ್ರೀರಾಮದೇವರ ದೇವಾಲಯ, ಕಾವೇರಿ ನದಿಯ ಜಲಪಾತ, ತಿಂಡಿ ತಿನಿಸುಗಳನ್ನು ಸವಿಯಲು ಇಲ್ಲಿಗೆ ನೀವೂ ಒಮ್ಮೆ ಬರಬೇಕು. ಅದಕ್ಕಾಗಿ ಕೈಬೀಸಿ ಕರೆಯುತ್ತಿದೆ ಚುಂಚನಕಟ್ಟೆ ಜಾನುವಾರು ಜಾತ್ರೆ.

ಪ್ರಚಾರದ ಕೊರತೆ

> ಸಣ್ಣ ಕಾರ್ಯಕ್ರಮಗಳಿಗೂ ಸಾವಿರಾರು ರೂ. ಖರ್ಚು ಮಾಡಿ ಪ್ರಚಾರ ನೀಡುವ ಸರ್ಕಾರ, ಜಿಲ್ಲಾಡಳಿತ ಚುಂಚನಕಟ್ಟೆ ಜಾನುವಾರು ಜಾತ್ರೆ ವಿಚಾರದಲ್ಲಿ ನಿರ್ಲಕ್ಷ ತಾಳಿದ್ದು ಪ್ರತಿ ಬಾರಿ ಸಭೆಗಳಲ್ಲಿ ಮನವಿ ಮಾಡುತ್ತಾ ಬಂದಿದ್ದರೂ ಜಾತ್ರೆಗೆ ಯಾವುದೇ ಪ್ರಚಾರ ನೀಡದೆ ವರ್ಷದಿಂದ ವರ್ಷಕ್ಕೆ ಕಳೆಗುಂದುವಂತೆ ಮಾಡಲಾಗುತ್ತಿದೆ.
> -ಯೋಗಣ್ಣ, ರೈತ ಮುಖಂಡ.

ಬೈಕ್, ಬೊಲೆರೋ ಗೂಡ್ಸ್ ವಾಹನದ ನಡುವೆ ಡಿಕ್ಕಿ: ಸವಾರ ಸಾವು

ಹುಣಸೂರು, ಜ.5– ಬೈಕ್ ಹಾಗೂ ಬೊಲೆರೋ ಗೂಡ್ಸ್ ವಾಹನದ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಆಜಾದ್ ನಗರದ ಬಳಿ ಭಾನುವಾರ ಸಂಜೆ ನಡೆದಿದೆ.



ತಾಲೂಕಿನ ಗುರುಪುರ ಗ್ರಾಮದ ಜಮೃತ್ ಪಾಷ ಅವರ ಪುತ್ರ, ಬಟ್ಟೆ ಅಂಗಡಿ ವ್ಯಾಪಾರಿ ಸುಹೇಲ್(22) ಸಾವನ್ನಪ್ಪಿದವರು. ಈತ ಹುಣಸೂರು ಗ್ರಾಮಾಂತರ ಠಾಣೆ ಪಕ್ಕದಲ್ಲಿರುವ ತಮ್ಮ ಬಟ್ಟೆ ಅಂಗಡಿಯಲ್ಲಿ ಎಂದಿನಂತೆ ವ್ಯಾಪಾರ ನಡೆಸಿ ಬಾಗಿಲು ಹಾಕಿ ತನ್ನ ಪಲ್ಸರ್ ಎನ್‌ಎಸ್ 200 ಬೈಕ್ (ಕೆಎ.45, ವೈ.2189) ನಲ್ಲಿ ಗುರುಪುರಕ್ಕೆ ತೆರಳುತ್ತಿದ್ದ ವೇಳೆ ನಗರದ ಹೊರವಲಯದ ಆಜಾದ್ ನಗರದ ಬಳಿ ಗುರುಪುರದ ಕಡೆಯಿಂದ ವೇಗವಾಗಿ ಬಂದ ಬೊಲೆರೋ ಗೂಡ್ಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಸುಹೇಲ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಅಪಘಾತದ ರಭಸಕ್ಕೆ ಬೈಕ್ 2 ತುಂಡಾಗಿ ಬಿದ್ದಿದ್ದು, ಘಟನೆ ಬಳಿಕ ಬೊಲೆರೊ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಪೊಲೀಸರು ವಾಹನಗಳನ್ನು ವಶಕ್ಕೆ ಪಡೆದು ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಹುಣಸೂರು: ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

ಹುಣಸೂರು, ಡಿ.5– ತಾಲೂಕಿನ ಸೋಮನಹಳ್ಳಿ ಮತ್ತು ಕಾಡನಕೊಪ್ಪಲು ನಡುವಿನ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಶನಿವಾರ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದವರ ಪೈಕಿ ಓರ್ವ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ಸಾವನ್ನಪ್ಪಿದ್ದಾನೆ. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಜೆ.ಬಿ.ಹಳ್ಳಿ ಗ್ರಾಮದ ಜಲೀಲ್ ಸಾಬ್ ಅವರ ಪುತ್ರ ಖಾದರ್ ಪಾಷ(36) ಸಾವನ್ನಪ್ಪಿವರು. ಈತ ಶನಿವಾರ ನಡೆದ ಅಪಘಾತದಲ್ಲಿ ತೀವ್ರ ಗಾಯಗೊಂಡು ಮೈಸೂರಿನ ಡಿಆರ್‌ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎನ್ನಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಉಳಿದವರು ಚಿಕಿತ್ಸೆ ಪಡೆದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಹೆಚ್.ಡಿ.ಕೋಟೆ: ಬಾಮೈದನಿಂದ ಹಲ್ಲೆಗೊಳಗಾಗಿದ್ದ ಬಾವ ಸಾವು

ಹೆಚ್.ಡಿ.ಕೋಟೆ, ಜ.5– ಬಾವ, ಬಾಮೈದನ ನಡುವೆ ನಡೆದ ಜಗಳದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಗೆಂಡತ್ತೂರು ಗ್ರಾಮದಲ್ಲಿ ನಡೆದಿದೆ.



ಗೆಂಡತ್ತೂರು ಗ್ರಾಮದ ನಿವಾಸಿ ಗೋವಿಂದ(53) ಮೃತಪಟ್ಟವರು. ಗ್ರಾಮದ ನಿವಾಸಿಗಳಾದ ಗೋವಿಂದ, ಮಣಿಯ ಹಾಗೂ ಇವರ ಬಾಮೈದ ಕೃಷ್ಣನ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳ ನಡೆದು ಬಾವಂದಿರಾದ ಗೋವಿಂದ ಹಾಗೂ ಮಣಿಯನಿಗೆ ದೊಣ್ಣೆಯಿಂದ ಹೊಡೆದು ಕೃಷ್ಣ ಗಾಯಗೊಳಿಸಿದ್ದ ಎನ್ನಲಾಗಿದೆ. ಇವರಿಬ್ಬರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಗೋವಿಂದ ಸಾವನ್ನಪ್ಪಿದ್ದಾನೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿ ಕೃಷ್ಣನನ್ನು ವಶಕ್ಕೆ ಪಡೆದು ಎಸ್‌ಐ ಚಂದ್ರಧರ್ ತನಿಖೆ ನಡೆಸುತ್ತಿದ್ದಾರೆ.

ಬೀದಿಗೆ ಬಿದ್ದ ಹಂದಿಜೋಗಿ ಕುಟುಂಬ



ನಂಜನಗೂಡು, ಜ.5– ತಾಲೂಕಿನ ತಿ.ನರಸೀಪುರ ಮುಖ್ಯ ರಸ್ತೆಯಲ್ಲಿರುವ ಹೊರಳವಾಡಿ ಹೊಸೂರಿನ ಖಾಸಗಿ ಜಮೀನಿನಲ್ಲಿ 3 ತಲೆಮಾರುಗಳಿಂದ ವಾಸವಿದ್ದ ಹಂದಿ ಜೋಗಿ ಸಮುದಾಯದ ಕುಟುಂಬ ಜಮೀನಿನ ಮಾಲೀಕ ನ್ಯಾಯಾಲಯದ ಆದೇಶ ತಂದು ಹೊರಹಾಕಿದ ಪರಿಣಾಮ ಬೀದಿಗೆ ಬಿದ್ದಿದ್ದು, ಬದುಕು ಅತಂತ್ರವಾಗಿದೆ.

ಗುಡಿಸಲಿನ ಎಲ್ಲಾ ಸಾಮಗ್ರಿಗಳೊಂದಿಗೆ 9 ಸದಸ್ಯರು ಜಮೀನು ಮುಂಭಾಗದ ರಸ್ತೆ ಬದಿಯಲ್ಲೇ ಅಡಿಗೆ ಮಾಡಿ ವಾಸಿಸುವ ಮೂಲಕ ದಿನದೂಡುತ್ತಿದ್ದು, ಪರಿಶಿಷ್ಟ ಜಾತಿಯ ಹಂದಿಜೋಗಿ ಸಮುದಾಯದ ಪುಟ್ಟಮ್ಮನವರ ಕುಟುಂಬ ಈಗ ನೆರವಿನ ನಿರೀಕ್ಷೆಯಲ್ಲಿದೆ. ಕಳೆದ 50 ವರ್ಷಗಳಿಂದಲೂ ಹೊರಳವಾಡಿ ಹೊಸೂರಿನ ಪ್ರವೇಶ ದ್ವಾರದಲ್ಲಿರುವ ಜಮೀನೊಂದರಲ್ಲಿ ಪುಟ್ಟಮ್ಮ ಅವರ ಮಕ್ಕಳಾದ ಉಮೇಶ ಮತ್ತು ಎಲ್ಲಮ್ಮ ಸೇರಿ 9 ಮಂದಿ 2 ಗುಡಿಸಲಿನಲ್ಲಿ ವಾಸವಿದ್ದರು. ಆ ಕುಟುಂಬಕ್ಕೆ ಇದೇ ವಾಸ ಸ್ಥಳವೆಂದು ಅದೇ ವಿಳಾಸವುಳ್ಳ ಆಧಾರ್ ಹಾಗೂ ಪಡಿತರ ಕಾರ್ಡ್ ಕೂಡ ಅವರ ಬಳಿ ಇದೆ. ಪುಟ್ಟಮ್ಮ ಹೊರತುಪಡಿಸಿ ಉಳಿದೆಲ್ಲರೂ ಇಲ್ಲೇ ಹುಟ್ಟಿ ಬೆಳೆದಿದ್ದಾರೆ. ಹಂದಿ ಸಾಕಣೆಯಿಂದಲೇ ಜೀವನ ನಡೆಸುತ್ತಿದ್ದ ಅವರು, ಇತ್ತೀಚೆಗೆ ಹೈನುಗಾರಿಕೆ ಆರಂಭಿಸಿ, ನಾಲ್ಕು ಹಸುಗಳನ್ನು ಸಾಕುತ್ತಿದ್ದರು.

2011ರಲ್ಲಿ ಜಾಗದ ಮಾಲೀಕರು ಹಂದಿ ಜೋಗಿ ಕುಟುಂಬದವರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸಿದ್ದು, ಈ ಸಂಬಂಧ 2013ರಲ್ಲಿ ಜಮೀನಿನ ಮಾಲೀಕ ನ್ಯಾಯಾಲಯದ ಮೆಟ್ಟಿಲೇರಿ ಪ್ರಕರಣ ದಾಖಲಿಸಿದ ಪರಿಣಾಮ 2024ರಲ್ಲಿ ನ್ಯಾಯಾಲಯ ಜಮೀನಿನ ಮಾಲೀಕರ ಪರವಾಗಿ ಆದೇಶ ನೀಡಿದೆ. ಡಿ.31 ರಂದು ಜಮೀನಿನ ಮಾಲೀಕ ಪೊಲೀಸ್ ನೆರವಿನೊಂದಿಗೆ ಅವರನ್ನು ತೆರವುಗೊಳಿಸಿ, ಜಮೀನಿಗೆ ಬೇಲಿ ಹಾಕಿದ್ದರಿಂದ ಸಮಸ್ಯೆ ಎದುರಾಗಿದ್ದು ಕುಟುಂಬಸ್ಥರು ಬೀದಿಯಲ್ಲಿ ವಾಸಿಸುವಂತಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಲ್ಲಮ್ಮ ಮಾಹಿತಿ ನೀಡದೆ ನಮ್ಮ ಗುಡಿಸಲುಗಳನ್ನು ತೆರವುಗೊಳಿಸಿದ್ದರಿಂದ ದಿಕ್ಕು ತೋಚದಾಗಿದೆ. ಹಂದಿಗಳನ್ನು ಮಾರಿ ದನಕರುಗಳಿಗೆ ಮೇವು ಖರೀದಿಸಿದ್ದೇವೆ. ಇದುವರೆಗೂ ಯಾರು ಸಹ ನಮ್ಮ ಸಂಕಷ್ಟ ಕೇಳುವವರಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ನಮಗೆ ದಾರಿ ತೋರಿಸಬೇಕಿದೆ ಎಂದರು.

> ತಾಲೂಕಿನ ಮಹದೇವ ನಗರದಲ್ಲಿರುವ ಮುಳ್ಳಾಗುಡ್ಡ ಪ್ರದೇಶದಲ್ಲಿ ಕುಟುಂಬಗಳಿಗೆ ತಾತ್ಕಾಲಿಕವಾಗಿ ಮೂಲಸೌಕರ್ಯ ಒದಗಿಸಲು ಕ್ರಮ ವಹಿಸಲಾಗುವುದು.
> - ಭೀಮರಾವ್ ವಡ್ಡರ್, ಸಮಾಜ ಕಲ್ಯಾಣಾಧಿಕಾರಿ.

ಮಹನೀಯರ ತತ್ವಾದರ್ಶ ಮೈಗೂಡಿಸಿಕೊಳ್ಳಿ

ವಾಲ್ಮೀಕಿ ಜಯಂತಿಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್



ವಾಲ್ಮೀಕಿ ಜಯಂತಿಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿದರು.

ನಂಜನಗೂಡು, ಜ.5– ಮಹರ್ಷಿ ವಾಲ್ಮೀಕಿ ಅವರಲ್ಲಿ ಉಂಟಾದ ಪರಿವರ್ತನೆಯಿಂದ ರಾಮಾಯಣ ದಂತಹ ಮಹಾಕಾವ್ಯ ರಚಿಸಲು ಸಾಧ್ಯವಾಯಿತು. ಎಲ್ಲಾ ಜಾತಿಯ ಮಹಾಪುರುಷರನ್ನು ಕೇವಲ ಒಂದೇ ಜಾತಿಗೆ ಸೀಮಿತ ಮಾಡಬಾರದು ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ತಾಲೂಕಿನ ಹರತಲೆ ಗ್ರಾಮದಲ್ಲಿ ಸಿ.ಚಿಕ್ಕರಂಗನಾಯಕ ಅಭಿಮಾನಿ ಬಳಗ ಮತ್ತು ವಾಲ್ಮೀಕಿ ಯುವಕರ ಸಂಘದಿಂದ ಏರ್ಪಡಿಸಿದ್ದ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಅವರು ವಿಶ್ವವನ್ನೇ ಬೆಳಗಿದ ಮಹಾಪುರುಷರು. ವಾಲ್ಮೀಕಿ, ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಮಹನೀಯರನ್ನು ಕೇವಲ ಜಯಂತಿ ಕಾರ್ಯಕ್ರಮಗಳಿಗೆ ಸೀಮಿತಗೊಳಿಸದೆ, ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಮನುಜ ಕುಲದ ಉದ್ಧಾರ ಸಾಧ್ಯ ಎಂದರು.

ನಗರದ ಗೌರಿಘಟ್ಟ ಬೀದಿಯಲ್ಲಿ ಡಿ.ಟಿ.ಜಯಕುಮಾರ್ ಶಂಕುಸ್ಥಾಪನೆ ಮಾಡಿದ್ದ ನಾಯಕ ಸಮುದಾಯ ಭವನ ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿತ್ತು. ನಾನು ಶಾಸಕರಾಗಿದ್ದ ವೇಳೆ ಸಮಾಜದ ಜನರ ಆಶಯದಂತೆ 85 ಲಕ್ಷ ಅನುದಾನ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇನೆ. ಅಲ್ಲದೆ ಪ್ರಧಾನಿ ಮೋದಿ ಅಯೋಧ್ಯೆಯಲ್ಲಿ ವಾಲ್ಮೀಕಿ ಮಹರ್ಷಿಗಳ ಆರಾಧ್ಯ ದೈವ ಶ್ರೀರಾಮನ ದೇವಾಲಯ ಪೂರ್ಣಗೊಳಿಸಿ ದೇಶದ ಜನರ ಧರ್ಮಶ್ರದ್ಧೆ ಕಾಪಾಡಿದ್ದಾರೆ. ನಾಯಕ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದು ಸಮಾಜದ ಬಂಧುಗಳು ನಿಮ್ಮ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಸಮಾಜ ಸೇವಕರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಬಂಗಾರಸ್ವಾಮಿ, ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದ ರಾಜು, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕ ರಂಗನಾಯಕ, ಮುಖಂಡರಾದ ಮಹೇಶ್, ಪರಶಿವ ಮೂರ್ತಿ, ರಾಜು, ಪುಟ್ಟಸ್ವಾಮಿ, ಮಹೇಶ್ ಬಾಬು, ಶಿವರುದ್ರ, ಪ್ರಕಾಶ್, ಮಹದೇವ ಸ್ವಾಮಿ, ಗೋವಿಂದರಾಜು, ಮಹಾಲಕ್ಷ್ಮಿ, ತಾಪಂ ಮಾಜಿ ಸದಸ್ಯರಾದ ಬಸವರಾಜು, ಬಸವರಾಜು, ಶಿವಣ್ಣ ಸಾಹಿತ್ಯ ಪರಿಷತ್ ಅಧ್ಯಕ್ಷೆ ಲತಾ ಮೋಹನ್ ಸೇರಿದಂತೆ ಗ್ರಾಮಸ್ಥರಿದ್ದರು.

ಜನರ ಆರೋಗ್ಯ ಜಾಗೃತಿಗೆ ಉಚಿತ ಶಿಬಿರಗಳು ಸಹಕಾರಿ

ವರುಣ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ



ಉಚಿತ ಬೃಹತ್ ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರು ತಪಾಸಣೆಗೊಳಗಾದರು.

ತಿ.ನರಸೀಪುರ, ಜ.5– ಗ್ರಾಮೀಣ ಜನರ ಆರೋಗ್ಯ ಜಾಗೃತಿಗೆ ಉಚಿತ ಆರೋಗ್ಯ ಶಿಬಿರಗಳು ಸಹಕಾರಿಯಾಗಿದ್ದು, ಜನತೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದೆ ತಜ್ಞ ವೈದ್ಯರು ಲಭ್ಯವಿದ್ದಾಗ ಶಿಬಿರದಲ್ಲಿ ಪಾಲ್ಗೊಂಡು ಸದುಪಯೋಗಪಡಿಸಿಕೊಳ್ಳಬೇಕು ಎಂದು ವರುಣ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ ತಿಳಿಸಿದರು.

ಮೈಸೂರಿನ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಹಾಗೂ ಆರೋಗ್ಯ ಭಾರತಿ ಮೈಸೂರು ವಿಭಾಗದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಆಲಗೂಡು ಗ್ರಾಮದ ಮಾರಮ್ಮ ದೇವಸ್ಥಾನದ ಎದುರು ಆಯೋಜಿಸಿದ್ದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಸಾಮಾನ್ಯವಾಗಿವೆ. ಇವು ಶ್ರೀಮಂತ ಖಾಯಿಲೆಗಳಾಗಿದ್ದು, ಬಡವರು ಆರ್ಥಿಕವಾಗಿಭರಿಸಲು ಅಸಾಧ್ಯ. ಗ್ರಾಮೀಣ ಹಾಗೂ ನಗರ ಪ್ರದೇಶದ ಬಡಜನರಿಗೆ ಇಂತಹ ಉಚಿತ ಶಿಬಿರಗಳ ಮೂಲಕವೇ ಚಿಕಿತ್ಸೆಗೊಳಪಡಿಸಿದಾಗ ಮಾತ್ರ ಅವರನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯ. ಹಾಗಾಗಿ ಗ್ರಾಮೀಣ ಮಟ್ಟದಲ್ಲಿ ಹೆಚ್ಚಾಗಿ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಕೃಷಿಕ ಸಮಾಜದ ಉಪಾಧ್ಯಕ್ಷ ಆಲಗೂಡು ನಾಗರಾಜು ಮಾತನಾಡಿ, ಉತ್ತಮ ಆಹಾರ ಪದ್ಧತಿ ಅಳವಡಿಸಿಕೊಳ್ಳುವುದರ ಜೊತೆಗೆ ನಿತ್ಯ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಪ್ರತಿದಿನ ಹೆಚ್ಚು ನಡೆದಾಡುವ ಅಭ್ಯಾಸ ರೂಢಿಸಿಕೊಳ್ಳುವುದರಿಂದ ಆರೋಗ್ಯ ಉತ್ತಮಪಡಿಸಿಕೊಳ್ಳಬಹುದು ಎಂದರು. ಶಿಬಿರದಲ್ಲಿ ನಾರಾಯಣ ಆಸ್ಪತ್ರೆ ವತಿಯಿಂದ ರಕ್ತದೊತ್ತಡ, ಇಸಿಜಿ, ಬಿಆರ್‌ಬಿಎಸ್, ಪಿಎಂಐ, ಪ್ಯಾಪ್ ಸ್ಮೀಯರ್ ಹಾಗೂ ವೈದ್ಯರ ಸಮಾಲೋಚನೆ, ಡಾ.ಚಂದ್ರಶೇಖರ್ ತಂಡದವರಿಂದ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಮಾಡಲಾಯಿತು. ಲಯನ್ ಬ್ಲಡ್ ಸೆಂಟರ್ ಜೀವಧಾರ ವತಿಯಿಂದ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಣ್ಣಿನ ತಪಾಸಣೆ ನಡೆಸಿ ಕಣ್ಣಿನ ದೋಷ ಇದ್ದವರಿಗೆ ರಿಯಾಯಿತಿ ದರದಲ್ಲಿ ಕನ್ನಡಕ ವಿತರಿಸಲಾಯಿತು. ಆಲಗೂಡು ಗ್ರಾಮದ ನೂರಾರು ಮಂದಿ ಆರೋಗ್ಯ ತಪಾಸಣೆಗೊಳಗಾದರು.

ಆರೋಗ್ಯ ಭಾರತಿ ಟ್ರಸ್ಟ್ ತಾಲೂಕು ಅಧ್ಯಕ್ಷ ಡಾ.ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಸಿದ್ದೇಗೌಡ, ಆರ್‌ಎಸ್‌ಎಸ್ ಮುಖಂಡ ಚೇತನ್ ರಂಗನಾಥ್, ಡಾ.ಯಶಸ್ವಿನಿ, ಡಾ.ಪಿ. ಹಸೀನಾ ಬೇಗಂ, ಡಾ.ಸುಷ್ಮಾ, ಡಾ.ವರ್ಧನಾ ಬಿ.ಪಾಟೀಲ್, ಡಾ.ಕೆ.ಶಿಲ್ಪ, ಮಾರ್ಕೆಟಿಂಗ್ ವಿಭಾಗದ ಪ್ರಶಾಂತ್, ವಿನಯ್, ಎಲೆನಾ, ರೂಪ, ರುಮಿಯ, ಬಾಲಸುಬ್ರಹ್ಮಣ್ಯ, ಇಸಿಜಿ ವಿಭಾಗದ ಪ್ರೇಮಕುಮಾರಿ, ನೇತ್ರ ವಿಭಾಗದ ಕಿಶೋರ್, ಜುನೈದ್, ಆಡಳಿತಾಧಿಕಾರಿ ಹೆಚ್.ಬಿ.ಸತೀಶ್, ಆಲಗೂಡು ಚಂದ್ರು ಸೇರಿದಂತೆ ಮತ್ತಿತರಿದ್ದರು.

ನಾಪತ್ತೆ



ತಿ.ನರಸೀಪುರ, ಜ.5– ಮನೆಯಿಂದ ಹೊರ ಹೋದ ಬಾಲಕ ನಾಪತ್ತೆಯಾಗಿರುವ ಸಂಬಂಧ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಟ್ಟಣದ ದಾಸನಾಯಕರ ಬೀದಿ ನಿವಾಸಿ ರವಿ ಎಂಬುವರ ಪುತ್ರ ಆರ್.ಪುನೀತ್(16) ನಾಪತ್ತೆಯಾದವರು. ಬನ್ನೂರು ವಿವೇಕಾನಂದ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಬಾಲಕ ಡಿ.25 ರಂದು ರಾತ್ರಿ ಮೊಬೈಲ್ ಚಾರ್ಜಿಗೆ ಹಾಕಿ ಮನೆಯಿಂದ ಹೊರ ಹೋದವನು ಮನೆಗೆ ವಾಪಸ್ ಆಗಿಲ್ಲ. ಈತನ ಬಗ್ಗೆ ಸುಳಿವು ಸಿಕ್ಕಲ್ಲಿ ತಿ.ನರಸೀಪುರ ಠಾಣೆ 08227–261227 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಶೀಲ ನಿಧನ

ಹಂಪಾಪುರ, ಜ.5– ಹೆಚ್.ಡಿ.ಕೋಟೆ ತಾಲೂಕಿನ ಪುರ ಗ್ರಾಮದ ನಿವಾಸಿ ಮಹದೇವ ಅವರ ಪತ್ನಿ ಶೀಲ(38) ಭಾನುವಾರ ಮುಂಜಾನೆ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಸ್ತೆಗೆ ಭೂಮಿ ನೀಡಿದ ರೈತರಿಗೆ ಸಿಗದ ಪರಿಹಾರ

ವರುಣ ಕ್ಷೇತ್ರದ ಕಾಂಗ್ರೆಸ್ ಮಾಧ್ಯಮ ಸಂಚಾಲಕ ಚೇತನ್ ಆರೋಪ



ಸುದ್ದಿಗೋಷ್ಠಿಯಲ್ಲಿ ಚೇತನ್ ಮಾತನಾಡಿದರು.

ತಿ.ನರಸೀಪುರ, ಡಿ.5– ರಾಷ್ಟ್ರೀಯ ಹೆದ್ದಾರಿ 212ರ ಅಗಲೀಕರಣ ವೇಳೆ 2009ರಲ್ಲಿ ರೈತರಿಂದ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿಗೆ ಪರಿಹಾರ ಹಣ ನೀಡದೇ ಸರ್ಕಾರ ರೈತರನ್ನು ಸಂಕಷ್ಟಕ್ಕೆ ದೂಡಿದೆ ಎಂದು ವರುಣ ಕ್ಷೇತ್ರದ ಕಾಂಗ್ರೆಸ್ ಮಾಧ್ಯಮ ಸಂಚಾಲಕ ಚೇತನ್ ಆರೋಪಿಸಿದರು.

ತಿರುಮಕೂಡಲಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2009ರಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಮಾಡುವ ಸಂದರ್ಭ ತಿರುಮಕೂಡಲು ಗ್ರಾಮದಿಂದ ಇಂಡವಾಳು ಗ್ರಾಮದವರೆಗಿನ ನೂರಾರು ರೈತರ ಜಮೀನನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡು ಮೊದಲ ಕಂತಿನ ಪರಿಹಾರದ ಹಣವನ್ನು ನಗದು ರೂಪದಲ್ಲಿ ನೀಡಿತ್ತು. ಆದರೆ ರೈತರು ಪರಿಹಾರದ ಹಣ ಸಾಲದೆಂದು 2ನೇ ಕಂತಿನ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು.

ನಂತರದ ಬೆಳವಣಿಗೆಯಲ್ಲಿ ಅಂದು ಜಿಲ್ಲಾಧಿಕಾರಿಗಳಾಗಿದ್ದ ಅಭಿರಾಂ.ಜಿ. ಶಂಕರ್ ಅವರು 2020ರಲ್ಲಿ 1:4 ಪ್ರಮಾಣದಲ್ಲಿ ರೈತರಿಗೆ ಪರಿಹಾರ ಕೊಡಬೇಕೆಂದು ಆದೇಶ ಮಾಡಿದ್ದರು. ಅಲ್ಲದೇ ಹಣ ಜಮಾ ಆಗುವವರೆಗೆ ಶೇ.9 ರಷ್ಟು ಬಡ್ಡಿ ಸೇರಿಸಿ ಕೊಡಬೇಕೆಂದು ಆದೇಶ ಮಾಡಿ ನಾಲ್ಕೈದು ವರ್ಷ ಕಳೆದರೂ ಇಲ್ಲಿವರೆಗೂ ಯಾವುದೇ ಪರಿಹಾರದ ಹಣ ಬಂದಿಲ್ಲ ಎಂದು ದೂರಿದರು.

ರೈತರು ಪರಿಹಾರ ಹಣಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಚೀಫ್ ಇಂಜಿನಿಯರ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅನಾವಶ್ಯಕವಾಗಿ ರೈತರನ್ನು ಅಲೆಸುವ ಮೂಲಕ ಅಗೌರವದಿಂದ ನಡೆಸಿಕೊಂಡು ಯಾವುದೇ ಕಿಮ್ಮತ್ತು ನೀಡಲಿಲ್ಲ. ಸಾರ್ವಜನಿಕ ಕೆಲಸಕ್ಕೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ದೃಷ್ಟಿಯಿಂದ ರೈತರು ಭೂಮಿ ಕಳೆದುಕೊಂಡಿದ್ದರೂ ಅಧಿಕಾರಿ ಮಾನವೀಯತೆಯಿಂದ ನಡೆದು ಕೊಳ್ಳಲಿಲ್ಲ ಎಂದು ಅಧಿಕಾರಿಗಳ ನಡೆಗೆ ಕಿಡಿಕಾರಿದರು.

ಧ್ರುವನಾರಾಯಣ್ ಸಂಸದರಾಗಿದ್ದ ವೇಳೆ ಮೊದಲ ಕಂತಿನ ಹಣ ಬಿಡುಗಡೆ ಮಾಡಿಸಿದ್ದರು. ನಂತರ ಬಂದ ಶ್ರೀನಿವಾಸ ಪ್ರಸಾದ್ ಅವರು ಹಣ ಬಿಡುಗಡೆಗೆ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದೀಗ ಸಂಸದ ಸುನೀಲ್ ಬೋಸ್ ಅವರು ಈ ಭಾಗದ ರೈತರ ಸಮಸ್ಯೆಗೆ ಸ್ಪಂದಿಸಿ ಕೇಂದ್ರ ಸರ್ಕಾರದಿಂದ ಬರಬೇಕಾದ ಪರಿಹಾರದ ಹಣವನ್ನು ಕೊಡಿಸಬೇಕು. ಅಲ್ಲದೇ ಸಿಎಂ ಸಿದ್ದರಾಮಯ್ಯ, ಸಚಿವ ಹೆಚ್.ಸಿ.ಮಹದೇವಪ್ಪನವರು ಸಹ ಮಧ್ಯ ಪ್ರವೇಶಿಸಿ ರೈತರ ಸಮಸ್ಯೆಗೆ ಪರಿಹಾರ ಕಲ್ಪಿಸುವ ಮೂಲಕ ಭೂಮಿ ಕಳೆದುಕೊಂಡ ರೈತರ ಬಗ್ಗೆ ಗಮನ ಹರಿಸದೇ ಅಸಡ್ಡೆ ಪ್ರದರ್ಶನ ಮಾಡುತ್ತಿರುವ ಮೈಸೂರಿನ ಕಾರ್ಯಪಾಲಕ ಇಂಜಿನಿಯರ್ ಮೇಲೆ ಶಿಸ್ತು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ಫಣೀಶ್ ಕುಮಾರ್, ಶ್ರೀನಿವಾಸ ಕನ್ವೆನ್ಷನ್ ಹಾಲ್ ನ ಕೆ.ವಿ.ಪ್ರಶಾಂತ್, ಮಾರಪ್ಪ, ಗಾಳಿಯಪ್ಪ, ಕೊಟ್ರೇಶ್, ಬ್ಯಾಟರಿ ಸತೀಶ್, ಸಿವಿಲ್ ಕಂಟ್ರಾಕ್ಟರ್ ಸೋಮಣ್ಣ, ನಾಗರಾಜು, ಕುಮಾರ್ ಹಾಜರಿದ್ದರು.

> ರಾಷ್ಟ್ರೀಯ ಹೆದ್ದಾರಿಗಾಗಿ ಭೂಮಿ ಕಳೆದುಕೊಂಡಿದ್ದೇವೆ. ಪರಿಹಾರ ಸರಿಯಾಗಿ ವಿತರಣೆಯಾಗಿಲ್ಲ. ಈ ನಡುವೆ ರೈತರು ಅಕ್ಕಪಕ್ಕದ ಜಮೀನುಗಳಿಗೆ ಹೋಗಿ ತಮ್ಮ ಕೃಷಿ ಚಟುವಟಿಕೆ ಮಾಡಲು ಹೋದರೂ ಟೋಲ್ ಹಣ ಪಡೆಯುತ್ತಿದ್ದಾರೆ. ರಸ್ತೆ ಅವ್ಯವಸ್ಥೆಯಿಂದ ಕೂಡಿದೆ. ಮತ್ತೊಂದು ಸುತ್ತಿನ ಡಾಂಬರೀಕರಣವಾಗಬೇಕಿದೆ. ಕಿತ್ತು ಹೋಗಿರುವ ರಸ್ತೆಯಲ್ಲಿ ಓಡಾಡಬೇಕಾದರೂ ಟೋಲ್ ಪಾವತಿಸಬೇಕಾದ ಪರಿಸ್ಥಿತಿ ವಾಹನ ಸವಾರರು ಹಾಗೂ ರೈತರಿಗೆ ಬಂದಿದೆ. ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆ ಭೂಮಿ ನೀಡಿರುವ ರೈತರಿಂದ ಟೋಲ್ ಸುಂಕ ವಸೂಲಿ ನಿಲ್ಲಿಸಬೇಕು.
> – ಟಿ.ಎಂ.ನಾಗಣ್ಣ, ಭೂಮಿ ಕಳೆದುಕೊಂಡ ರೈತ.

ಮೈಸೂರು ಮಿತ್ರ ಸೋಮವಾರ 6 ಜನವರಿ 2025

ಮಕ್ಕಳಿಗೆ ಕೊಡುವ ಶಿಕ್ಷಣ ಮುಂದಿನ ತಲೆಮಾರಿಗೂ ಫಲ ನೀಡುತ್ತದೆ

ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅಭಿಮತ



ವಿದ್ಯಾರ್ಥಿ ವೇತನ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು.

ಕೊಳ್ಳೇಗಾಲ, ಜ.5–ಮಕ್ಕಳಿಗೆ ನೀಡುವ ಶಿಕ್ಷಣ ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸದೃಢಗೊಳಿಸುವುದಲ್ಲದೇ, ಅದು ಮುಂದಿನ ತಲೆಮಾರಿಗೂ ಫಲ ನೀಡುತ್ತದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಕೊಳ್ಳೇಗಾಲದ ಶ್ರೀ ದೇವಾಂಗ ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆಯ ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ವಿದ್ಯಾರ್ಥಿ ವೇತನ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಮಕ್ಕಳಿಗೆ ನಿವೇಶನವಾಗಲೀ, ಯಾವುದೇ ಆಸ್ತಿಯಾಗಲೀ ಮಾಡಬೇಡಿ. ಅದಕ್ಕೆ ಬದಲಾಗಿ ಉತ್ತಮ ಶಿಕ್ಷಣವನ್ನು ನೀಡಿ. ಆಗ ನಿಮ್ಮ ಮಕ್ಕಳೇ ಆಸ್ತಿ ಮಾತ್ರವಲ್ಲದೇ ಸಮಾಜದಲ್ಲಿ ಗೌರವವನ್ನೂ ಸಂಪಾದಿಸಿಕೊಳ್ಳುತ್ತಾರೆ ಎಂದು ಪೋಷಕರಿಗೆ ಸಲಹೆ ನೀಡಿದರು.

ಹಣಕ್ಕೆ ಬೆಲೆ ಇದೆ ಎಂದು ಹೇಳುವುದು ತಪ್ಪು. ಹಣವನ್ನು ನೋಡಿ ಜನರು ಅಂಜಿಕೆ ಪಡಬಹುದು. ಆದರೆ ವಿದ್ಯೆ ಮತ್ತು ಸ್ಥಾನಮಾನಕ್ಕೆ ಮಾತ್ರ ಸದಾ ಕಾಲ ಬೆಲೆ ಇರುತ್ತದೆ. ಸಮಾಜದ ಎಲ್ಲಾ ವರ್ಗದ ಮಕ್ಕಳು ವಿದ್ಯಾವಂತರಾಗಿ ಉತ್ತಮ ಸ್ಥಾನ'ಮಾನವನ್ನು ಹೊಂದಬೇಕು. ಆ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಹಾಗೂ ರಾಜಕಾರಣಿಗಳಾದ ನಾವೆಲ್ಲರೂ ಶ್ರಮಿಸಬೇಕು ಎಂದರಲ್ಲದೆ, ನೀವು ಒಂದು ವರ್ಷದ ಗುರಿ ಇಟ್ಟುಕೊಂಡರೆ ಭತ್ತವನ್ನು ಬೆಳೆಯಿರಿ, 10 ವರ್ಷದ ಗುರಿ ಹೊಂದಿದರೆ ಮರವನ್ನು ನೆಡಿ, 100 ವರ್ಷದ ಗುರಿ ನಿಮಗಿದ್ದರೆ ಮಕ್ಕಳಿಗೆ ಶಿಕ್ಷಣವನ್ನು ನೀಡಿ ಎಂದು ಹಿರಿಯ ವಿದ್ವಾಂಸರೊಬ್ಬರು ಹೇಳಿದ್ದಾರೆ. ಅವರ ಮಾತು ನಿಜ. ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡಿದಾಗ ಅದು ತಲೆಮಾರು–ತಲೆಮಾರುಗಳಿಗೆ ಮುಂದುವರೆದು ಉತ್ತಮ ಸಮಾಜ ನಿರ್ಮಾಣಕ್ಕೆ ನೆರವಾಗುತ್ತದೆ ಎಂದರು.

ನಾನು ಮೈಸೂರು–ಕೊಡಗು ಸಂಸದನಾಗಿದ್ದರೂ, ಈ ಹಿಂದೆ ಅವಿಭಾಜ್ಯ ಮೈಸೂರು ಜಿಲ್ಲೆಯ ಅಂಗವಾಗಿದ್ದ ಚಾಮರಾಜನಗರ ಜಿಲ್ಲೆಯನ್ನು ಗಮನಿಸಿದ್ದೆ. ಅತ್ಯಂತ ಹಿಂದುಳಿದ ಜಿಲ್ಲೆ ಎಂಬ ಹೆಸರನ್ನು ಚಾಮರಾಜನಗರ ಪಡೆದಿದೆ. ಈ ಜಿಲ್ಲೆಯಲ್ಲಿ ಎಲ್ಲಾ ರೀತಿಯ ಸಂಪನ್ಮೂಲಗಳಿವೆ. ಅಭಿವೃದ್ಧಿಗೆ ಅಪಾರ ಅವಕಾಶವಿದೆ. ಆದರೆ ಇಲ್ಲಿ ಅಭಿವೃದ್ಧಿಯಾಗಬೇಕಾದರೆ ಕನೆಕ್ಟಿವಿಟಿ (ಸಂಪರ್ಕ) ಮುಖ್ಯವಾಗುತ್ತದೆ ಎಂಬುದನ್ನು ಮನಗಂಡು ಬೆಂಗಳೂರಿನಿಂದ ಕನಕಪುರ, ಕೊಳ್ಳೇಗಾಲ ಮಾರ್ಗವಾಗಿ ಕೊಯಮತ್ತೂರು ತಲುಪುವ ರಾಷ್ಟ್ರೀಯ ಹೆದ್ದಾರಿ ಯೋಜನೆಯನ್ನು ಪ್ರಸ್ತಾಪಿಸಿದವನೇ ನಾನು. ಹೀಗೆ ಉತ್ತಮ ರಸ್ತೆ ಸಂಪರ್ಕ ಇದ್ದಾಗ ಪ್ರಯಾಣದ ಸಮಯ ಹಾಗೂ ಸಂಚಾರ ಸುಗಮವಾಗುತ್ತದೆ. ಚಾಮರಾಜನಗರ ಜಿಲ್ಲೆಯು ಅಭಿವೃದ್ಧಿ ಹೊಂದುತ್ತದೆ. ಬೆಂಗಳೂರಿನಲ್ಲಿ ಸಾವಿರಾರು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿವೆ. ಆದರೆ ಮೈಸೂರಿನಲ್ಲಿ ಸುಮಾರು ಹತ್ತು ಸಣ್ಣಪುಟ್ಟ ಸಂಸ್ಥೆಗಳಿವೆ. ಹೀಗಾಗಿ ಮೈಸೂರು ಮತ್ತು ಚಾಮರಾಜನಗರದಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳನ್ನು ತರುವ ನಿಟ್ಟಿನಲ್ಲಿ ಪ್ರಯತ್ನ ಪಟ್ಟಿದ್ದೇನೆ. ಈಗ ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಕೂಡ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಬರುವ ನಿಟ್ಟಿನಲ್ಲಿ ನನ್ನ ಇತಿ–ಮಿತಿಯಲ್ಲಿ ಕೆಲಸ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ನಿಮ್ಮ ಮಕ್ಕಳು ವಿದ್ಯಾವಂತರಾಗಿ ಕೆಲಸ ಹುಡುಕಿಕೊಂಡು ದೂರದ ಪ್ರದೇಶಗಳಿಗೆ ಹೋಗುವ ಬದಲು ಅವರಿಗೆ ಇಲ್ಲಿಯೇ ಉದ್ಯೋಗ ಲಭಿಸಬೇಕು ಎಂಬ ನಿಟ್ಟಿನಲ್ಲಿ ಚಿಂತನೆ ನಡೆಸಿ, ಪ್ರಕ್ರಿಯೆಗಳನ್ನೂ ಆರಂಭಿಸಿದ್ದೆ. ಅವೆಲ್ಲವೂ ಮುಂದಿನ ದಿನಗಳಲ್ಲಿ ಸಾಧ್ಯವಾಗುತ್ತದೆ ಎಂದು ನಂಬಿದ್ದೇನೆ. ಹಿಂದುಳಿದ ಜಿಲ್ಲೆಯಾದ ಚಾಮರಾಜನಗರ ಶೀಘ್ರದಲ್ಲೇ ಅಭಿವೃದ್ಧಿ ಹೊಂದಿದ ಜಿಲ್ಲೆಯಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರಗಳು ಮುಂದಿನ ದಿನಗಳಲ್ಲಿ ಈ ಜಿಲ್ಲೆಯ ಅಭಿವೃದ್ಧಿಗೆ ಮುಂದಾಗಬೇಕು. ಆ ನಿಟ್ಟಿನಲ್ಲಿ ರಾಜಕಾರಣಿಗಳಾದ ನಾವೆಲ್ಲರೂ ಶ್ರಮ ವಹಿಸಲೇ ಬೇಕು ಎಂದು ಪ್ರತಾಪ್ ಸಿಂಹ ಹೇಳಿದರು.

ಇದೇ ವೇಳೆ ಮಾಜಿ ಶಾಸಕ ಎಸ್. ಬಾಲರಾಜು, ತಹಸೀಲ್ದಾರ್ ಬಸವರಾಜು ಸೇರಿದಂತೆ ಹಲವು ಗಣ್ಯರನ್ನು ಸನ್ಮಾನಿಸಲಾಯಿತು. ದೇವಾಂಗ ಸಮಾಜದ ವಿದ್ಯಾರ್ಥಿಗಳಿಗೆ 8 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ವಿದ್ಯಾರ್ಥಿ ವೇತನವಾಗಿ ವಿತರಿಸಲಾಯಿತು. ಚೌಡೇಶ್ವರಿ ಕಲ್ಯಾಣ ಮಂಟಪ ಟ್ರಸ್ಟ್ ಅಧ್ಯಕ್ಷ ಸಿ.ಎಂ.ಪರಮೇಶ್ವರಯ್ಯ ಅಧ್ಯಕ್ಷತೆ ವಹಿಸಿದ್ದರು. ಆಂಧ್ರ ದೇವಾಂಗ ಸಂಘದ ನಿರ್ದೇಶಕ ಎನ್.ಪಿ. ಸುರೇಶ್ (ಕೊಟ್ಟಗೆರೆ ಸೂರಿ), ಟ್ರಸ್ಟ್ ಕಾರ್ಯದರ್ಶಿ ಜಿ.ಶ್ರೀನಿವಾಸ್, ಆಂಧ್ರ ದೇವಾಂಗ ಮಹಾಸಭಾದ ಶೆಟ್ಟಿಗಾರರು, ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ ಟ್ರಸ್ಟ್ ಅಧ್ಯಕ್ಷ ಎಸ್.ಮಂಜುನಾಥ್, ಕಾರ್ಯದರ್ಶಿ ವಿ.ರವೀಂದ್ರ, ಶ್ರೀ ರಾಜರಾಜೇಶ್ವರಿ ಮಹಿಳಾ ಸಂಘದ ಕಾರ್ಯದರ್ಶಿ ಮಹದೇವಮ್ಮ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನನ್ನ ಕಾಲೆಳೆದವರ ತಲೆ ಮೇಲೆ ಕಾಲಿಟ್ಟು ಎದ್ದು ಬರುತ್ತೇನೆ

ಕೊಳ್ಳೇಗಾಲ: ನಾನು ಮೈಸೂರು ಮತ್ತು ಕೊಡಗು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ನಾನು ಪ್ರತಿನಿಧಿಸಿದ ಕ್ಷೇತ್ರ ಮಾತ್ರವಲ್ಲದೆ, ಅಕ್ಕಪಕ್ಕದ ಕ್ಷೇತ್ರಗಳ ಅಭಿವೃದ್ಧಿಗೆ ಕೊಡುಗೆ ನೀಡಿದ್ದೇನೆ. ಆದರೆ ಕೆಲವರು ರಾಜಕೀಯವಾಗಿ ನನ್ನ ಕಾಲೆಳೆದರು. ಮುಂದೊಂದು ದಿನ ನನ್ನ ಕಾಲೆಳೆದವರ ತಲೆ ಮೇಲೆ ಕಾಲಿಟ್ಟು ಮೇಲೆ ಬರುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಘರ್ಜಿಸಿದರು.

ತಾವು ಸಂಸದರಾಗಿದ್ದಾಗ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರಿಸಿದ ಅವರು, ಇಷ್ಟೆಲ್ಲಾ ಮಾಡಿದರೂ, ರಾಜಕಾರಣದಲ್ಲಿ ಕಾಲೆಳೆಯುವವರಿಂದ ನನಗೆ ಹಿನ್ನೆಡೆಯಾಯಿತು. ಮುಂದಿನ ದಿನಗಳಲ್ಲಿ ಕಾಲೆಳೆದವರ ತಲೆ ಮೇಲೆ ಕಾಲಿಟ್ಟು ಖಂಡಿತಾ ಮುಂದೆ ಬರುತ್ತೇನೆ. ಆ ಕಾಲ ಬಂದೇ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ವಿ.ಸೋಮಣ್ಣ ಅವರ ಬಗ್ಗೆ ನನಗೆ ಅತೀವ ವಿಶ್ವಾಸವಿದೆ. ನನ್ನ ಕೈಹಿಡಿದು ಬೆಳೆಸಿದ ಹಿರಿಯಣ್ಣ ಅವರು ಎಂದು ಹೇಳಿದ ಪ್ರತಾಪ್ ಸಿಂಹ, ನಾನು ಮೈಸೂರಿಗೆ ಬರುವಾಗ ಹಣದ ಗಂಟು ತಂದಿರಲಿಲ್ಲ. ಆ ಜನ ನನ್ನ ಕೈಹಿಡಿದು ಬೆಳೆಸಿದರು. ಅದಕ್ಕೆ ತಕ್ಕಂತೆ ಶಕ್ತಿ ಮೀರಿ ಕೆಲಸ ಮಾಡಿದ್ದೇನೆ. ಹೇಳಿದ್ದನ್ನೆಲ್ಲಾ ಕೊಡುವ ಕಾಮಧೇನುವಿನಂತೆ ಪ್ರಧಾನಿ ಮೋದಿಯವರಿದ್ದಾರೆ. ಹೀಗಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೆ. ಈಗ ಅಧಿಕಾರ ಇಲ್ಲದೇ ಇದ್ದರೂ ಜನರ ಒಳಿತಿಗಾಗಿ ಕೆಲಸ ಮಾಡಿಯೇ ಮಾಡುತ್ತೇನೆ ಎಂದು ಶಪಥ ಮಾಡಿದರು.

ಬಾರ್ಡರ್ ಗಾವಸ್ಕರ್ ಟ್ರೋಫಿ ಗೆದ್ದ ಆಸ್ಟ್ರೇಲಿಯಾ

●ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಲಗ್ಗೆ ●ಜಸ್ಪ್ರೀತ್ ಬುಮ್ರಾಗೆ ಸರಣಿ ಶ್ರೇಷ್ಠ ಪ್ರಶಸ್ತಿ

ಸಿಡ್ನಿ, ಜ.5– ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭಾರತದ ವಿರುದ್ಧ ಆಸ್ಟ್ರೇಲಿಯಾ 6 ವಿಕೆಟ್‌ಗಳಿಂದ ಜಯ ಗಳಿಸಿದೆ. ಆ ಮೂಲಕ 5 ಪಂದ್ಯಗಳ ಟೆಸ್ಟ್ ಸರಣಿಯನ್ನು 3–1 ಅಂತರದಲ್ಲಿ ತನ್ನದಾಗಿಸಿಕೊಂಡಿದೆ. ಅಲ್ಲದೇ 10 ವರ್ಷಗಳ ಬಳಿಕ ಬಾರ್ಡರ್ ಗವಾಸ್ಕರ್ ಟ್ರೋಫಿ ಸರಣಿ ಗೆದ್ದ ವಿಶೇಷ ಸಾಧನೆ ಮಾಡಿದೆ.

ಇದರೊಂದಿಗೆ ಸತತ 2ನೇ ಬಾರಿಗೆ ಆಸ್ಟ್ರೇಲಿಯಾ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ತಲುಪಿದ್ದು, ಇಂಗ್ಲೆಂಡ್‌ನ ಲಾರ್ಡ್ಸ್ ಮೈದಾನದಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಕಾದಾಟಕ್ಕಿಳಿಯಲಿದೆ. 2021–23ರ ಆವೃತ್ತಿಯಲ್ಲಿ ಮೊದಲ ಬಾರಿಗೆ ಫೈನಲ್ ತಲುಪಿದ್ದ ಆಸ್ಟ್ರೇಲಿಯಾ ಟೀಂ ಇಂಡಿಯಾ ವಿರುದ್ಧ ಗೆದ್ದು ಚಾಂಪಿಯನ್ ಪಟ್ಟಕ್ಕೇರಿತ್ತು.

ಸೂಪರ್ ಸಂಡೇ ಸಿಡ್ನಿಯಲ್ಲಿ ಪವಾಡವೇ ನಡೆಯಬಹುದು ಎಂದು ಭಾರತೀಯ ಕ್ರಿಕೆಟ್ ಅಭಿಮಾನಿಗಳು ಕಾದು ಕುಳಿತ್ತಿದ್ದರು. ಒಂದು ಹಂತದಲ್ಲಿ ಕನ್ನಡಿಗ ಪ್ರಸಿದ್ಧ ಕೃಷ್ಣ ಆಸೆಯನ್ನೂ ಹುಟ್ಟಿಸಿದ್ದರು. ಆದ್ರೆ ಭಾರತದ ವಿರುದ್ಧ ಮತ್ತೆ ಸಿಡಿದ ಟ್ರಾವಿಸ್ ಹೆಡ್ ಮತ್ತು ಮೊದಲನೇ ಪಂದ್ಯದಲ್ಲೇ ತನ್ನ ಸಾಮರ್ಥ್ಯ ಸಾಬೀತುಪಡಿಸಿದ ಬ್ಯೂ ವೆಬ್‌ಸ್ಟರ್ ಅದಕ್ಕೆ ಅವಕಾಶ ನೀಡದಂತೆ ಮಾಡಿದರು.

ಗೆಲುವಿಗೆ ಕೇವಲ 162 ರನ್‌ಗಳ ಗುರಿ ಪಡೆದ ಆಸ್ಟ್ರೇಲಿಯಾ ಆರಂಭದಿಂದಲೇ ಏಕದಿನ ಶೈಲಿಯಲ್ಲಿ ಆಕ್ರಮಣಕಾರಿ ಆಟಕ್ಕೆ ಇಳಿಯಿತು. ಮತ್ತೊಂದೆಡೆ ಗಾಯದ ಸಮಸ್ಯೆಯಿಂದ ವೇಗಿ ಜಸ್ಪ್ರೀತ್ ಬುಮ್ರಾ ಅನುಪಸ್ಥಿತಿ ಆಸ್ಟ್ರೇಲಿಯಾಕ್ಕೆ ವರದಾನವಾಯಿತು.



ಬುಮ್ರಾ ಅನುಪಸ್ಥಿತಿಯಲ್ಲಿ ಆರಂಭಿಕ ಬೌಲರ್ ಆಗಿ ಕಣಕ್ಕಿಳಿದ ಸಿರಾಜ್ ಮೊದಲ ಓವರ್‌ನಲ್ಲೇ 13 ರನ್ ಚಚ್ಚಿಸಿಕೊಂಡರು. ಅತ್ತ ಆಸ್ಟ್ರೇಲಿಯಾ ಪಾಳಯದಲ್ಲಿ ಆತ್ಮವಿಶ್ವಾಸ ತುಂಬಿ ತುಳುಕುತ್ತಿತ್ತು. ಇದು ಸಾಲದೆಂಬಂತೆ ಪ್ರಸಿದ್ಧ್ ಕೃಷ್ಣ ಅವರು ಮುಂದಿನ ಓವರ್ ನಲ್ಲಿ ಮತ್ತೆ 13 ರನ್‌ಗಳನ್ನು ನೀಡಿ ಆಸೀಸ್ ಹಾದಿಯನ್ನು ಮತ್ತಷ್ಟು ಸುಗಮಗೊಳಿಸಿದರು. ಈ ಹಂತದಲ್ಲಿ ಇಬ್ಬರು ಬೌಲರ್‌ಗಳು ಅಡ್ಡಾದಿಡ್ಡಿ ಬೌಲಿಂಗ್ ಮಾಡುವುದನ್ನು ನೋಡಿಗಾದ ಪಂದ್ಯ ಬಹಳ ಬೇಗ ಮುಗಿಯುವ ಲಕ್ಷಣಗಳು ಕಂಡು ಬಂದಿತ್ತು.

4ನೇ ಓವರ್ ನಲ್ಲಿ 17 ಎಸೆತಗಳಿಂದ 22 ರನ್ ಗಳನ್ನು ಗಳಿಸಿದ ಸ್ಯಾಮ್ ಕಾನ್‌ಸ್ಟಾಸ್ ಅವರನ್ನು ಪ್ರಸಿದ್ಧ ಕೃಷ್ಣ ಪೆವಿಲಿಯನ್ ಗಟ್ಟಿದರು. ಜೊತೆಗೆ ಮಾರ್ನಸ್ ಲಾಬುಶೇನ್, ಸ್ಟೀವ್ ಸ್ಮಿತ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಆಸ್ಟ್ರೇಲಿಯಾ 58 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಾಗ ಗೆಲುವಿನ ಹಾದಿ ಇನ್ನೂ ಸಾಧ್ಯವಿದೆ ಎಂದೇ ಭಾವಿಸಲಾಗಿತ್ತು. ಆದ್ರೆ ಮತ್ತೆ ಭಾರತವನ್ನು ಕಾಡಿದ ಟ್ರಾವಿಸ್ ಹೆಡ್ ಹಾಗೂ ವೆಬ್‌ಸ್ಟರ್ ವಿಕೆಟ್ ಬಿಟ್ಟುಕೊಡದೇ ತಂಡವನ್ನು ಗೆಲುವಿನ ದಡ ಸೇರಿಸಿದರು.

ಇದಕ್ಕೂ ಮೊದಲು 6 ವಿಕೆಟ್‌ಗೆ 141 ರನ್ ಗಳಿಸಿ 145 ರನ್‌ಗಳ ಮುನ್ನಡೆ ಕಾಯ್ದುಕೊಂಡಿದ್ದ ಭಾರತ 157 ರನ್‌ಗೆ ಆಲೌಟ್ ಆಯಿತು. ಪ್ರಥಮ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಪಡೆದಿದ್ದ ಸ್ಕಾಟ್ ಬೋಲೆಂಡ್ ದ್ವಿತೀಯ ಇನ್ನಿಂಗ್ಸ್‌ನಲ್ಲಿ 6 ವಿಕೆಟ್ ಪಡೆದರು. ನಾಯಕ ಪ್ಯಾಟ್ ಕಮಿನ್ಸ್ 3 ವಿಕೆಟ್ ಪಡೆದರು. ಉಳಿದೊಂದು ವಿಕೆಟ್ ವೆಬ್‌ಸ್ಟರ್ ಪಾಲಾಯಿತು.


ಎರಡೂ ಇನ್ನಿಂಗ್ಸ್‌ಗಳಲ್ಲಿ ಒಟ್ಟು 10 ವಿಕೆಟ್ ಪಡೆದ ಆಸ್ಟ್ರೇಲಿಯಾದ ವೇಗಿ ಸ್ಕಾಟ್ ಬೋಲೆಂಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ಸರಣಿಯಲ್ಲಿ ಒಟ್ಟು 32 ವಿಕೆಟ್ ಉರುಳಿಸಿದ ಭಾರತದ ವೇಗಿ ಜಸ್ಪ್ರೀತ್ ಬುಮ್ರಾ ಅವರು ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಪ್ರಾಚ್ಯ ವಸ್ತುಸಂಗ್ರಹಾಲಯಕ್ಕೆ ಸೇರಿದ ಶ್ರೀರಂಗಪಟ್ಟಣದ ಮ್ಯೂಸಿಯಂ, ಮದ್ದಿನ ಮನೆ ಸೇರಿ 70ಕ್ಕೂ ಹೆಚ್ಚು ಆಸ್ತಿಗಳು ವಕ್ಫ್ ಬೋರ್ಡ್‌ಗೆ

ಶ್ರೀರಂಗಪಟ್ಟಣ, ಜ.5(ವಿನಯ್ ಕಾರೇಕುರ)– ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯ ಮ್ಯೂಸಿಯಂ, ಮಾನ್ಯುಮೆಂಟ್, ಮದ್ದಿನ ಮನೆ ಸೇರಿದಂತೆ ಶ್ರೀರಂಗಪಟ್ಟಣ ತಾಲೂಕಿನ 70ಕ್ಕೂ ಹೆಚ್ಚು ಆಸ್ತಿಗಳು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಾಗಿರುವ ಪ್ರಕರಣ ಬೆಳಕಿಗೆ ಬಂದಿದೆ.

ಸರ್ಕಾರಿ ಆಸ್ತಿಗಳಲ್ಲದೆ ಪಟ್ಟಣ ಹಾಗೂ ತಾಲೂಕಿನ ಹಲವು ರೈತರ ಜಮೀನುಗಳು ಸಹ ಆರ್‌ಟಿಸಿಯಲ್ಲಿನ ಕಾಲಂ ನಂ.11ರಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಾಗಿರುವುದು ಸಾರ್ವಜನಿಕರು ಹಾಗೂ ರೈತರಲ್ಲಿ ಆತಂಕ ಸೃಷ್ಟಿಸಿದೆ.

ಇತ್ತೀಚೆಗಷ್ಟೇ ತಾಲೂಕಿನ ಮಹದೇವಪುರ ಗ್ರಾಮದ ಚಿಕ್ಕಮ್ಮ ಚಿಕ್ಕದೇವಿ ದೇವಾಲಯ ಹಾಗೂ ಚಂದಗಾಲು ಗ್ರಾಮದ ಸರ್ಕಾರಿ ಶಾಲೆ ಕೂಡ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಾಗಿರುವುದು ಬೆಳಕಿಗೆ ಬಂದಿತ್ತು. ಇದೀಗ ತಾಲೂಕಿನಾದ್ಯಂತ ಹಲವು ಆಸ್ತಿಗಳು ಆರ್‌ಟಿಸಿಗಳಲ್ಲಿ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಾಗಿರುವುದು ಅಚ್ಚರಿಯ ಜೊತೆಗೆ ಮುಂದೇನು ಎಂಬ ಆತಂಕವನ್ನು ಸೃಷ್ಟಿ ಮಾಡಿದೆ.



ಪ್ರಮುಖವಾಗಿ ಪಟ್ಟಣದ ಸರ್ವೇ ನಂ.17, 28, 63, 68 ಹಾಗೂ 73 ಆರ್‌ಟಿಸಿಗಳಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಕರ್ನಾಟಕ ಸರ್ಕಾರ ಎಂಬುದಾಗಿದ್ದ ಆಸ್ತಿಗಳು ಇದೀಗ ಆರ್‌ಟಿಸಿಯಲ್ಲಿನ ನಮೂನೆ 11ರಲ್ಲಿ 2014–15ನೇ ಸಾಲಿಗೆ ಸೇರಿದಂತೆ ವಕ್ಫ್ ಮಂಡಳಿ ಆಸ್ತಿ ಎಂದು ನಮೂದು ಮಾಡಿಕೊಳ್ಳಲಾಗಿದೆ. ಜೊತೆಗೆ ಸರ್ವೆ ನಂ.758 ರ 20 ಗುಂಟೆ ಜಮೀನು ಸರ್ಕಾರಿ ಎಂಬ ಆಸ್ತಿಯು ಸರ್ಕಾರಿ ಮಕಾನ್ ಎಂಬುದಾಗಿ ನಮೂದಾಗಿದೆ.

ಸರ್ವೆ ನಂ. 343/1, 343/2, 343/3, 343/4 ಹಾಗೂ 143/5ರ ಆಸ್ತಿಯು ರಘು ಚೈತನ್ಯ ವೈ.ನಾಯಕ್ ಬಿನ್ ಯಶೋಧರ ಜಿ.ನಾಯಕ್ ಎಂಬುವವರಿಗೆ ಸೇರಿದ್ದ 4 ಎಕರೆಗೂ ಹೆಚ್ಚು ಆಸ್ತಿ ಕೂಡ ಕರ್ನಾಟಕ ರಾಜ್ಯ ವಕ್ಫ್ ಆಸ್ತಿ ಎಂದು ನಮೂದಾಗಿದೆ.

ಇನ್ನುಳಿದಂತೆ ಕಸಬಾ ಹೋಬಳಿಯ ಶ್ರೀರಂಗಪಟ್ಟಣ ಸರ್ವೆ ನಂ. 193/1, 193/2ಎ, 193/2ಬಿ, 194, 924, 590, ತಾಲೂಕಿನ ಅರಕೆರೆ ಹೋಬಳಿಯ ದೊಡ್ಡ ಹಾರೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ. 91/1, 74 ಮತ್ತು ಕೆ.ಶೆಟ್ಟಹಳ್ಳಿ–1ಹೋಬಳಿಯ ಕಿರಂಗೂರು ಗ್ರಾಮದ 526/2 ಪೈಕಿ ಪಿ 1ರ 526/2 ಪೈಕಿ ಪಿ2, 526/ ಪೈಕಿ ಪಿ2, 600, 601, 657, 662/–21, 662/ಪೈಕಿ ಪಿ2,664, 1068 /ಪೈಕಿ ಪಿ1, 1068/ಪೈಕಿ ಪಿ2, 670, 1066, 663, 527/1, 527/2,527/3, 527/4, 527/5 ಸೇರಿದಂತೆ ತಾಲೂಕಿನಾದ್ಯಂತ 70ಕ್ಕೂ ಹೆಚ್ಚು ಆರ್‌ಟಿಸಿ ದಾಖಲಾತಿಗಳು ಮೇಲ್ನೋಟಕ್ಕೆ ಲಭ್ಯವಾಗಿದ್ದು, ನೂರಾರು ಎಕರೆ ಪ್ರದೇಶ ವಕ್ಫ್ ಬೋರ್ಡ್‌ಗೆ ನಮೂದಾಗಿರುವುದು ಕಂಡು ಬಂದಿದೆ.

ಮತ್ತಷ್ಟು ಆಳವಾಗಿ ಪರಿಶೀಲಿಸಿದಲ್ಲಿ ವಕ್ಫ್ ಬೋರ್ಡ್ ಗುಮ್ಮ ಎಷ್ಟರ ಮಟ್ಟಿಗೆ ಆವರಿಸಿಕೊಂಡಿದೆ ಎಂಬುದು ಬೆಳಕಿಗೆ ಬರಬೇಕಾಗಿದೆ. ಜೊತೆಗೆ ಈ ಎಲ್ಲಾ ಆಸ್ತಿಗಳು ವಕ್ಫ್ ಬೋರ್ಡ್‌ಗೆ ಸೇರಿರುವ ಬಗ್ಗೆ ಬಹುತೇಕ ರೈತರಿಗೆ ಅರಿವಿಲ್ಲದಿರುವುದು ವಿಪರ್ಯಾಸದ ಸಂಗತಿ.

ತಾಲೂಕಿನ ಪ್ರತಿಯೊಬ್ಬರು ಸಹ ತಮ್ಮ ಆರ್‌ಟಿಸಿಗಳನ್ನು ಪರಿಶೀಲಿಸಿಕೊಳ್ಳುವ ಜೊತೆಗೆ ವಕ್ಫ್ ಬೋರ್ಡ್ ಗುಮ್ಮನ ಜೊತೆಗೆ ಹೋರಾಡುವ ಅನಿವಾರ್ಯತೆ ಎದುರಾಗಿದೆ. ಕಳೆದ 2014–15ನೇ ಸಾಲಿನ ಸರ್ಕಾರದ ಗೆಜೆಟ್ ನೋಟಿಫಿಕೇಷನ್ ನಂತರ ಅಧಿಕಾರಿಗಳು ತಿದ್ದುಪಡಿ ಮಾಡಿದ್ದಾರೆ ಎನ್ನಲಾಗಿದೆ.

ಮ್ಯುಟೇಶನ್ (ಎಂ.ಆರ್) ಪ್ರತಿಗಳಲ್ಲಿ ಕೋರ್ಟ್ ಆದೇಶ ಎಂದು ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಪಹಣಿ ಬದಲಾವಣೆ ಮಾಡಿ ಆರ್‌ಟಿಸಿಯ ಕಲಂ ನಂ.11ರಲ್ಲಿ ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಾಗಿ ಬರುತ್ತಿದೆ. ಈ ಬೆಳವಣಿಗೆಯು ತಾಲೂಕಿನಾದ್ಯಂತ ಸಾರ್ವಜನಿಕರು ಹಾಗೂ ರೈತರಲ್ಲಿ ಹೆಚ್ಚಿನ ಆತಂಕ ಸೃಷ್ಟಿ ಮಾಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಜಮೀನುಗಳು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಾಗುವ ಭೀತಿ ಎದುರಾಗಿದೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದಸರಾ ವಸ್ತು ಪ್ರದರ್ಶನಕ್ಕೆ ಅದ್ದೂರಿ ತೆರೆ

ಇಂದು, ನಾಳೆ ವಸ್ತು ಪ್ರದರ್ಶನಕ್ಕೆ ಉಚಿತ ಪ್ರವೇಶ

ಮೈಸೂರು, ಜ.5(ಎಸ್‌ಪಿಎನ್)– ವಿಶ್ವವಿಖ್ಯಾತ ಮೈಸೂರು ದಸರಾ ಹಿನ್ನಲೆಯಲ್ಲಿ 3 ತಿಂಗಳ ಹಿಂದೆ ಆರಂಭಗೊಂಡಿದ್ದ ದಸರಾ ವಸ್ತು ಪ್ರದರ್ಶನಕ್ಕೆ ಭಾನುವಾರ ಅದ್ದೂರಿ ತೆರೆಕಂಡಿತು.

2024ರ ಅ.3ರಂದು ಉದ್ಘಾಟನೆಗೊಂಡಿದ್ದ ವಸ್ತು ಪ್ರದರ್ಶನದಲ್ಲಿ ಸರ್ಕಾರದ ವಿವಿಧ ಇಲಾಖೆಗಳ 30 ಮಳಿಗೆಗಳು, 153ಕ್ಕೂ ಹೆಚ್ಚು ಖಾಸಗಿ ವಾಣಿಜ್ಯ ಮಳಿಗೆಗಳು ಸೇರಿದಂತೆ ಇನ್ನಿತರ ಆಟೋಟಗಳು, ವೈವಿದ್ಯಮಯ ಸಾಂಸ್ಕೃತಿಕ ಚಟುವಟಿಕೆಗಳು ಕಾರ್ಯಾರಂಭಗೊಂಡು ಲಕ್ಷಾಂತರ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸಿತ್ತು.

ವಸ್ತು ಪ್ರದರ್ಶನಕ್ಕೆ ಆಗಮಿಸಿದ ಸ್ಥಳೀಯರು ಹಾಗೂ ಪ್ರವಾಸಿಗರು ಇಲ್ಲಿ ಸಿಗುವ ಬಗೆ ಬಗೆಯ ತಿಂಡಿ ತಿನಿಸುಗಳನ್ನು ತಿಂದು ಸಂತಸಪಟ್ಟಿದ್ದರು. ಅಲ್ಲದೇ ತಮಗೆ ಇಷ್ಟವಾದ ವಸ್ತುಗಳನ್ನು ಖರೀದಿಸಿದ್ದರು. ಇನ್ನೂ ಮನರಂಜನೆಗಾಗಿ ತೆರೆದಿದ್ದ ಬಗೆಬಗೆಯ ಆಟದ ಸಾಮಾಗ್ರಿಗಳು ಪುಟಾಣಿ ಮಕ್ಕಳಿಂದ ಹಿಡಿದು ಹಿರಿಯರನ್ನು ತನ್ನತ್ತ ಸೆಳೆದಿತ್ತು.

ಎರಡು ದಿನ ಉಚಿತ ಪ್ರವೇಶ: ಸಾರ್ವಜನಿಕರು ಮತ್ತು ಪ್ರವಾಸಿಗರ ಹಿತದೃಷ್ಟಿಯಿಂದ ದಸರಾ ವಸ್ತು ಪ್ರದರ್ಶನಕ್ಕೆ ಜ.6 ಮತ್ತು ಜ.7ರಂದು ಉಚಿತ ಪ್ರವೇಶ ಕಲ್ಪಿಸಲಾಗಿದೆ. ಎಂದಿನಂತೆ ವಾಣಿಜ್ಯ ಮತ್ತು ಸರ್ಕಾರಿ ಮಳಿಗೆಗಳು ಕಾರ್ಯ ನಿರ್ವಹಿಸಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವಂತೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ದೇಶ - ವಿದೇಶ

ಪೋರ್‌ಬಂದರ್‌ನಲ್ಲಿ ಕರಾವಳಿ ಪಡೆ ಹೆಲಿಕಾಪ್ಟರ್ ಪತನ; ಮೂವರ ಸಾವು

ಅಹ್ಮದಾಬಾದ್: ಗುಜರಾತ್ ಕರಾವಳಿಯಲ್ಲಿ ಭಾರತೀಯ ಕರಾವಳಿ ಪಡೆಯ ತರಬೇತಿ ನಿರತ ಹೆಲಿಕಾಪ್ಟರ್ ಪತನಕ್ಕೀಡಾಗಿದ್ದು, ಹೆಲಿಕಾಪ್ಟರ್‌ನಲ್ಲಿದ್ದ ಮೂವರು ದುರ್ಮರಣಕ್ಕೀಡಾಗಿದ್ದಾರೆ.

ಪೋರ್‌ಬಂದರ್‌ನಲ್ಲಿ ಎಎಲ್‌ಎಚ್ ಧ್ರುವ್ ಹೆಸರಿನ ಭಾರತೀಯ ಕರಾವಳಿ ಪಡೆ ಹೆಲಿಕಾಪ್ಟರ್ ಪತನಗೊಂಡಿದ್ದು ಈ ದುರ್ಘಟನೆಯಲ್ಲಿ ಮೂವರು ಮೃತಪಟ್ಟಿದ್ದಾರೆ. ಮೂಲಗಳ ಪ್ರಕಾರ ಪೈಲಟ್‌ಗಳಿಗೆ ತರಬೇತಿ ನೀಡುವ ಸಮಯದಲ್ಲಿ ಈ ದುರ್ಘಟನೆ ನಡೆದಿದೆ.

ಹೆಲಿಕಾಪ್ಟರ್‌ನಲ್ಲಿ ಇಬ್ಬರು ಪೈಲಟ್‌ಗಳು ಸೇರಿದಂತೆ ಮೂವರು ಸಿಬ್ಬಂದಿ ಇದ್ದರು. ಈ ಘಟನೆಯಲ್ಲಿ ಮೂವರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಐಸಿಜಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಮಧ್ಯಾಹ್ನ 12.10ರ ಸುಮಾರಿಗೆ ನಡೆದಿದೆ ಎಂದು ಪೋರಬಂದರ್ ಪೊಲೀಸ್ ವರಿಷ್ಠಾಧಿಕಾರಿ ಭಾಗೀರಥ್ ಸಿನ್ಹ ಜಡೇಜಾ ತಿಳಿಸಿದ್ದಾರೆ.

ಮೂವರು ಸಿಬ್ಬಂದಿಯನ್ನು ಹೆಲಿಕಾಪ್ಟರ್‌ನಿಂದ ಹೊರಕ್ಕೆ ಕರೆತಂದು ಪೋರ್‌ಬಂದರ್‌ನ ಆಸ್ಪತ್ರೆಗೆ ದಾಖಲಿಸಲಾಗಿತ್ತು ಆದರೆ ತೀವ್ರವಾಗಿ ಸುಟ್ಟ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ಕಮಲಾ ಬಾಗ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರಾಜೇಶ್ ಕಾನ್ಮಿಯಾ ತಿಳಿಸಿದ್ದಾರೆ.

ವಿವಾದಿತ ಹೂಡಿಕೆದಾರ ಜಾರ್ಜ್ ಸರೋಸ್, ಮೆಸ್ಸಿಗೆ 'ಪ್ರೆಸಿಡೆನ್ಶಿಯಲ್ ಮೆಡಲ್ ಆಫ್ ಫ್ರೀಡಮ್' ಘೋಷಣೆ

ವಾಷಿಂಗ್‌ಟನ್: ಅಮೇರಿಕಾ ಅಧ್ಯಕ್ಷ ಜೋ ಬೈಡನ್ ದೇಶದ ಪ್ರತಿಷ್ಠಿತ ಅಧ್ಯಕ್ಷೀಯ ಸ್ವಾತಂತ್ರ್ಯದ ಪದಕಗಳಿಗೆ, ಮಾಜಿ ಸಚಿವೆ ಹಿಲರಿ ಕ್ಲಿಂಟನ್, ಫ್ಯಾಷನ್ ಡಿಸೈನರ್ ರಾಲ್ಫ್ ಲಾರೆನ್, ಫುಟ್‌ಬಾಲ್ ಸೂಪರ್‌ಸ್ಟಾರ್ ಲಿಯೋನೆಲ್ ಮೆಸ್ಸಿ, ಮಾಜಿ ರಕ್ಷಣಾ ಕಾರ್ಯದರ್ಶಿ ದಿವಂಗತ ಆಷ್ಟನ್ ಕಾರ್ಟರ್ ಮತ್ತು ವಿವಾದಾತ್ಮಕ ಹೂಡಿಕೆದಾರ ಜಾರ್ಜ್ ಸೊರೊಸ್ ಸೇರಿ 14 ಮಂದಿಯನ್ನು ನಾಮನಿರ್ದೇಶನ ಮಾಡಿದ್ದಾರೆ.



ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವವಾದ ಪ್ರೆಸಿಡೆನ್ಶಿಯಲ್ ಮೆಡಲ್ ಆಫ್ ಫ್ರೀಡಮ್ ಅನ್ನು ಶನಿವಾರ ಮಧ್ಯಾಹ್ನ ಬಿಡನ್ ಅವರ ಶ್ವೇತಭವನದ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ಪ್ರದಾನ ಮಾಡಲಿದ್ದಾರೆ. ಯುಎಸ್ ಸೆನೆಟ್‌ಗೆ ಚುನಾಯಿತರಾದ ಮೊದಲ ಪ್ರಥಮ ಮಹಿಳೆ ಸೇರಿದಂತೆ ಸಾರ್ವಜನಿಕ ಸೇವೆಯಲ್ಲಿ ಕ್ಲಿಂಟನ್ ದಶಕಗಳಿಂದ ಹಲವು ಬಾರಿ ಇತಿಹಾಸವನ್ನು ನಿರ್ಮಿಸಿದರು. ವಿದೇಶಾಂಗ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ನಂತರ, ಅವರು ಯುಎಸ್ ಪ್ರಮುಖ ರಾಜಕೀಯ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ನಾಮನಿರ್ದೇಶನಗೊಂಡ ಮೊದಲ ಮಹಿಳೆಯಾಗಿದ್ದಾರೆ ಎಂದು ಶ್ವೇತಭವನ ತಿಳಿಸಿದೆ.

ಪ್ರಿಯಾಂಕಾ ಗಾಂಧಿ ಕೆನ್ನೆಯಷ್ಟು ನುಣುಪಾದ ರಸ್ತೆಗಳನ್ನು ನಿರ್ಮಿಸುವೆ; ಬಿಜೆಪಿ ಅಭ್ಯರ್ಥಿ ವಿವಾದಾತ್ಮಕ ಹೇಳಿಕೆ

ನವದೆಹಲಿ: ನಾನು ಚುನಾವಣೆಯಲ್ಲಿ ಗೆದ್ದರೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿಯವರ ಕೆನ್ನೆಯಷ್ಟು ನುಣುಪಾದ ರಸ್ತೆಗಳನ್ನು ನಿರ್ಮಿಸುವೆ ಎಂದು ದೆಹಲಿಯ ಕಲ್ಕಾಜಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ್ ಬಿಧುರಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಬಿಜೆಪಿ ನಾಯಕನ ಈ ಹೇಳಿಕೆ ವಿರುದ್ಧ ಕಾಂಗ್ರೆಸ್ ಕೆರಳಿ ಕೆಂಡವಾಗಿದೆ.

ಈ ಹೇಳಿಕೆ ಹಿನ್ನೆಲೆಯಲ್ಲಿ ಬಿಜೆಪಿಯನ್ನು 'ಮಹಿಳಾ ವಿರೋಧಿ ಪಕ್ಷ ಎಂದು ಕರೆದಿರುವ ಕಾಂಗ್ರೆಸ್, ಬಿಧುರಿಯವರ ಹೇಳಿಕೆಗಳು ನಾಚಿಕೆಗೇಡಿನ ಮತ್ತು ಅವರ ಕೊಳಕು ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಟೀಕಿಸಿದೆ.

ಈ ಕುರಿತು ಮಾಧ್ಯಮದೊಂದಿಗೆ ಮಾತನಾಡಿದ ಬಿಧುರಿ, ಈ ಹಿಂದೆ ಲಾಲು ಪ್ರಸಾದ್ ಯಾದವ್ ಅವರು ಬಿಹಾರದ ರಸ್ತೆಗಳನ್ನು ನಟಿ ಹೇಮಾ ಮಾಲಿನಿ ಅವರ ಕೆನ್ನೆಯಂತೆ ನಯವಾಗಿಸುತ್ತೇನೆ ಎಂದು ಹೇಳಿದ್ದರು. ಈಗ ನಾನು ಅಂತಹ ಹೇಳಿಕೆ ನೀಡಿದ್ದೇನೆ. ಇಂದು ನನ್ನ ಹೇಳಿಕೆಯಿಂದ ಕಾಂಗ್ರೆಸ್‌ಗೆ ನೋವು ಆಗಿದ್ದರೆ, ಹೇಮಾಮಾಲಿನಿ ಅವರ ಬಗ್ಗೆ ಏನು ಹೇಳ್ತಾರೆ. ಹೇಮಾಮಾಲಿನಿ ಮಹಿಳೆ ಅಲ್ಲವೇ? ಜೀವನದಲ್ಲಿ ಸಾಧನೆಗಳ ವಿಷಯದಲ್ಲಿ ಪ್ರಿಯಾಂಕಾ ಗಾಂಧಿಗಿಂತ ಹೇಮಾಮಾಲಿನಿ ತುಂಬಾ ಶ್ರೇಷ್ಠರು ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಛತ್ತೀಸ್‌ಗಢದಲ್ಲಿ ಭೀಕರ ಎನ್ಕೌಂಟರ್: ನಾಲ್ವರು ನಕ್ಸಲರ ಹತ್ಯೆ; ಪೊಲೀಸ್ ಸಿಬ್ಬಂದಿ ಸಾವು

ದಂತೇವಾಡ: ಛತ್ತೀಸಗಢದಲ್ಲಿ ಭೀಕರ ನಕ್ಸಲ್ ಎನ್ಕೌಂಟರ್ ನಡೆದಿದ್ದು, ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ನಡೆದ ಭೀಕರ ಗುಂಡಿನ ಕಾಳಗದಲ್ಲಿ ಓರ್ವ ಪೊಲೀಸ್ ಸಿಬ್ಬಂದಿ ಮತ್ತು ನಾಲ್ಕು ಮಂದಿ ನಕ್ಸಲರು ಸಾವನ್ನಪ್ಪಿದ್ದಾರೆ.

ಛತ್ತೀಸಗಢದ ಬಸ್ತಾರ್ ಪ್ರದೇಶದ ನಾರಾಯಣಪುರ ಮತ್ತು ದಾಂತೇವಾಡ ಜಿಲ್ಲೆಗಳ ಗಡಿಯಲ್ಲಿರುವ ದಕ್ಷಿಣ ಅಬುಜ್‌ಮದ್ ಅರಣ್ಯದಲ್ಲಿ ಶನಿವಾರ ಸಂಜೆ ಭದ್ರತಾ ಸಿಬ್ಬಂದಿ ಜಂಟಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ನಕ್ಸಲರೊಂದಿಗೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ನಾಲ್ವರು ನಕ್ಸಲರು ಹತ್ಯೆಯಾಗಿದ್ದು, ಒಬ್ಬ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಮೃತಪಟ್ಟಿದ್ದಾರೆ.

ಶನಿವಾರ ತಡರಾತ್ರಿ ಗುಂಡಿನ ಚಕಮಕಿ ನಿಂತಿದ್ದು, ಸ್ಥಳದಿಂದ ನಾಲ್ವರು ನಕ್ಸಲೀಯರ ಮೃತದೇಹಗಳು, ಎಕೆ–47 ರೈಫಲ್ ಮತ್ತು ಸ್ವಯಂ ಲೋಡಿಂಗ್ ರೈಫಲ್ (SLR) ಸೇರಿದಂತೆ ಸ್ವಯಂಚಾಲಿತ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಂತೆಯೇ ಮೃತ ಪೊಲೀಸ್ ಸಿಬ್ಬಂದಿಯನ್ನು ಸನ್ನು ಕರಮ್ ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಂದು ಮರುಧರ್ ಆರ್ಟ್ಸ್‌ನಿಂದ ಭಾರತದ ಅಪರೂಪದ ನಾಣ್ಯಗಳ ಹರಾಜು

ಬೆಂಗಳೂರು: ವೊಘಲ್ ಮತ್ತು ಹೊಯ್ಸಳ ರಾಜವಂಶದ ಅಪರೂಪದ ನಾಣ್ಯಗಳು, ಭಗವಾನ್ ರಾಮನನ್ನು ಒಳಗೊಂಡ ಚಿನ್ನದ ನಾಣ್ಯವನ್ನು ಜ.6 ರಂದು ಮರುಧರ್ ಆರ್ಟ್ಸ್ ಹರಾಜು ಹಾಕಲಿದೆ. ಈ ಕಾರ್ಯಕ್ರಮವು ಭಾರತೀಯ ಇತಿಹಾಸಕ್ಕೆ ಸೇರಿದ ಅಪರೂಪದ ನಾಣ್ಯಗಳ ಸಂಗ್ರಹವನ್ನು ಪ್ರದರ್ಶಿಸುತ್ತದೆ.

10–11 ನೇ ಶತಮಾನದ ಹೊಯ್ಸಳ ರಾಜವಂಶದ ಚಿನ್ನದ ನಾಣ್ಯವನ್ನು ಹರಾಜು ಮಾಡಲಾಗುವುದು ಎಂದು ಮರುಧರ್ ಆರ್ಟ್ಸ್ ನಿರ್ದೇಶಕ ಆರ್ಚಿಮಾರು ತಿಳಿಸಿದ್ದಾರೆ. 5–7 ಲಕ್ಷ ಬೆಲೆಯಲ್ಲಿ ಹರಾಜು ಆಗುವ ಅಂದಾಜಿದೆ, 4 ಗ್ರಾಂ ನಾಣ್ಯ (14.54 ಮಿಮೀ ವ್ಯಾಸ) ಸಂಕೀರ್ಣವಾದ ವಿನ್ಯಾಸಗಳನ್ನು ಹೊಂದಿದೆ. ನಾಣ್ಯದ ಒಂದು ಬದಿಯಲ್ಲಿ, ಸಿಂಹವು ಬಲಕ್ಕೆ ನಡೆಯುವುದನ್ನು ಚಿತ್ರಿಸಲಾಗಿದೆ. ಅದರ ದೇಹವು ಚುಕ್ಕೆಗಳು ಮತ್ತು ಗುಳಿಗೆಗಳಿಂದ ಕೂಡಿದೆ.

ಸಿಂಹದ ಹಿಂಭಾಗದಲ್ಲಿ, ಭಗವಾನ್ ರಾಮನು ಬಿಲ್ಲು ಮತ್ತು ಬಾಣದೊಂದಿಗೆ ನಿಂತಿರುವಂತೆ ತೋರಿಸಲಾಗಿದೆ. ಸೂರ್ಯ ಮತ್ತು ಚಂದ್ರರು ಬಲ ಮತ್ತು ಎಡ ಸ್ಥಾನದಲ್ಲಿರುತ್ತಾರೆ, ಇದು ಶಾಶ್ವತ ಅಧಿಕಾರ ಮತ್ತು ಕಾಸ್ಮಿಕ್ ಸಮತೋಲನವನ್ನು ಸೂಚಿಸುತ್ತದೆ. ನಾಣ್ಯದ ಇನ್ನೊಂದು ಬದಿಯಲ್ಲಿ 'ಶ್ರೀ ನೊಳಂಬವಾಡಿಗೊಂಡ' ಎಂಬ ಕನ್ನಡ ಬರಹಗಳಿವೆ.

ಬಸ್ ಪ್ರಯಾಣ ದರ ಏರಿಕೆಗೆ ಸಾರ್ವಜನಿಕರ ಆಕ್ರೋಶ

ಅಗತ್ಯ ವಸ್ತುಗಳ ಬೆಲೆ ಏರಿಕೆ ನಡುವೆ ಮತ್ತಷ್ಟು ಸಂಕಷ್ಟ

ಮೈಸೂರು,ಜ.5(ಪಿಎಂ)– ನಾಲ್ಕು ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು, ಇದರ ನಡುವೆ ಶೇ.15ರಷ್ಟು ದುಬಾರಿ ಪ್ರಯಾಣ ದರ ನಿಗದಿ ಮಾಡಿರುವುದು ಬಡವರು, ಮಧ್ಯಮ ವರ್ಗವನ್ನು ಸಂಕಷ್ಟಕ್ಕೆ ದೂಡಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿವೆ.



ಸಿದ್ದರಾಮಯ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ನೀಡಿ, ಇದೀಗ ಏಕಾಏಕಿ ಬಸ್ ಪ್ರಯಾಣ ದರ ಏರಿಕೆ ಮಾಡಿರುವುದು ಸರಿಯಲ್ಲ. ಇದರಿಂದ ಹೆಚ್ಚಾಗಿ ಸಾರಿಗೆ ಅವಲಂಬಿಸಿರುವ ಬಡ ಹಾಗೂ ಮಧ್ಯಮ ವರ್ಗದವರಿಗೆ ಸಮಸ್ಯೆಯಾಗಲಿದೆ. ಮಹಿಳೆಯರಿಗೆ ಪ್ರಯಾಣಕ್ಕೆ ಶಕ್ತಿ ಯೋಜನೆಯಡಿ ಉಚಿತ ಪ್ರಯಾಣಕ್ಕೆ ಅವಕಾಶ ಇರಬಹುದು. ಆದರೆ ಬಹುತೇಕ ಕುಟುಂಬಗಳಲ್ಲಿ ಪುರುಷರು ಹೊರ ಹೋಗಿ ದುಡಿಯುತ್ತಾರೆ. ಅವರೇನು ಮಾಡಬೇಕು. ಜೊತೆಗೆ ವಿದ್ಯಾರ್ಥಿಗಳು ಹಾಗೂ ಉದ್ಯೋಗಸ್ಥರ ಬಸ್ ಪಾಸ್‌ಗಳಿಗೆ ದರ ಏರಿಕೆ ಸಹಜವಾಗಿ ಆಗಲಿದೆ.

–ಚಂದ್ರಶೇಖರ್, ಕ್ಯಾತಮಾರನಹಳ್ಳಿ ನಿವಾಸಿ.



ಮಹಿಳೆಯರಿಗೆ ಉಚಿತ ಮಾಡಿ, ಶೇ.15ರಷ್ಟು ಪ್ರಯಾಣ ದರ ಹೆಚ್ಚಳದ ಮೂಲಕ ಪುರುಷರಿಗೆ ಏಕೆ ತೊಂದರೆ ಕೊಡುತ್ತೀರಿ. ಶಕ್ತಿ ಯೋಜನೆಯಿಂದ ಉಂಟಾಗಿರುವ ನಷ್ಟ ಸರಿದೂಗಿಸಲು ಪುರುಷರ ಜೇಬಿಗೆ ಏಕೆ ಕತ್ತರಿ ಹಾಕುತ್ತೀರಿ. ಮಹಿಳೆಯರಿಗೆ ನೀಡಿರುವ ಉಚಿತ ಪ್ರಯಾಣ ಹಿಂಪಡೆದು, ಗಾರ್ಮೆಂಟ್ಸ್ ಸೇರಿದಂತೆ ವಿವಿಧ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರಿಗೆ ಶಕ್ತಿ ಯೋಜನೆ ಸೀಮಿತಗೊಳಿಸಿ, ನಿಜವಾಗಲೂ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕಿರುವುದು ಈ ಮಹಿಳಾ ವರ್ಗಕ್ಕೆ ಹೊರತು, ಎಲ್ಲರಿಗೂ ಅಲ್ಲ. **–ಎಂ.ಮಂಜುನಾಥ, ಕೆಆರ್ ನಗರ ನಿವಾಸಿ**



ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಹಾಗೂ ಖಾಸಗಿ ವಲಯದಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ಪ್ರಯಾಣ ಉಚಿತ ಮಾಡಲಿ. ಅಗತ್ಯಕ್ಕೆ ತಕ್ಕಂತೆ ಉಚಿತ ಪ್ರಯಾಣಕ್ಕೆ ಕಿ.ಮೀ. ನಿಗದಿಗೊಳಿಸುವುದು ಸೂಕ್ತ. ಸುಮ್ಮನೆ ಎಲ್ಲಾ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸಿ, ಸಾರಿಗೆ ಸಂಸ್ಥೆಗೆ ನಷ್ಟ ಉಂಟು ಮಾಡುವುದರಲ್ಲಿ ಅರ್ಥವಿಲ್ಲ. ಅದು ಸೂಕ್ತವೂ ಅಲ್ಲ.

–ಬಿ.ಶಿವಕುಮಾರ್, ಉರಗ ಸಂರಕ್ಷಕ



ಶೇ.15ರಷ್ಟು ಪ್ರಯಾಣ ದರ ಏರಿಕೆ ವಿಪರೀತವಾಯಿತು. ಈ ಪ್ರಮಾಣದ ಏರಿಕೆ ದುರದೃಷ್ಟಕರ. ಮಹಿಳೆಯರಿಗೆ ಸಂಪೂರ್ಣವಾಗಿ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿರುವುದನ್ನು ಹಿಂಪಡೆದು, ಅಗತ್ಯತೆ ಇರುವ ಮಹಿಳೆಯರಿಗೆ ಇಂತಿಷ್ಟು ಕಿ.ಮೀ.ಗೆಂದು ಉಚಿತವಾಗಿ ಪ್ರಯಾಣಿಸಲು ಅನುವು ಮಾಡಲಿ. ಅಂದರೆ ಮಹಿಳಾ ಕಾರ್ಮಿಕರು ತಮ್ಮ ದುಡಿಮೆಯ ಸ್ಥಳಗಳಿಗೆ ಹೋಗಲು ಅವಕಾಶ ಕಲ್ಪಿಸಲಿ. ನಿಜವಾಗಲೂ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಬೇಕಿರುವುದು ಇಂತಹ ದುಡಿಯುವ ಮಹಿಳೆಯರಿಗೆ ಹೊರತು, ಸುಖಾಸುಮ್ಮನೆ ಎಲ್ಲರಿಗೂ ಅಲ್ಲ. ಈಗಾಗಲೇ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ತತ್ತರಿಸಿದ್ದಾರೆ. ಕೂಡಲೇ ಪರಿಶೀಲಿಸಿ ಹೆಚ್ಚಳ ಮಾಡಿರುವ ಪ್ರಯಾಣ ದರ ಕೈಬಿಡಬೇಕು. **–ಶೇಷಾದ್ರಿ, ಛಾಯಾಗ್ರಾಹಕರು, ಮೈಸೂರು ನಿವಾಸಿ.**



ಅಗತ್ಯ ವಸ್ತುಗಳ ದರ ಗಗನಕ್ಕೇರಿರುವ ಸಂದರ್ಭದಲ್ಲಿ ಇದೀಗ ಭಾರೀ ಪ್ರಮಾಣದಲ್ಲಿ ಬಸ್ ದರ ಏರಿಕೆ ಮಾಡಿರುವುದು ಸೂಕ್ತವಲ್ಲ. ಈ ರೀತಿ ಎಲ್ಲದಕ್ಕೂ ದರ ಏರಿಸುತ್ತಾ ಹೋದರೆ ಬಡವರು, ಮಧ್ಯಮ ವರ್ಗದವರು ಜೀವನ ಸಾಗಿಸುವುದೇ ದುಸ್ತರವಾಗಲಿದೆ. ಸರ್ಕಾರ ಪ್ರಯಾಣ ದರ ಏರಿಕೆ ಮಾಡುತ್ತಿದ್ದಂತೆ ಆಟೋ ಪ್ರಯಾಣ ದರದೊಂದಿಗೆ ಖಾಸಗಿ ಬಸ್‌ಗಳಲ್ಲೂ ಪ್ರಯಾಣದ ದರ ದುಬಾರಿಯಾಗಲಿದೆ. ಮಹಿಳೆಯರಿಗೆ ಪ್ರಯಾಣಿಸಲು ಉಚಿತ ಮಾಡಿದ್ದಾರೆ. ಆದರೆ ಅವರು ಆರಂಭದಲ್ಲಿ ಓಡಾಡಿದರು. ಈಗ ಮಹಿಳೆಯರು ಪ್ರಯಾಣಿಸುವುದು ಕಡಿಮೆಯಾಗಿದೆ. ಪ್ರಸ್ತುತದ ಪರಿಸ್ಥಿತಿ ಹೇಗಿದೆಯೆಂದರೆ 100 ರೂಪಾಯಿ ದುಡಿದರೆ, ಕೇವಲ 20 ರೂಪಾಯಿ ಉಳಿಸಿಕೊಳ್ಳುವುದೂ ಕಷ್ಟವಾಗಿದೆ. **–ಶಿವಕುಮಾರ್, ಚಿಕ್ಕಾಡೆ, ಪಾಂಡವಪುರ ತಾಲೂಕು.**



ಕೆಎಸ್‌ಆರ್‌ಟಿಸಿ ಬಸ್ ದರವನ್ನು ಶೇ.15ರಷ್ಟು ಹೆಚ್ಚಳ ಮಾಡಿ, ಜನ ಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ. ಈ ಹಿಂದೆ ಹಾಲಿನ ದರ ಏರಿಕೆ, ವಿದ್ಯುತ್ ದರ ಏರಿಕೆ, ಪಹಣಿ ದರ ಏರಿಕೆ, ಪೆಟ್ರೋಲ್–ಡೀಸೆಲ್ ದರ ಏರಿಕೆ, ಮುದ್ರಾಂಕ ಶುಲ್ಕದ ಏರಿಕೆ, ವಾಹನ ನೋಂದಣಿ, ದರ ನೀರಿನ ದರ ಏರಿಕೆ, ಶಾಲಾ–ಕಾಲೇಜುಗಳಲ್ಲಿ ಪಡೆಯುವ ಸರ್ಕಾರಿ ಶುಲ್ಕದ ಏರಿಕೆ, ಈ ರೀತಿ ಹತ್ತು ಹಲವು ದರದ ಏರಿಕೆಯನ್ನು ಮಾಡಿಕೊಂಡು ಬರುತ್ತಿರುವ ಕಾಂಗ್ರೆಸ್ ಸರ್ಕಾರ ಇದೀಗ ಕೆಎಸ್‌ಆರ್‌ಟಿಸಿಯ ಬಸ್ ದರವನ್ನು 15ರಷ್ಟು ಏರಿಸುವ ಮೂಲಕ ಬಡ, ಮಧ್ಯಮ ವರ್ಗದ ಜನರ ಬದುಕಿನ ಮೇಲೆ ಶಾಶ್ವತ ಗೋರಿ ಕಟ್ಟುವಂತೆ ಮಾಡಿದೆ.

– ಕೆ.ವಸಂತಕುಮಾರ್, ಉಪಾಧ್ಯಕ್ಷರು, ವೀರವನಿತೆ ರಾಣಿಚೆನ್ನಮ್ಮ ಸ್ವಯಂ ಸೇವಾ ಸಂಘ



ಅಗತ್ಯ ಬೆಲೆಯೇರಿಕೆ ನಡುವೆ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಶೇ.15ರಷ್ಟು ಏರಿಕೆಯಾಗಿರುವುದು ಗಾಯದ ಮೇಲೆ ಬರೆ ಎಳೆದಂತೆ. ಸಾರಿಗೆ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಬಸ್ ಟಿಕೆಟ್ ಘೋಷಿಸಿ, ಅದರ ನಷ್ಟವನ್ನು ಪುರುಷರ ಮೇಲೆ ಹಾಕುತ್ತಿರುವುದು ಖಂಡನೀಯ.

– ಎಂ.ಎಸ್.ಸತ್ಯಾನಂದ ವಿಟ್ಟು, ಟಿ.ಕೆ.ಬಡಾವಣೆ ನಿವಾಸಿ



ಹಾಲಿನ ದರ, ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಕರ್ನಾಟಕ ಜನತೆ, ಇದೀಗ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಗಾಯದ ಮೇಲೆ ಬರೆ ಎಳೆದಂತೆ. ಈ ನಿರ್ಧಾರವನ್ನು ರಾಜ್ಯ ಸರ್ಕಾರ ಪುನರ್ ಪರಿಶೀಲಿಸಬೇಕು.

– ಮಧು, ದಟ್ಟಗಳ್ಳಿ ನಿವಾಸಿ

5 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ



ಮೈಸೂರಿನ 42ನೇ ವಾರ್ಡ್‌ನಲ್ಲಿ ಶಾಸಕ ಕೆ.ಹರೀಶ್‌ಗೌಡ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು,ಜ.5(ಎಂಟಿವೈ)– ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮೈಸೂರು ಮಹಾನಗರಪಾಲಿಕೆಯ ವಾರ್ಡ್ ನಂ.42ರಲ್ಲಿ 5 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರಿನ ಸರಸ್ವತಿಪುರಂನ 4ನೇ ಮುಖ್ಯ ರಸ್ತೆಯಿಂದ ಹಾದು ಹೋಗುವ ಮಳೆ ನೀರು ಚರಂಡಿ ನಿರ್ಮಾಣ, ಟಿಟಿಎಲ್ ಕಾಲೇಜು ಮುಂಭಾಗದಿಂದ ಫೈರ್ ಬ್ರಿಗೇಡ್‌ವರೆಗೆ ಚರಂಡಿ ಮತ್ತು ಪಾದಚಾರಿ ಮಾರ್ಗ ಹಾಗೂ ಫೈರ್ ಬ್ರಿಗೇಡ್‌ನಿಂದ ಏಕಲವ್ಯ ವೃತ್ತದವರೆಗೆ ರಸ್ತೆಗಳ ಅಭಿವೃದ್ಧಿ ಕಾಮಗಾರಿ, ಜೆಎಲ್‌ಬಿ ರಸ್ತೆಯ ಮುಡಾ ಕಚೇರಿ ಬಳಿಯಿಂದ ಹಳೇ ಜಿಲ್ಲಾಧಿಕಾರಿ ಕಚೇರಿಯವರೆಗೆ, ಜಿಲ್ಲಾ ನ್ಯಾಯಾಲಯದ ಮುಂಭಾಗದ ರಸ್ತೆ ಹಾಗೂ ಇತರೆ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಮೈಸೂರಿನ ಪ್ರಮುಖ ಕಟ್ಟಡಗಳು, ಶಿಕ್ಷಣ ಸಂಸ್ಥೆಗಳು ಇರುವ ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ಪಣ ತೊಟ್ಟಿದ್ದು, ಕ್ಷೇತ್ರ ನಿವಾಸಿಗಳ ಬೇಡಿಕೆಗಳಿಗೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಆದ್ಯತೆ ಮೇರೆಗೆ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ. ಈಗಾಗಲೇ ಹಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಇದೀಗ ಪಾಲಿಕೆ 42ನೇ ವಾರ್ಡ್ ವ್ಯಾಪ್ತಿಗೆ ಸೇರಿದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್‌ಗಳಾದ ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಭಾಸ್ಕರ್‌ಗೌಡ, ರಾಜಣ್ಣ, ಶ್ರೀನಿವಾಸ್, ಬಂದಿಗೌಡ, ವಿಶ್ವನಾಥ್, ನಾಗರಾಜು, ಬ್ಲಾಕ್ ಅಧ್ಯಕ್ಷ ರವಿ, ದೀಪು ಪ್ರದೀಪ್, ಮಹೇಶ್, ಸತೀಶ್, ಗಿರೀಶ್, ಪಾಲಿಕೆ ವಲಯ ಕಚೇರಿ–3ರ ಅಧಿಕಾರಿಗಳಾದ ಸತ್ಯಮೂರ್ತಿ, ಮಧುಸೂದನ್, ತೇಜಸ್ವಿನಿ ಇನ್ನಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದಂದು ಲಾಂಗ್‌ನಲ್ಲಿ ಕೇಕ್ ಕತ್ತರಿಸಿ ಜೈಲು ಪಾಲಾದ ಯುವಕ

ಮೈಸೂರು, ಜ.5(ಬಿಎಲ್‌ಯು)– ಹುಟ್ಟುಹಬ್ಬದ ಸಂಭ್ರಮದ ವೇಳೆ ಲಾಂಗ್‌ನಿಂದ ಕೇಕ್ ಕತ್ತರಿಸಿ ಸೋಷಿಯಲ್ ಮೀಡಿಯಾದಲ್ಲಿ ವಿಡಿಯೋ ಹರಿಬಿಟ್ಟ ಯುವಕ ಜೈಲುಪಾಲಾಗಿರುವ ಘಟನೆ ಮೈಸೂರಿನ ಗೌಸಿಯಾ ನಗರದಲ್ಲಿ ನಡೆದಿದೆ. ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಗೌಸಿಯಾನಗರದ ತಬ್ರೇಜ್ ಎಂಬಾತನೆ ಬಂಧನಕ್ಕೊಳಗಾದ ಆರೋಪಿ. ಜ.2ರಂದು ಸ್ನೇಹಿತರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಳ್ಳುವ ವೇಳೆ ತಬ್ರೇಜ್ ಲಾಂಗ್‌ನಿಂದ ಕೇಕ್ ಕತ್ತರಿಸಿ, ಈ ವಿಡಿಯೋವನ್ನು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದ. ಈ ವಿಚಾರ ಪೊಲೀಸರಿಗೆ ತಿಳಿಯಿತು. ಮಾರಕಾಸ್ತ್ರ ಹೊಂದುವುದು ಅಪರಾಧವಾದ ಹಿನ್ನೆಲೆ ಉದಯಗಿರಿ ಪೊಲೀಸರು ತಬ್ರೇಜ್‌ನನ್ನು ಬಂಧಿಸಿದ್ದಾರೆ. ತರುವಾಯ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಒಳ ಮೀಸಲಾತಿ ವಿಚಾರದಲ್ಲಿ ಬಿಜೆಪಿ ನಾಯಕರು ಜನರ ದಿಕ್ಕು ತಪ್ಪಿಸುತ್ತಿದ್ದಾರೆ

ಮೈಸೂರು,ಜ5(ಎಂಟಿವೈ)–ಒಳ ಮೀಸಲಾತಿ ಜಾರಿ ಕುರಿತಂತೆ ಬಿಜೆಪಿ ನಾಯಕರು ತಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏನೂ ಮಾಡದೇ ಇದೀಗ ಮೊಸಳೆ ಕಣ್ಣೀರು ಸುರಿಸುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಹುನ್ನಾರ ನಡೆಸುತ್ತಿದ್ದಾರೆ ಎಂದು ರಾಜ್ಯ ಆದಿಜಾಂಬವ ಸಂಘದ ವಿಭಾಗೀಯ ಸಮಿತಿ ಅಧ್ಯಕ್ಷ ಎಡತೊರೆ ನಿಂಗರಾಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಕೆಲ ನಾಯಕರು ಹಾಗೂ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಕೆಲ ಮುಖಂಡರು ಒಳ ಮೀಸಲಾತಿ ಕುರಿತು ಸರ್ಕಾರಕ್ಕೆ ಗಡುವು ನೀಡುವುದರೊಡನೆ, ಹೋರಾಟ ನಡೆಸುವುದಾಗಿ ಎಚ್ಚರಿಕೆ ಹೇಳಿಕೆ ನೀಡಿದ್ದಾರೆ. ಆದರೆ ಇವರೆಲ್ಲ ಬಿಜೆಪಿ ಸರ್ಕಾರವಿದ್ದಾಗ ಏಕೆ ಮೌನವಾಗಿದ್ದರು. ಕಳೆದ 30 ವರ್ಷಗಳಿಂದ ನಿರಂತರವಾಗಿ ನಡೆದ ಒಳ ಮೀಸಲಾತಿ ಹೋರಾಟದ ಫಲವಾಗಿ ಅಂದಿನ ಕಾಂಗ್ರೆಸ್ ಸರ್ಕಾರದ ವೇಳೆ ಎಸ್.ಎಂ.ಕೃಷ್ಣ ಅವರು ನ್ಯಾಯಮೂರ್ತಿ ಸದಾಶಿವ ಆಯೋಗ ರಚಿಸಿದ್ದರು. ಇದು ಸುಮಾರು 7 ವರ್ಷ ರಾಜ್ಯಾದ್ಯಂತ ಸಮಗ್ರ ಅಧ್ಯಯನ ನಡೆಸಿ ವರದಿ ನೀಡಿತ್ತು. 2012ರಲ್ಲಿ ಸಿಎಂ ಸದಾನಂದಗೌಡರ ಬಿಜೆಪಿ ಸರ್ಕಾರದ ಅವಧಿಯಲ್ಲಿ ವರದಿಯನ್ನು ತೆರೆದು ನೋಡಲಿಲ್ಲ ಎಂದು ಆರೋಪಿಸಿದರು.

2022ರಲ್ಲಿ ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದ ವೇಳೆ ಸಂಪುಟದಲ್ಲಿದ್ದ ಜೆ.ಸಿ.ಮಾಧುಸ್ವಾಮಿ ನೇತೃತ್ವದಲ್ಲಿ ರಚಿಸಿದ ಉಪ ಸಮಿತಿಯು ಆಯೋಗದ ವರದಿಯನ್ನು ಮೂಲೆಗುಂಪು ಮಾಡಿತು. ಈ ವೇಳೆ ಎಳ್ಳಷ್ಟೂ ಧ್ವನಿಯೆತ್ತದ ಈ ವಕೀಲರು ಈಗ ಸಿಎಂ ಸಿದ್ದರಾಮಯ್ಯ ಅವರ ಸರ್ಕಾರವನ್ನು ಟೀಕಿಸುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಆಯೋಗದ ವರದಿ ಆಧಾರದ ಮೇಲೆ ಒಳ ಮೀಸಲಾತಿ ಜಾರಿಗೊಳಿಸುವ ಸಲುವಾಗಿ ಸಿಎಂ ಸಿದ್ದರಾಮಯ್ಯ ಅವರು ಪರಿಶಿಷ್ಟ ಜಾತಿಯ ಎಲ್ಲ ಸಚಿವರು ಹಾಗೂ ಶಾಸಕರೊಡನೆ ಸಭೆ ನಡೆಸಿ ಸರ್ವ ಸಮ್ಮತಿಯೊಡನೆ ಪ್ರಾಯೋಗಿಕ ದತ್ತಾಂಶ ಸಂಗ್ರಹಿಸಿ, ಒಳಮೀಸಲಾತಿ ಜಾರಿಗೊಳಿಸಲು ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಆಯೋಗ ನೇಮಕ ಮಾಡಿ ಮೂರು ತಿಂಗಳ ಕಾಲಾವಕಾಶ ನೀಡಿದ್ದಾರೆ. ಈಗಾಗಲೇ ಸಲಹೆ, ಆಕ್ಷೇಪಣೆ, ಅಹವಾಲು, ಹೇಳಿಕೆ, ದಾಖಲೆಗಳನ್ನು ನೀಡುವಂತೆ ಆಹ್ವಾನಿಸಲಾಗಿದೆ ಎಂದರು.

ಒಳಮೀಸಲಾತಿ ಜಾರಿ ಸಂಬಂಧ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಕೇವಲ ಪ್ರಚಾರಕ್ಕಾಗಿ ಬಿಜೆಪಿ ವಕೀಲರು ಸರ್ಕಾರದ ನಿರ್ಧಾರವನ್ನು ಟೀಕಿಸುತ್ತಿರುವುದು ಖಂಡನಾರ್ಹ ಹಾಗೂ ಕೀಳುಮಟ್ಟದ್ದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆಯುವ ನಾಯಕರಾಗಿದ್ದು, ಶೀಘ್ರದಲ್ಲಿ ವರದಿ ಜಾರಿ ಮಾಡುವ ಮೂಲಕ ಅನೇಕ ಸಮುದಾಯಗಳಿಗೆ ನ್ಯಾಯ ಒದಗಿಸಲಿದ್ದಾರೆ. ಇದರಲ್ಲಿ ಯಾವುದೇ ಸಂಶಯವಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ರಾಜ್ಯ ಆದಿಜಾಂಬವ ಸಂಘದ ವಿಭಾಗೀಯ ಸಮಿತಿ ಪದಾಧಿಕಾರಿಗಳಾದ ಡಿ.ಕುಮಾರ್, ವಿಜಯಕುಮಾರ್, ಬಾಲರಾಜು, ಕೆ.ಆರ್. ರಾಚಯ್ಯ, ಸ್ವಾಮಿ, ಪ್ರಕಾಶ್ ಇದ್ದರು.

ವಿಕಲಚೇತನರ ಬಸ್ ಪಾಸ್ ನವೀಕರಣಕ್ಕೆ ಅರ್ಜಿ

ಮೈಸೂರು: ಕ.ರಾ.ರ.ಸಾ ನಿಗಮದ ವತಿಯಿಂದ 2024ನೇ ಸಾಲಿನಲ್ಲಿ ವಿತರಿಸಿರುವ ಪಾಸ್‌ಗಳನ್ನು 2025 ಫೆಬ್ರವರಿ 28ರವರೆಗೆ ಮಾನ್ಯತೆಮಾಡಲಾಗಿದ್ದು, ವಿಕಲಚೇತನರ ರಿಯಾಯಿತಿ ಬಸ್ ಪಾಸ್ ಹೊಂದಿರುವವರು ರಿಯಾಯಿತಿ ಬಸ್ ಪಾಸ್ ಅನ್ನು ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಬಸ್ ನಿಲ್ದಾಣದಲ್ಲಿ ನವೀಕರಿಸಲಾಗುವುದರಿಂದ ಪಾಸ್‌ಗಳನ್ನು ಜ.15ರಿಂದ ಫೆಬ್ರವರಿ 28ರವರೆಗೆ ಕೆ.ಆರ್. ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಬಸ್ ನಿಲ್ದಾಣದಲ್ಲಿ ನವೀಕರಿಸಲಾಗುವುದು. ಅಭ್ಯರ್ಥಿಗಳು https://sevasindhuservices.karnataka.gov.inನ ಮೂಲಕ ತಮ್ಮ ವಿವರಗಳೊಂದಿಗೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿಯನ್ನು ಸಲ್ಲಿಸಿದ ನಂತರ ಪ್ರಿಂಟ್‌ನೊಂದಿಗೆ ಮೂಲ ಯುಡಿಐಡಿ ಕಾರ್ಡ್‌ನ್ನು ಪರೀಶಿಲನೆಗೆ ತೋರಿಸಿ ಜೊತೆಗೆ ಫಲಾನುಭವಿಗಳು ರೂ.660ಗಳನ್ನು ನಗದು ರೂಪದಲ್ಲಿ ಪಾವತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ "Legal Aid Defence Counsel System" (LADCS) ಕಚೇರಿಯಲ್ಲಿ ಖಾಲಿ ಇರುವ ಮುಖ್ಯ ಕಾನೂನು ಸಹಾಯ ರಕ್ಷಣಾ ಸಲಹೆಗಾರ (01) ಉಪ ಕಾನೂನು ನೆರವು ರಕ್ಷಣಾ ಸಲಹೆಗಾರ (02) ಮತ್ತು ಸಹಾಯಕ ಕಾನೂನು ನೆರವು ರಕ್ಷಣಾ ಸಲಹೆಗಾರರ (02) ಹುದ್ದೆಗಳ ನೇಮಕಾತಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಎರಡು ವರ್ಷದ ಅವಧಿಗೆ ಮಾಸಿಕ ವೇತನವನ್ನು ನೀಡಿ, ಗುತ್ತಿಗೆ ಆಧಾರದ ಮೇಲೆ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಅರ್ಜಿಯನ್ನು ಪಡೆದು, ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಜನವರಿ 10 ರೊಳಗೆ ಜಯನಗರ, 5ನೇ ಕ್ರಾಸ್‌ನಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದಿನೇಶ್ ಬಿ.ಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಿದ್ದಗಂಗಾಶ್ರೀಗಳ ಪುಣ್ಯಸ್ಮರಣೆ, ಪೂರ್ವಭಾವಿ ಸಭೆ



ನಡೆದಾಡುವ ದೇವರು ಟ್ರಸ್ಟ್ ಅಧ್ಯಕ್ಷ ಮಂಜುನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಬಸವ ಕೇಂದ್ರದಲ್ಲಿ ಸಿದ್ದಗಂಗಾ ಶ್ರೀಗಳ ಭಕ್ತವೃಂದದ ಸಭೆ ನಡೆಯಿತು.

ಮೈಸೂರು, ಜ.5– ಕೋಟ್ಯಂತರ ಭಕ್ತರ ಭಾವಕೋಶದಲ್ಲಿ ನೆಲೆಯಾಗಿರುವ ನಡೆದಾಡಿದ ದೇವರು ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ 6ನೇ ವರ್ಷದ ಪುಣ್ಯಸ್ಮರಣೆಯನ್ನು ಮೈಸೂರಿನ ಜಗನ್‌ಮೋಹನ ಪ್ಯಾಲೇಸ್‌ನಲ್ಲಿ ಜ.26ರಂದು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಆಚರಿಸಲು ನಿರ್ಧರಿಸಲಾಗಿದೆ.

ಬೆಂಗಳೂರಿನ ನಡೆದಾಡುವ ದೇವರು ಟ್ರಸ್ಟ್ ಅಧ್ಯಕ್ಷ ಮಂಜುನಾಥ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ಬಸವಕೇಂದ್ರದಲ್ಲಿ ನಡೆದ ಸಿದ್ದಗಂಗಾ ಶ್ರೀಗಳ ಭಕ್ತವೃಂದದ ಸಭೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆ, ತಾಲೂಕು, ಹೋಬಳಿ ಸೇರಿದಂತೆ ಪ್ರತಿ ಗ್ರಾಮಗಳಲ್ಲಿ ಸಿದ್ದಗಂಗಾಶ್ರೀಗಳ ಪುಣ್ಯಸಂಸ್ಮರಣೆ ಕಾರ್ಯಕ್ರಮವನ್ನು ದಾಸೋಹದಿನವನ್ನಾಗಿ ಆಚರಣೆ ಮಾಡಲು ಕಾರ್ಯಕ್ರಮ ರೂಪಿಸಬೇಕೆಂದು ತೀರ್ಮಾನಿಸಲಾಯಿತು.

ಶ್ರೀ ಸಿದ್ದಗಂಗಾ ಮಠದಲ್ಲಿ ಜ.21ರಂದು ಪೂಜ್ಯರ ಸಂಸ್ಮರಣಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ನಡೆಸಲಾಗುತ್ತಿದೆ. ನಾಡೋಜ ಗೊ.ರು. ಚನ್ನಬಸಪ್ಪ ಅವರಿಗೆ ಶಿವಕುಮಾರ ಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಶ್ರೀಮಠದಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದ್ದು, ಜ.26ರಂದು ಮೈಸೂರಿನಲ್ಲಿ ನಡೆಯುವ ದಾಸೋಹ ದಿನಾಚರಣೆ ಯಶಸ್ವಿಗೆ ಎಲ್ಲಾ ಸಂಘಟನೆಗಳ ಮುಖಂಡರು, ಸಾರ್ವಜನಿಕರು ಸಹಕರಿಸಬೇಕೆಂದು ಮಂಜುನಾಥ ಸ್ವಾಮೀಜಿ ಮನವಿ ಮಾಡಿದರು.

ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, 111 ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ಜಾತಿ ಮತ ಪಂಥಗಳೆನ್ನದೆ ಸರ್ವರಿಗೂ ಅನ್ನ, ಅಕ್ಷರ, ಆಸರೆಯಂತಹ ತ್ರಿವಿಧ ದಾಸೋಹವನ್ನು ನೀಡಿದ ಮಹಾನ್ ಸಂತ ಸಿದ್ದಗಂಗಾ ಶ್ರೀಗಳ ಸೇವೆ ಅವಿಸ್ಮರಣೀಯವಾಗಿದೆ ಎಂದರು. ಅಣ್ಣ ಬಸವಣ್ಣನವರ ಅನುಭವಮಂಟಪವನ್ನು ಸಿದ್ದಗಂಗಾ ಮಠದಲ್ಲಿ ಮಾತ್ರ ಕಾಣಲು ಸಾಧ್ಯವಾಗುತ್ತದೆ. ಶೈಕ್ಷಣಿಕ ಕ್ರಾಂತಿಯಿಂದ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದನ್ನು ಇಡೀ ವಿಶ್ವಕ್ಕೆ ತೋರಿಸಿಕೊಟ್ಟ ಸಿದ್ದಗಂಗಾಶ್ರೀಗಳು ಭೌತಿಕವಾಗಿ ನಮ್ಮನ್ನಗಲಿ 6 ವರ್ಷಗಳು ಕಳೆದಿವೆ. ನಾಡಿನಾದ್ಯಂತ ಸ್ವಾಮೀಜಿಯವರ ಪುಣ್ಯಸ್ಮರಣೆಯನ್ನು ಅನ್ನದಾಸೋಹ ಮಾಡುವ ಮೂಲಕ ಆಚರಿಸಲಾಗುತ್ತಿದ್ದು, ಪೂಜ್ಯರ ಸಂಸ್ಮರಣೆಯನ್ನು ಸರ್ಕಾರ ದಾಸೋಹ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಒತ್ತಾಯಿಸಿದರು.

ಜಾನಪದ ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಹಾಗೂ ಬಿಜೆಪಿ ಮುಖಂಡ ಡಾ.ಕೆ.ವಸಂತ ಕುಮಾರ್ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿರುವ ಮಠಾಧೀಶರು, ನೂರಾರು ಬಸವಪರ ಹಾಗೂ ವೀರಶೈವ ಲಿಂಗಾಯತ ಸಮುದಾಯದ ಸಂಘಟನೆಗಳ ಸಹಯೋಗದೊಂದಿಗೆ ಜಾತ್ಯತೀತ, ಪಕ್ಷಾತೀತವಾಗಿ ಎಲ್ಲರನ್ನೂ ಒಗ್ಗೂಡಿಸಿಕೊಂಡು ದಾಸೋಹದಿನಾಚರಣೆ ಮಾಡಬೇಕೆಂದು ಸಲಹೆ ನೀಡಿದರು. ಬಿಜೆಪಿ ಮುಖಂಡರಾದ ದಾರಿಪುರ ಡಿ.ಚಂದ್ರಶೇಖರ್, ಸಾಹಿತಿ ಕೆಪಿಟಿಸಿಎಲ್ ಇಂಜಿನಿಯರ್ ಟಿ.ತ್ಯಾಗರಾಜ್, ಗಿರೀಶ್ ಹರವೆ, ಸಾಹಿತಿ ನಿಶಾಮುಳುಗುಂದ ಕಾರ್ಯಕ್ರಮದ ಯಶಸ್ವಿಗೆ ಸಲಹೆ ನೀಡಿದರು.